
ಸಂಪುಟ 15
ಸಂಚಿಕೆ 34

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕ

29 ಆಗಸ್ಟ್ 1993
ರೂ. 4.00



ಐಎಂಎಫ್ ಗುಲಾಮರ ನಿಲ್ಲದ ಓಟ

- ನೀಚ ಬಜೆಟ್
- ಶೇರು ಹಗರಣ
- ಪೇಟೆಂಟ್ - ಡಂಕೆಲ್
- ಕನಿಷ್ಟ ಕೂಲಿ

ಅಯೋಧ್ಯಾಕಾಂಡ

- ಸಂವಿಧಾನಕ್ಕೆಸವಾಲೆಸೆದರು
- ಕೋಮುವಾದಿಗಳರಾಜ್ಯಭಾರ
- ಮುಂದುವರಿಯುತ್ತಿರುವ ನಿಷ್ಕ್ರಿಯತೆ
- ಮಾನವ ಸರಪಳಿ
- ಕೋಮು ಗಲಭೆಗಳ ಹಿಂದೆ ಪಿತೂರಿ





ಇವಲ್ಲದೆ

- ಎಡರಂಗ ಸರಕಾರದ ಪಾತ್ರ
- ಮೀಸಲಾತಿಏಕೆ?
- ಪರಿಸರಚಳುವಳಿಗಳು
- ಬರಗಾಲದರಾಜಕೀಯ ಅರ್ಥಶಾಸ್ತ್ರ
- ಕವನಗಳು
- ಇತಿಹಾಸದಪುಟಗಳಿಂದ

"ಐಕ್ಯರಂಗ" ಬಿತ್ತುವ ಅರಿವು ಕರ್ನಾಟಕದ ಎಲ್ಲೆಡೆಗೆ ಪಸರಿಸಲಿ

"ಐಕ್ಯರಂಗ" ಕನ್ನಡದ ಪತ್ರಿಕೆಗಳಲ್ಲಿ ಒಂದು ವಿಶಿಷ್ಟ ಪತ್ರಿಕೆ. ಕನ್ನಡದಲ್ಲಿ ವಾರಪತ್ರಿಕೆಯೆಂದರೇ ಸಾಕು ಅದೊಂದು ಸಾಂಸ್ಕೃತಿಕ ಪತ್ರಿಕೆಯೆಂದೇ ಅರ್ಥ. ಸುಧಾ, ತರಂಗ, ಕರ್ಮವೀರ ಮತ್ತಿತರ ಪತ್ರಿಕೆಗಳು ಇದಕ್ಕೆ ಉದಾಹರಣೆ. ಲಂಕೇಶ್ ಪತ್ರಿಕೆ, ಕೆಂಬಾವುಟ ಇಂತಹ ಒಂದೆರಡು ಪತ್ರಿಕೆಗಳಷ್ಟೇ ಕನ್ನಡದ ರಾಜಕೀಯ ಪತ್ರಿಕೆಗಳು. ಇಂತಹ ಪರಿಸರದಲ್ಲಿ "ಐಕ್ಯರಂಗ" ಒಂದು ರಾಜಕೀಯ ವಾರಪತ್ರಿಕೆಯಾಗಿ ಮೂವತ್ತು ವರ್ಷಗಳಿಂದ ಹೊರಬರುತ್ತಿದೆ.

"ಐಕ್ಯರಂಗ" ಒಂದು ಸಣ್ಣ ವಾರಪತ್ರಿಕೆಯಾದರೂ ನಿರಂತರವಾಗಿ ಓದುಗರಿಗೆ ಉತ್ತಮ ವಿಷಯಗಳನ್ನು ಒದಗಿಸಲು ಶ್ರಮಿಸಿದ ಪತ್ರಿಕೆ. ಕರ್ನಾಟಕದ ಬಗ್ಗೆ, ಭಾರತದ ಬಗ್ಗೆ ವೈಜ್ಞಾನಿಕ ದೃಷ್ಟಿಕೋನವನ್ನು ಕೊಡಲು ಪ್ರಯತ್ನಿಸುತ್ತಿರುವ ಪತ್ರಿಕೆ. ಜನರನ್ನು ವಿಚಾರಕ್ಕೆ ಹಚ್ಚುವ ಪತ್ರಿಕೆಯಾಗಿ ಬೆಳೆದಿದೆ. ತನ್ನ ವಿಷಯ ವ್ಯಾಪ್ತಿಯನ್ನು, ಅದನ್ನು ಮಂಡಿಸುವ ರೀತಿಯನ್ನು, ಬರಹದ ಶೈಲಿಯನ್ನು ನಿರಂತರವಾಗಿ ಉತ್ತಮಗೊಳಿಸುವ ವಿವಿಧ ಪ್ರಯೋಗಗಳನ್ನು ನಡೆಸುತ್ತಾ ಸಾಗಿದೆ. ಪತ್ರಿಕೆಯ ವಿನ್ಯಾಸ, ಮುದ್ರಣದ ತಂತ್ರಜ್ಞಾನವನ್ನು ಗಮನಾರ್ಹ ರೀತಿಯಲ್ಲಿ ಉತ್ತಮಗೊಳಿಸಿಕೊಂಡಿದೆ.

ಹಿಂದೆ ಓಡಲು ಪ್ರಯತ್ನಿಸುತ್ತಾ ಇದ್ದೆವು

ಇಷ್ಟೆಲ್ಲಾ ಪ್ರಯತ್ನಗಳನ್ನು ನಡೆಸಿಯೂ ತನ್ನ ಸೀಮಿತ ಸಂಪನ್ಮೂಲಗಳಿಂದಾಗಿ ಐಕ್ಯರಂಗ ಕನ್ನಡದ ಪ್ರಮುಖ ಮುಖ ಪತ್ರಿಕೆಗಳೊಂದಿಗೆ ಅನೇಕ ವಿಚಾರಗಳಲ್ಲಿ ಸ್ಪರ್ಧಿಸುವುದು ಹೆಚ್ಚಿನ ಪ್ರಸಾರಕ್ಕಾಗಿ ಸ್ಪರ್ಧಿಸುವುದು ಅಸಾಧ್ಯದ ಮಾತಾಗಿತ್ತು. ಹೀಗಾಗಿ ನಿರಂತರವಾಗಿ ಈ ಪತ್ರಿಕೆಗಳ ಮಟ್ಟಕ್ಕೇರುವ ಯತ್ನದಲ್ಲಿಯೇ ಇದ್ದೆವು. ಯಾವಾಗಲೂ ಆ ಪತ್ರಿಕೆಗಳು ಮುಂದೋಡುತ್ತಿದ್ದರೆ ನಾವು ಅವುಗಳ ಹಿಂದೆ ಓಡಲು ಪ್ರಯತ್ನಿಸುತ್ತಾ ಇದ್ದೆವು(ಒಂದು ವಿಷಯದಲ್ಲಿಯಂತೂ ಈ ಎಲ್ಲಾ ಪತ್ರಿಕೆಗಳೊಡನೆ ಯಾವುದೇ ರೀತಿಯಲ್ಲಿ ಸ್ಪರ್ಧಿಸುವುದು ಸಾಧ್ಯವಿಲ್ಲ ಬಿಡಿ. ವ್ಯಾಪಾರದ ದೃಷ್ಟಿಯಿಂದ ಅಸಹ್ಯಕರ ಚಿತ್ರಗಳನ್ನು ಲೈಂಗಿಕ ಕಾಮನೆಗಳನ್ನು ಬಣ್ಣಿಸುವ ಕಥೆಗಳನ್ನು ಪ್ರಕಟಿಸುವುದರಲ್ಲಿ ನಮ್ಮಿಂದ ಎಂದೆಂದೂ ಸಾಧ್ಯವಿಲ್ಲ).

ಹಿಂದೂಡುವ ಸಂದರ್ಭವೂ ಬಂದೇ ಬಿಟ್ಟಿತು

ಆದರೆ ಇದ್ದಕ್ಕಿದ್ದಂತೆ ಎಲ್ಲರೂ ನೋಡ ನೋಡುವಷ್ಟರಲ್ಲಿಯೇ "ಐಕ್ಯರಂಗ" ಎಲ್ಲರನ್ನು ಹಿಂದೆ ಹಾಕಿ ಮುಂದೆ ಸಾಗುವ ಸಂದರ್ಭವೂ ಬಂದೇ ಬಿಟ್ಟಿತು. ಸಂಪನ್ಮೂಲಗಳಲ್ಲಿ, "ಐಕ್ಯರಂಗ"ದ ಮಿತಿಗಳಲ್ಲಿ ಯಾವುದೇ ವ್ಯತ್ಯಾಸವಾಗದೆಯೂ ಕೂಡ ಕೇವಲ 8 ಪುಟಗಳ, ಇಬ್ಬರು ಮುದ್ರಣ ಸಿಬ್ಬಂದಿಯ, ಯಾವುದೇ ಪೂರ್ಣ ಸಮಯದ ಸಂಪಾದಕೀಯ ಸಿಬ್ಬಂದಿಯಿಲ್ಲದ ನಾವು 20 ಪುಟಗಳ ರಾಜಕೀಯ ವಾರ ಪತ್ರಿಕೆಗಳನ್ನು, 50-60 ಪುಟದ ಸಾಂಸ್ಕೃತಿಕ ವಾರ ಪತ್ರಿಕೆಗಳನ್ನು ಅಷ್ಟೇ ಏಕೆ, ಬೃಹತ್ ಸಂಪನ್ಮೂಲದ ದಿನಪತ್ರಿಕೆಗಳನ್ನು ಹಿಂದೂಡುವ ದಿನ ಬಂದೇ ಬಂತು.

ಕೇವಲ ತನ್ನ ವಿಚಾರದ ಬಲದಿಂದ ಸ್ಫಟಿಕದಷ್ಟು ಸ್ಪಷ್ಟವಾದ ದೃಷ್ಟಿಕೋನದಿಂದ "ಐಕ್ಯರಂಗ" ಉಳಿದ ಪತ್ರಿಕೆಗಳೊಡನೆ ಸ್ಪರ್ಧೆಯಲ್ಲಿ ವಿಜಯ ಗಳಿಸಿತು. ಇದು ಹೇಗೆ? ಈ ಮಹಾನ್ ಭೀಮ ಬಲದ ಪತ್ರಿಕೆಗಳೊಡನೆ "ಐಕ್ಯರಂಗ" ಗೆಲ್ಲುವುದು ಸಾಧ್ಯವೇ?

ಐಕ್ಯರಂಗವನ್ನು ಮತ್ತೊಮ್ಮೆ ತಿರುಗಿಸಿ ನೋಡಿ

ನೋಡಿ "ಐಕ್ಯರಂಗ"ದ ಸಂಚಿಕೆಗಳನ್ನು ಮತ್ತೊಮ್ಮೆ ತಿರುಗಿಸಿ ನೋಡಿ. ಬೇರೆಲ್ಲಾ ಪತ್ರಿಕೆಗಳನ್ನು ಪಕ್ಕದಲ್ಲಿಟ್ಟು ನೋಡಿ. ಕರ್ನಾಟಕದ ರೈತರ, ಜನ ಸಾಮಾನ್ಯರ ಮನಸ್ಸನ್ನು ಕಲಕಿದ "ಡಂಕೆಲ್ ಪ್ರಸ್ತಾವ"ಗಳ ಬಗ್ಗೆ ಮೊಟ್ಟ ಮೊದಲು(4 ವರ್ಷಗಳ ಹಿಂದೆಯೇ) ಜನರ ಗಮನ ಸೆಳೆದ ಪತ್ರಿಕೆ "ಐಕ್ಯರಂಗ". ನರಸಿಂಹ ರಾಯರ ಎಡೆಬಿಡಂಗಿ ನೀತಿಯನ್ನು ಐಎಂಎಫ್ ಗುಲಾಮಗಿರಿಯನ್ನು ಮೊದಲು ಬಯಲಿಗೆಳೆದ ಪತ್ರಿಕೆ "ಐಕ್ಯರಂಗ". ಡಂಕೆಲ್ ಪ್ರಸ್ತಾವಗಳ ಬಗ್ಗೆ ಯಾವ ಪತ್ರಿಕೆಯೂ ನೀಡದ ವಿವರಗಳನ್ನು ನಿರಂತರವಾಗಿ ನೀಡುತ್ತಾ ಬಂದ ಪತ್ರಿಕೆ "ಐಕ್ಯರಂಗ". ಮನಮೋಹನಸಿಂಗರ ಮನಮೋಹಕ ಬಜೆಟ್‌ಗಳ ಬಗ್ಗೆ ಕನ್ನಡ ಪತ್ರಿಕೆಗಳು ದಂಗುಬಡೆದು ಕೂತಿದ್ದಾಗ, ಇಂಗ್ಲಿಷಿನ ಪತ್ರಿಕೆಗಳು ಉದ್ದೇಶಪೂರ್ವಕವಾಗಿ ಬಚ್ಚಿಡುತ್ತಿದ್ದಾಗ, ಮನಮೋಹನಾಸ್ತ್ರಕ್ಕೆ ಬಲಿ ಬಿದ್ದ ದುರ್ಯೋಧನನ ಸೈನ್ಯದಂತೆ ಮಲಗಿದ್ದಾಗ ಬಚ್ಚಿಟ್ಟ ವಿಷಯಗಳನ್ನು ಬಿಚ್ಚಿಟ್ಟ ಪತ್ರಿಕೆ "ಐಕ್ಯರಂಗ". ರೂಪಾಯಿ ಪರಿವರ್ತನೀಯತೆ ಎಂದರೇನು ಇದೇನಿದು? ಎಂದು ಹೇಳಲು ಕರ್ನಾಟಕದ ಮಹಾನ್ ಅರ್ಥಶಾಸ್ತ್ರಜ್ಞರುಗಳೇ ದೂರದರ್ಶನದಲ್ಲಿ ಕನ್ನಡದ ಪತ್ರಿಕೆಗಳಲ್ಲಿ ತೊದಲುತ್ತಿದ್ದಾಗ ಅದರ ಎಲ್ಲಾ ವಿವರಗಳನ್ನು ಪ್ರಕಟಿಸಿ ಜನರನ್ನು ಎಚ್ಚರಿಸಿದ ಪತ್ರಿಕೆ "ಐಕ್ಯರಂಗ".

ಇನ್ನು ಡಿ. 6 - ಆ ಮಹಾನ್ ಕರಾಳ ದಿನ ಕನ್ನಡದ ಅನೇಕ ಪತ್ರಿಕೆಗಳ ದೃಷ್ಟಿದೋಷವನ್ನು ಚೆನ್ನಾಗಿ ಬಯಲಿಗೆಳೆದ ದಿನ. ಸರ್ವ ಸಾಮಾನ್ಯವಾಗಿ ಜಾತ್ಯಾತೀತ ದೃಷ್ಟಿಯನ್ನೇ ಬಹಳ ಕನ್ನಡದ ಪತ್ರಿಕೆಗಳು ತಳೆದರೂ ಅಯೋಧ್ಯೆಯಲ್ಲಿ ನಡೆದ ಆ ಘಟನೆಯ ಎಲ್ಲಾ ಕರಾಳ ಮುಖಗಳು ಕನ್ನಡದ ಇತರ ಪತ್ರಿಕೆಗಳಲ್ಲಿ ಹೊರಬೀಳಲಿಲ್ಲ. ಕೋಮು ಗಲಭೆಗಳ ದುಷ್ಟ ಕಥೆಗಳು ಕನ್ನಡ ಜನರ ಮನವನ್ನು ಸೆಳೆಯುವಂತೆ ಮಾಡಲಿಲ್ಲ. ಇದನ್ನು ಸಾಧಿಸಿದ ಪತ್ರಿಕೆ "ಐಕ್ಯರಂಗ". "ಅಯೋಧ್ಯಾ ಕಾಂಡ"ವೆಂಬ ಒಂದು ವಿಶೇಷ ಸಂಚಿಕೆಯನ್ನೇ ತಂದದ್ದು "ಐಕ್ಯರಂಗ" ಮಾತ್ರ. ಪ್ರತಿವಾರ ಅಯೋಧ್ಯಾಕಾಂಡವೆಂಬ ಪುಟದಲ್ಲಿ ನಿರಂತರವಾಗಿ ಕೋಮುವಾದವನ್ನು ಸೆಣಸಿ, ಜಾತ್ಯಾತೀತತೆಯನ್ನು ಉಳಿಸಲಿಕ್ಕಾಗಿ ಪ್ರಯತ್ನಿಸುವ ಎಲ್ಲರ ಮನಸ್ಸುಗಳಿಗೆ ಮುದತಂದ ಅವರ ಕೈಗಳಿಗೆ ಬಲ ನೀಡಿದ ಪತ್ರಿಕೆ "ಐಕ್ಯರಂಗ".

ಐಕ್ಯರಂಗದ ಸತ್ವ

ಇಷ್ಟೆಲ್ಲಾ ದಾಖಲೆಗಳು "ಐಕ್ಯರಂಗ"ದಂತಹ ಪತ್ರಿಕೆಗೆ ಹೇಗೆ ಸಾಧ್ಯ? ಹೇಗೆ ಸಾಧ್ಯ?

ಇಲ್ಲೇ ಇರುವುದು, "ಐಕ್ಯರಂಗ"ದ ಸತ್ವ. "ಐಕ್ಯರಂಗ" ಕರ್ನಾಟಕದ ದುಡಿಯುವ ಜನಗಳ ಪತ್ರಿಕೆ. ಕರ್ನಾಟಕದ ಕಾರ್ಮಿಕ ವರ್ಗದ ಪತ್ರಿಕೆ, ಕಾರ್ಮಿಕ ವರ್ಗದ ಆ ಧೀರ ಸಮರ್ಥಕನಾದ ಸಿಪಿಐ(ಎಂ)ನ ಮುಖವಾಣಿ. ದೇಶದ ಪ್ರಮುಖ ಸಮಸ್ಯೆಗಳಿಗೆ ಉತ್ತಮ ಪರಿಹಾರ ಸೂಚಿಸುತ್ತಿರುವ, ಆ ಪರಿಹಾರಕ್ಕಾಗಿ ಪ್ರಾಣವನ್ನು ಪಣಕ್ಕಿಟ್ಟು ಹೋರಾಡುತ್ತಿರುವ ಸಿಪಿಐ(ಎಂ)ನ ಪತ್ರಿಕೆ "ಐಕ್ಯರಂಗ". ಕನ್ನಡದ ಉಳಿದೆಲ್ಲಾ ಪತ್ರಿಕೆಗಳೂ ಶ್ರೀಮಂತರ ಒಡೆತನದ ವ್ಯಾಪಾರ ಮಾತ್ರ. ಹೆಚ್ಚೆಂದರೆ ಮಧ್ಯಮ ವರ್ಗದ ಅಭಿಪ್ರಾಯಗಳ ಅಭಿವ್ಯಕ್ತಿ ಮಾತ್ರ. ಇದರಲ್ಲಿ ಅನೇಕ ಉತ್ತಮ ಅಭಿಪ್ರಾಯಗಳು, ವಿಚಾರಗಳು ಬರುತ್ತಿವೆ. ಅದಕ್ಕೆಲ್ಲಾ ನಮ್ಮ ಸ್ವಾಗತವಿದೆ. ಆದರೆ ಈ ಪತ್ರಿಕೆಗಳ ಮಿತಿ - ವೈಚಾರಿಕ ಮಿತಿ ಈಗ ಬಯಲಿಗೆ ಬಿದ್ದಿದೆ. "ಐಕ್ಯರಂಗ" ವೈಚಾರಿಕತೆಯ ಬಲ, ವಿಶ್ಲೇಷಣೆಯ ಸಾಮರ್ಥ್ಯ, ಹೋರಾಟಗಾರರ ಜೊತೆ ಹೂಡಿ ಹೋರಾಟಕ್ಕಿಳಿಯುವ ಮನಸ್ಸು ಇವು ಕನ್ನಡದ ಎಲ್ಲಾ ದುಡಿಯುವ ಜನಕ್ಕೆ ತಿಳಿಯಬೇಕು.

"ಐಕ್ಯರಂಗ"ದ ಈ ಬಲ "ಐಕ್ಯರಂಗ"ದ ಓದುಗರಿಗೆ ಗೊತ್ತಾಗಿದೆ. ಗೊತ್ತಿಲ್ಲದವರಿಗೆ ಈ ಅರಿವನ್ನು ಹಂಚುವ ಕೆಲಸ "ಐಕ್ಯರಂಗ"ದ ಓದುಗರದಾಗಬೇಕು. "ಐಕ್ಯರಂಗ"ದ ಓದುಗರೇ ನಮ್ಮ ಮಾರಾಟಗಾರರೂ ಆಗಬೇಕು. "ಐಕ್ಯರಂಗ" ದುಡಿಯುವ ಜನರೆಲ್ಲರಿಗೆ, ದೇಶದ ಅದರ ಸಂದೇಶ ಇಂದಿನ ಪರಿಸ್ಥಿತಿಯಿಂದ ಗೊಂದಲಗೊಂಡಿರುವ ಎಲ್ಲರಿಗೆ ತಿಳಿಯಬೇಕು.

- ನಾಗರಾಜ್ ಜಿ. ಎನ್.

ಸಾಗಿದೆ ಸಮರ, ಹೇಳಿ ನೀವು ಯಾರ ಕಡೆ?



ಮುಂಬೈ ಗಲಭೆಗಳು ಇಂದಿನ ಭಾರತದ ರಾಜಕೀಯ ಚಿತ್ರವನ್ನು ಮನಸ್ಸಿಗೆ ನಾಟುವ ರೀತಿಯಲ್ಲಿ ಬಿಚ್ಚಿಟ್ಟಿವೆ. ನೀವು ಅವರನ್ನು ಬೆಂಬಲಿಸಬೇಕು. ಅಲ್ಲವೇ ಅವರನ್ನು ವಿರೋಧಿಸಬೇಕು. ನಾನು ತಟಸ್ಥನಾಗಿರುತ್ತೇನೆ ಎಂಬುದನ್ನು ಅಸಾಧ್ಯಗೊಳಿಸಿದ ಘಟನೆಯಿದು. ಸರ್ವವ್ಯಾಪಿ ಕೋಮುವಾದದ ಅಲೆಗಳು ತಾವು ತಟಸ್ಥರು ಎಂದು ನಂಬಿದ್ದವರ ಭ್ರಮಾಲೋಕವನ್ನು ಮುಳುಗಿಸಿಬಿಟ್ಟಿದೆ. ಡಿಸೆಂಬರ್,- ಜನವರಿ ತಿಂಗಳಲ್ಲಿ ಭಾರತ ದೇಶ ಬಹುಶಃ ಮೊದಲ ಬಾರಿಗೆ ಜೀವ-ಆಸ್ತಿಗಳ ಬಗ್ಗೆ ಅತ್ಯಂತ ರಾಕ್ಷಸೀ ನಿರ್ಲಕ್ಷ್ಯವನ್ನು ತೋರಿತು. ಆಸ್ತಿಯೆಂದರೆ ದೊಡ್ಡ ದೊಡ್ಡ ಕುಳಗಳ ಆಸ್ತಿಯಲ್ಲ ಸ್ವಾಮಿ- ಸಣ್ಣ ಪುಟ್ಟ ವ್ಯಾಪಾರಿಗಳ, ಸಣ್ಣ ಸಣ್ಣ ಸ್ಟೇಶನರಿ ಅಂಗಡಿ, ಬೇಕರಿ, ಹೋಟೆಲು, ವಿಡಿಯೋಪಕರಣಗಳ ಅಂಗಡಿಗಳು. ಬಹುಶಃ ಇದುವರೆಗೂ ಯಾವುದರ ಉಸಾಬರಿಯೂ ಬೇಡ ಎಂದು ತಮ್ಮ ಲೋಕದಲ್ಲೇ ಇದ್ದ "ಗೌರವಾರ್ಹ ಜಂಟಲ್‌ಮನ್"ಗಳು, ಇತ್ತೀಚೆಗೆ ಶ್ರೀಮಂತರಾದ ಮಧ್ಯಮ ವರ್ಗಗಳ ಜನ ಕೂಡಾ ಮೊತ್ತ ಮೊದಲ ಬಾರಿಗೆ (ಪೋಲೀಸ್ ಆಡಳಿತದಲ್ಲಿ ನಂಬಿಕೆ ಕಳೆದುಕೊಂಡು) ಆಧುನಿಕ ಹೂಣರ ಆಕ್ರಮಣಗಳಿಂದ ಆತ್ಮರಕ್ಷಣೆಯ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಯಿತು.

ನಿರಾಶಾದಾಯಕ ಲೋಕಸಭಾ ಚುನಾವಣೆಗಳ ಫಲಿತಾಂಶ

ಕಾಂ. ಸುರ್ಜೀತ್

ಚುನಾವಣಾ ಫಲಿತಾಂಶ ಕಂಡ ದೇಶದ ಪ್ರಜಾಪ್ರಭುತ್ವ ಜನಸಮೂಹಗಳಿಗೆ ತುಸು ನಿರಾಶೆಯಾಗಿರಬಹುದು. ದೇಶ ಎದುರಿಸುತ್ತಿರುವ ಗಂಭೀರ ಸವಾಲುಗಳನ್ನು ಎದುರಿಸಲು ಎಲ್ಲೆಡೆ ವ್ಯಾಪಿಸಿರುವ ಬಿಕ್ಕಟ್ಟನ್ನು ಎದುರಿಸಲು ಒಂದು ನಿರ್ಣಾಯಕ ಜನಾದೇಶ ಸಿಗಬಹುದೆಂದು ಅವರು ನಿರೀಕ್ಷಿಸಿದ್ದರು. ಕಾಂಗ್ರೆಸ್(ಐ) ಹೆಚ್ಚಿನ ಸ್ಥಾನಗಳನ್ನು ಪಡೆದರೂ ಸ್ಪಷ್ಟ ಬಹುಮತ ಪಡೆದಿಲ್ಲ. ಲೋಕಸಭೆಯಲ್ಲಿ ಬಿಜೆಪಿ ಎರಡನೇ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವುದು ದೇಶದ ಜಾತ್ಯಾತೀತ ಆಧಾರಕ್ಕೇ ಒಂದು ಗಂಭೀರ ಅಪಾಯ.

ಬಿಜೆಪಿಯ ಬಲ ಅಪಾಯಕಾರಿ ಮಟ್ಟಕ್ಕೆ ಏರಿರುವುದು ದೇಶದ ಜಾತ್ಯಾತೀತ ಜನಾಭಿಪ್ರಾಯಕ್ಕೆ ಆತಂಕವುಂಟುಮಾಡಿರುವ ಸಂಗತಿ. ಈ ಅಪ್ಪಟ ಕೋಮುವಾದಿ ಸಂಘಟನೆ ಕಳೆದ ಚುನಾವಣೆಗಳಿಗಿಂತ ಶೇಕಡಾ ಹತ್ತು ಮತಗಳನ್ನು ಹೆಚ್ಚು ಪಡೆಯಲು ಸಮರ್ಥವಾಗಿದೆ. ದೇಶದ ಅತ್ಯಂತ ದೊಡ್ಡ ಅತೀ ಹೆಚ್ಚು ಜನಸಂಖ್ಯೆಯ ಉತ್ತರ ಪ್ರದೇಶದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಕೇಂದ್ರದಲ್ಲಿ ಕೋಮುವಾದಿ ಪ್ರಚಾರದಿಂದಲೂ ಅಧಿಕಾರ ಗಿಟ್ಟಸಲು ಸಾಧ್ಯವಾಗಿಲ್ಲ ಎಂದು ನಿರಾಸೆಯಾಗಿದ್ದರೂ ಆ ಪಕ್ಷದ ಮುಖಂಡರು ಚುನಾವಣೆಯ ನಂತರದ ತಮ್ಮ ಪ್ರತಿಕ್ರಿಯೆಗಳಲ್ಲಿ ಇನ್ನಷ್ಟು ಆಕ್ರಾಮಕ ನಿಲುವು ತಳೆಯುತ್ತಿದ್ದಾರೆ. ವಿಶೇಷವಾಗಿ ಅಯೋಧ್ಯೆಯ ವಿವಾದಗ್ರಸ್ತ ಸ್ಥಳದಲ್ಲಿ ದೇವಸ್ಥಾನ ಕಟ್ಟುವ ವಿಷಯದಲ್ಲಿ ಕಾಂಗ್ರೆಸ್(ಐ)ನ ಒಟ್ಟು ಸ್ಥಾನಗಳು ಕಳೆದ .ಬಾರಿಗಿಂತ ಹೆಚ್ಚಿದ್ದರೂ ಅದರ ಮತಗಳಿಕೆ ಕಡಿಮೆಯಾಗಿರುವುದು ಕಂಡು ಬಂದಿದೆ. ಸ್ಥಾನಗಳು ಹೆಚ್ಚಲು ಮುಖ್ಯ ಕಾರಣ ರಾಜೀವ್ ಗಾಂಧಿಯವರ ಭೀಕರ ಕೊಲೆಯಿಂದ ಉಂಟಾದ ಸಹಾನುಭೂತಿಯಿಂದಾಗಿ. ಕಾಂಗ್ರೆಸ್(ಐ)ನಂತಹ ದೊಡ್ಡ ಪಕ್ಷ ಈ ಭೀಕರ ಹತ್ಯೆಯ ಹಿಂದೆ ದೇಶಕ್ಕೆ ಒಡ್ಡಿರುವ ಅಪಾಯದ ಬಗ್ಗೆ, ದೇಶವನ್ನು ಅಸ್ಥಿರಗೊಳಿಸಲು ಸದಾ ಪ್ರಯತ್ನಿಸುವ ಸಾಮ್ರಾಜ್ಯಶಾಹಿಯ ವಿರುದ್ಧ ಜನರನ್ನು ಜಾಗೃತಗೊಳಿಸುವ ಬದಲು ಅದನ್ನು ಕೇವಲ ಸಂಕುಚಿತ ಚುನಾವಣಾ ಲಾಭಕ್ಕಾಗಿ ಕಾಂಗ್ರೆಸ್ಸೇತರ ಪಕ್ಷಗಳ ವಿರುದ್ಧ ಮುಯ್ಯಿ ತೀರಿಸಲು ದುರುಪಯೋಗ ಪಡಿಸಿಕೊಂಡಿರುವುದು ದುರದೃಷ್ಟಕರ. ದೇಶದ ಜನತೆಗೆ ಕಾಂಗ್ರೆಸ್(ಐ)ನ ಈ ಆಟ ಅರ್ಥವಾದರೂ ಕೇವಲ ಸಹಾನುಭೂತಿಯಿಂದ ಕಾಂಗ್ರೆಸ್(ಐ)ಗೆ ಮತ ನೀಡಿದ್ದಾರೆ.

ಜೂನ್ 30, 1991

ಕೋಮು ಗಲಭೆಗಳ ಹಿಂದೆ ಸಾಮ್ರಾಜ್ಯಶಾಹಿ ಪಿತೂರಿ

- ಬಿ.ಟಿ. ರಣದಿವೆ



'ಇತ್ತೀಚೆಗಿನ ದಿನಗಳಲ್ಲಿ ನಮ್ಮ ದೇಶದ ವಿವಿಧೆಡೆ ಭುಗಿಲೆದ್ದಿರುವ ಕೋಮುವಾರು ಗಲಭೆಗಳು ಕೇವಲ ಯಾವುದೇ ಧರ್ಮದ ಅನುಯಾಯಿಗಳ ನಡುವೆ ನಡೆಯುತ್ತಿರುವ ಸಾಮಾನ್ಯ ಕಚ್ಚಾಟ ಅಲ್ಲ; ಇಂತಹ ಗಲಭೆಗಳ ಹಿಂದೆ ಸಾಮ್ರಾಜ್ಯಶಾಹಿಗಳ ಸುವ್ಯವಸ್ಥಿತವಾದ ಪಿತೂರಿ ಇದೆ. ಐಕ್ಯತೆಯನ್ನು ನುಚ್ಚುನೂರಾಗಿಸುವ ಉದ್ದೇಶವನ್ನು ಹೊಂದಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಈ ಕೋಮುವಾದಿ ಮತ್ತು ಛಿದ್ರಕಾರಿ ಶಕ್ತಿಗಳ ಹಿಂದೆ ನಿಂತು ಗಲಭೆಗಳಿಗೆ ಪ್ರೇರೇಪಣೆ ನೀಡುತ್ತಿವೆ' ಎಂಬುದಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಬಿ. ಟಿ. ರಣದಿವೆ ತಿಳಿಸಿದ್ದಾರೆ. ಜುಲೈ 29 ರಂದು ಬೆಂಗಳೂರು ಜಿಲ್ಲಾ ಸಮಿತಿ ಏರ್ಪಡಿಸಿದ್ದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದರು.

ಆಗಸ್ಟ್ 5, 1986

ನನ್ನ ಹೆಣದ ಮೇಲೆ ನಡೆದಪ್ಟೇ...... ಮಸೀದಿ ಕೆಡವಲು ಸಾಧ್ಯ

- ಸ್ವಾಮಿ ಲಾಲ್‌ದಾಸ್
ಅಯೋಧ್ಯೆಯ ರಾಮ ದೇವಾಲಯ ಮಹಂತ

"..........ನನ್ನ ಹೆಣವನ್ನು ತುಳಿದಷ್ಟೇ ಅವರು ಬಾಬ್ರಿ ಮಸೀದಿ ಕೆಡವಲು, ಮಂದಿರ ಕಟ್ಟಲು ಸಾಧ್ಯ.... ಮಾತ್ರವಲ್ಲ. ಕೋಮು ಸೌಹಾರ್ದತೆಯನ್ನು ತಮ್ಮ ಜೀವನದ ಭಾಗವಾಗಿಸಿಕೊಂಡಿರುವ ಅಯೋಧ್ಯೆಯ ನಿವಾಸಿಗಳ ಮೃತ ದೇಹಗಳನ್ನು ತುಳಿದು ಅವರು ಮುಂದುವರಿಯಬೇಕಾಗುತ್ತದೆ........" ಎಂಬ ಸ್ವಾಮಿ ಲಾಲ್ ದಾಸ್‌ರವರ ಮಾತುಗಳಲ್ಲಿ ರೋಷ, ಮಾನವೀಯತೆಯ ಬಗ್ಗೆ ಬದ್ಧತೆ ತುಂಬಿದೆ.

ಈ ವ್ಯಕ್ತಿ ಓರ್ವ ಮುಸ್ಲಿಂ ಮತಭ್ರಾಂತನಾಗಲಿ, ತಲೆ ಹಿಡುಕ ಹಿಂದು ಸ್ವಾಮಿಯಾಗಲೀ ಅಲ್ಲ. ಕೋಮುವಾದಿಗಳ ವಿಷಪೂರಿತ ಪ್ರಚಾರಗಳನ್ನು ಬೆದರಿಕೆಗಳನ್ನು ಎದುರಿಸಿ ಕೋಮುಸೌಹಾರ್ದತೆಯ ಸಂದೇಶವನ್ನು ಎತ್ತಿ ಹಿಡಿಯುವ ಅಯೋಧ್ಯೆಯ ಶ್ರೀ ರಾಮ ಮಂದಿರದ ಸ್ವಾಮಿ ಲಾಲ್ ದಾಸ್. ನ್ಯಾಯಾಲಯದ ಮೂಲಕ ನೇಮಿಸಲ್ಪಟ್ಟಿರುವ ಈ ಪೂಜಾರಿ ಬಾಬ್ರಿ ಮಸೀದಿ ಕೆಡವುದಕ್ಕೆ ವಿರೋಧವಿದ್ದಾರೆ. ಕೋಮುಸೌಹಾರ್ದತೆಗಾಗಿ ತನ್ನ ಪ್ರಾಣವನ್ನು ಒತ್ತೆ ಇಡಲೂ ಸ್ವಾಮಿ ಲಾಲ್ ದಾಸ್ ಸಿದ್ಧರಿದ್ದಾರೆ. ತಮ್ಮ ಕೋಮುಸೌಹಾರ್ದತಾದಾ ಮನೋಭಾವದಿಂದಾಗಿ ಹಿಂದು ಮತಭ್ರಾಂತರ ಕೆಂಗಣ್ಣಿಗೆ ಒಳಗಾದ ಇವರು ನಾಲ್ಕು ಬಾರಿ ಕೊಲೆ ಪ್ರಯತ್ನದಿಂದ ಪಾರಾಗಿದ್ದಾರೆ.

"ಕರೆಂಟ್" ಪತ್ರಿಕೆಯ ಸಂಪಾದಕ ಅಯೂಬ್‌ರವರು ಸ್ವಾಮಿ ಲಾಲ್‌ದಾಸ್‌ರವರೊಂದಿಗೆ ನಡೆಸಿದ ಸಂದರ್ಶನವನ್ನು ಕೆಳಗೆ ಕೊಡಲಾಗಿದೆ.

ಪ್ರಶ್ನೆ:

ಅಯೋಧ್ಯೆಯ ಈಗಿನ ಸ್ಥಿತಿಯ ಬಗ್ಗೆ ತಿಳಿಸಬಲ್ಲಿರಾ?

ಉತ್ತರ:

ಅಯೋಧ್ಯೆಯ ಹೆಸರಿನಲ್ಲಿ ಕೋಮುವಾದವು ಸ್ಫೋಟಕ ಸ್ಥಿತಿಗೆ ತಲುಪಿದೆ ಅಧಿಕಾರಿ ವರ್ಗದ ಕೆಲವರೂ ಕೂಡ ಇದರಲ್ಲಿ ಶಾಮಿಲಾಗಿದ್ದಾರೆ. ಅಯೋಧ್ಯೆಯ ಡಿ.ವೈ.ಎಸ್.ಪಿ. ಪ್ರತಾಪ್‌ಕುಮಾರ್ ಶರ್ಮನಂತವರ ಕಾರ್ಯವೈಖರಿ ಇದಕ್ಕೆ ಉದಾಹರಣೆಗಳಾಗಿವೆ. ದೆಹಲಿಯನ್ನು ಕೇಂದ್ರವನ್ನಾಗಿಸಿಕೊಂಡು ಕಾರ್ಯನಿರ್ವಹಿಸುವ ವಿಶ್ವಹಿಂದೂ ಪರಿಷತ್ (ವಿ.ಹೆಚ್.ಪಿ.) ಮುಖಂಡ ವೈದ್ಯನಾಥ್ ಲಾಲ್ ಶರ್ಮರ ಆದೇಶ ಅನುಸರಿಸಿಯಷ್ಟೇ ಇವರ ಹಲವು ಯೋಜನೆಗಳು ರೂಪಿಸಲ್ಪಡುತ್ತವೆ. ಜಿಲ್ಲಾ ಮುಖ್ಯ ನ್ಯಾಯಾಧೀಶರಾದ ಆರ್.ಎನ್. ಶ್ರೀವಾಸ್ತವರವರು ಸ್ವಾಮಿ ಚಿನ್ಮಾಯಾನಂದರ ಭಕ್ತರಾಗಿದ್ದಾರೆ. ಪೋಲೀಸ್ ಸೂಪರಿಂಟೆಂಡೆಂಟ್ ಜೋಷಿ ಕೂಡ ಉತ್ತರ ಪ್ರದೇಶ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್‌ರವರನ್ನು ಮೋಸಗೊಳಿಸುತ್ತಿದ್ದಾರೆ.

ಪ್ರಶ್ನೆ:

ಮುಖ್ಯಮಂತ್ರಿಗಳಿಗೆ ಇದು ತಿಳಿಯದೇ?

ಉತ್ತರ:

ಬಹುಶ: ತಿಳಿದಿಲ್ಲ. ಕಾರಣ, ರಾಜ್ಯದ ಗುಪ್ತಾಚಾರ ಇಲಾಖೆ ಪೋಲೀಸರು ನೀಡುವ ವರದಿಗಳಲ್ಲಿ ಹಲವು ವಿಹೆಚ್‌ಪಿ ಆಶಯಗಳಿಗೆ ಪೂರಕವಾಗಿಯೇ ಇರುತ್ತವೆ.

ಅಕ್ಟೋಬರ್ 28, 1990

ಚೇಳುಗಳೇ ಕಚ್ಚದಿರಿ

ಚೇಳುಗಳೇ ಕಚ್ಚದಿರಿ
ವಿಷದ ಕೊಂಡಿಯ ಚುಚ್ಚದಿರಿ
ಹಾಲು ಮನಸ್ಸಿನ ಮುದ್ದುಕೂಸುಗಳ
ತಲೆಗಳ ನೀವು ಕಚ್ಚದಿರಿ
ಜಾತಿ ವಿಷವನು ಬೆರೆಸದಿರಿ
ಕೋಮು ಭಾವದ ಕೊಂಡಿಯ ಎತ್ತಿ
ಚುಚ್ಚಿ ಗಾಯಗೊಳಿಸದಿರಿ
ದ್ವೇಷ ಭಾವನೆಯ ಬಿತ್ತದಿರಿ

ಭಾಷಾಂಧಕಾರದ ವಿಷದ ಮುಳ್ಳನು
ಮುಗ್ಧರ ಮೆದುಳಿಗೆ ಚುಚ್ಚದಿರಿ
ಚುಚ್ಚಿ ಹುಚ್ಚನು ಹಿಡಿಸದಿರಿ
ಮತ, ಧರ್ಮದ ಮೌಢ್ಯ ಭಾವವ
ಜನರ ಮನದಲ್ಲಿ ತುಂಬದಿರಿ
ತುಂಬಿದ ಐಕ್ಯವ ಮರಿಯದಿರಿ

ದೇಶ ಪ್ರೇಮದ ನೆತ್ತರು ಹೊತ್ತು
ಹರಿಯುವ ರಕ್ತ ನಾಳಗಳನ್ನು
ಕಚ್ಚಿ ಕಲಶಗೊಳಿಸದಿರಿ
ಒಗ್ಗಟ್ಟೆಂದು ಘೋಷಣೆ ಹಾಕುವ
ಗ್ಂಟಲುಗಳನು ಕಚ್ಚದಿರಿ
ಕಚ್ಚಿ ವಿಚ್ಛಿದ್ರಗೊಳಿಸದಿರಿ

-- ಹುಲಿಕಟ್ಟಿ ಚನ್ನಬಸಪ್ಪ
15-10-1989

ಕೇರಳದಲ್ಲಿ 700 ಕಿ.ಮಿ. ಉದ್ದದ ಮಾನವ ಸರಪಳಿ

ಸ್ವಾತಂತ್ರ್ಯ ದಿನಾಚರಣೆಯ ನಲವತ್ತನೇಯ ವಾರ್ಷಿಕೋತ್ಸವದಂದು ಕೇರಳದಲ್ಲಿ ಭಾರತ ಯುವಜನ ಫೆಡರೇಷನ್ ಕೊಟ್ಟ ಕರೆಯ ಮೇರೆಗೆ ಏರ್ಪಡಿಸಲಾಗಿದ್ದ 'ಮಾನವ ಸರಪಳಿ' ಅಭೂತಪೂರ್ವ ರೀತಿಯಲ್ಲಿ ಯಶಸ್ವಿಯಾಗಿ ಇತಿಹಾಸ ನಿರ್ಮಿಸಿದೆ. ಆರಂಭದಲ್ಲಿ ಮಾನವ ಸರಪಳಿಯೆಂದು ಯೋಜಿಸಲಾಗಿದ್ದ ಕಾರ್ಯಕ್ರಮ ಅದಕ್ಕೆ ದೊರೆತ ಅಪಾರ ಜನ ಬೆಂಬಲದಿಂದಾಗಿ ವಸ್ತುತಃ ಮಾನವ ಗೋಡೆಯಾಯಿತು. ದೇಶದ ಐಕ್ಯತೆಯನ್ನು ಒಡೆಯಲು ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ನಿರಂತರ ಪ್ರಯತ್ನ ಮತ್ತು ತಮ್ಮ ದೋಷಪೂರಿತ ಹಾಗೂ ಸಂದರ್ಭ ಸಾಧಕ ನೀತಿಗಳಿಂದಾಗಿ ಕೋಮುವಾರು, ವಿಭಜನವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳಿಗೆ ತಲೆಯೆತ್ತಲು ಅವಕಾಶ ಮಾಡಿಕೊಟ್ಟಿರುವ ಆಳುವ ವರ್ಗಗಳ ಧೋರಣೆಗಳಿಗೆದುರಾಗಿ ಜನತೆಯನ್ನು ಎಚ್ಚರಿಸಲು, ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ಪಣತೊಟ್ಟ ಈ 'ಮಾನವ ಗೋಡೆ ' ಭಾರತದಲ್ಲೇ ಮೊತ್ತ ಮೊದಲನೆಯದು.

ಆಗಸ್ಟ್ 23, 1987



ಅಯೋಧ್ಯಾ ವಿವಾದ:
ನಿಷ್ಕ್ರಿಯ ಸರಕಾರ ಶರಣಾಗುತ್ತಿದೆಯೇ?

"ಅಲ್ಲೇ ಮಾಡುತ್ತೇವೆ" ಎಂದು ಗಂಟಲು ಬಿರಿಯ ಕೂಗಾಡುತ್ತಾ, ನ್ಯಾಯಾಲಯದ ಆಜ್ಞೆ, ಪ್ರಜಾಪ್ರಭುತ್ವ ನೀತಿ, ನಿಯಮ, ಕಾನೂನುಗಳೆಲ್ಲಾ ತಮಗೆ ಅನ್ವಯಿಸುತ್ತಿಲ್ಲವೆಂಬಂತೆ ಕಳೆದ ಎರಡು ವಾರಗಳಿಂದ ವರ್ತಿಸುತ್ತಿದ್ದ, ಪ್ರಧಾನ ಮಂತ್ರಿಗಳನ್ನು, ಗೃಹಮಂತ್ರಿಗಳನ್ನು ಮೂದಲಿಸುತ್ತಿದ್ದ, ನ್ಯಾಯಾಧೀಶರ ಪ್ರತಿಕೃತಿಗಳನ್ನು ಸುಟ್ಟ ವಿ.ಹೆಚ್.ಪಿ.-ಭಜರಂಗದಳ, ಸಾಧು-ಸಂತರು ಇದ್ದಕ್ಕಿದ್ದಂತೆ ಪ್ರಧಾನಮಂತ್ರಿಗಳ 'ಅಪೀಲ' ನ್ನು ಪರಿಶೀಲಿಸುವ ಮಾತು ಕೇಳಬರುತ್ತಿದೆ ಏಕೆ? ಇನ್ನೊಂದೆಡೆ ಒಮ್ಮೆ ನ್ಯಾಯಾಲಯಗಳ ಅವಹೇಳನೆ ಮಾಡುವುದಿಲ್ಲ ಎಂದರೂ ಇನ್ನೊಮ್ಮೆ ನ್ಯಾಯಾಲಯದ ಆಜ್ಞೆಯನ್ನು ಜ್ಯಾರಿ ಮಾಡುವುದು ನಮಗೆ ಸಾಧ್ಯವಿಲ್ಲ ಎಂದು ಬೇಜವಾಬ್ದಾರಿಯಿಂದ ಹೇಳುವ, ಮತ್ತೊಮ್ಮೆ ದೇವಸ್ಥಾನ ನಿರ್ಮಾಣ ನ್ಯಾಯಾಲಯಗಳ ವ್ಯಾಪ್ತಿಯನ್ನು ಮೀರಿದ್ದು ಎಂದೆಲ್ಲಾ ಹೇಳುತ್ತಿದ್ದ ಬಿಜೆಪಿ ಮುಖಂಡವರ್ಯರುಗಳ ದನಿಯೂ ಇದ್ದಕ್ಕಿದ್ದಂತೆ ಬದಲಾಗಿದೆ. ಏಕೆ? ಅಯೋಧ್ಯೆಯಲ್ಲಿ ಸತತವಾಗಿ ನ್ಯಾಯಾಲಯದ ಆಜ್ಞೆಗಳ ಉಲ್ಲಂಘನೆಯಾಗುತ್ತಿದ್ದರೂ, ಅದು ಕಣ್ಣಾರೆ ಕಂಡುಬಂದರೂ, ತಮ್ಮದೇ ಪಕ್ಷದ ಸದಸ್ಯರೂ ಕೂಡಾ ಸರಕಾರ ತನ್ನ ನಿಲುವನ್ನು ಸ್ಪಷ್ಟಗೊಳಿಸಬೇ[...] ಎಂದು ಒತ್ತಾಯಿಸಿದರೂ ವಾರವಿಡೀ ಸಂಸ[...] ಕಡೆಗೆ ಪ್ರಧಾನಿಗಳು ತಲೆ ಹಾಕಲಿಲ್ಲ. ಕೆರಿ[...] ಯಲ್ಲಿ ಬಿಜೆಪಿಯೊಂದಿಗೆ, ವಿ.ಹೆಚ್.ಪಿ. 'ಸಾ[...] ಸಂತ' ರೊಂದಿಗೆ ಮಾತುಕತೆ ನಡೆಸಿ ಅವ[...] 'ತೃಪ್ತ'ಗೊಳಿಸಿದರೂ ವಾರದಿಂದ ಕೇಳ[...] ಸಂಸತ್ತಿನ ಮುಂದೆ ಬಂದು ಹೇಗೆ 'ತೃಪ್ತ'ಗೊ[...] ಲಾಗಿದೆ ಎಂದು ವಿವರಣೆ ನೀಡುವ ಗೋಜಿ[...] ಹೋಗಲಿಲ್ಲ. ಅದಕ್ಕೆ ಏನೇನೋ ನೆವ ಕೊಡು[...] ಗುತ್ತಿದೆ. ಏಕೆ? ಈ ನಡುವೆ ಕಾನೂನುಬಾ[...] ವೆಂದಾಗಿರುವ ನಿರ್ಮಾಣ ಕಾರ್ಯ ಮುಂದು[...] ರಿಯುತ್ತಿದೆ. ಏಕೆ?........

ಜುಲೈ 26, 1992

ಬಾಬ್ರಿ ಮಸೀದಿ ನಿರ್ನಾಮ:
ಹಲವು ತಿಂಗಳುಗಳಿಂದ ಹೊಸೆದ ದುಷ್ಟ ಸಂಚು

ಈ ಯೋಜನೆಯ ರಿಹರ್ಸಲ್‌ನ್ನು ಡಿಸೆಂಬರ್ 5 ಅಪರಾಹ್ನ 2-30 ರಿಂದ 5-30 ರವರೆಗೆ ಸುಮಾರು 500 ಸ್ವಯಂ ಸೇವಕರು ವಿವಾದಗ್ರಸ್ತ ಸ್ಥಳದ ಪಕ್ಕದ ಗುಡ್ಡಗಾಡು ಪ್ರದೇಶವಾದ 'ರಾಮ ಕಥಾ ಕುಂಜ್'ನಲ್ಲಿ ನಡೆಸಿದರು. ಮಸೀದಿ ಹತ್ತುವುದು, ಹಗ್ಗದಿಂದ ಗುಮ್ಮಟದ ರೀತಿಯ ಮಣ್ಣುಗುಡ್ಡೆಯನ್ನು ಎಳೆಯುವುದು ಇತ್ಯಾದಿ ಈ ರಿಹರ್ಸಲ್‌ನಲ್ಲಿ ಸೇರಿತ್ತು.

ಒಬ್ಬ ಬಿಜೆಪಿ ಎಂ.ಪಿ. ತನ್ನನ್ನು ಇಲ್ಲಿಗೆ ಕರೆದೊಯ್ದು ಈ ಕರಸೇವಕರನ್ನು ತೋರಿಸಿದರು ಎಂದು 'ಪಯೋನೀರ್' ಪತ್ರಿಕೆಯ ಪ್ರವೀಣ್ ಜೈನ್ ಬರೆದಿದ್ದಾರೆ. ಅಲ್ಲಿ ಯಾವ ರೀತಿಯಲ್ಲಿ ಕರಸೇವಕರು ಹಗ್ಗ ಕಟ್ಟಿ ವಿವಿಧ ದಿಕ್ಕುಗಳಿಂದ ಎಳೆಯುತ್ತಿದ್ದರೋ ಅದೇ ರೀತಿಯಲ್ಲಿ ಮರು ದಿನ ಮಸೀದಿ ಗುಮ್ಮಟಗಳನ್ನು ಕೆಳಕ್ಕೆಳೆದು ಹಾಕಲಾಯಿತು ಎಂದಿದ್ದಾರೆ ಇವರು.

ಪಿಕಾಸಿ, ಗುದ್ದಲಿಗಳಿಂದ ಟ್ರಾಕ್ಟರ್‌ವರೆಗೂ ಸರ್ವ ಸಿದ್ಧ!

'ಜನಸತ್ತಾ ' ಹಿಂದೀ ದೈನಿಕದ ಹೇಮಂತ ಶರ್ಮಾರವರ ಪ್ರಕಾರ ಈ ಯೋಜನೆಯಲ್ಲಿ ಐದು ಭಾಗಗಳಿದ್ದವು. ಕರಸೇವಕರ ಎರಡು ಗುಂಪುಗಳು ದಕ್ಷಿಣದಿಂದೊಂದು, ಉತ್ತರದಿಂದೊಂದು ಗುಮ್ಮಟಗಳ ಮೇಲೇರಿ ಹೋದವು. ಸಮವಸ್ತ್ರ ಧರಿಸಿದ್ದ ಆರ್.ಎಸ್.ಎಸ್. ಸ್ವಯಂಸೇವಕ ಅವರಿಗೆ ಬಾವುಟ ಮತ್ತು ಸೀಟಿ ಮೂಲಕ ನಿರ್ದೇಶನ ನೀಡುತ್ತಿದ್ದ. ಗಾಯಗೊಂಡವರನ್ನು ಸಾಗಿಸಲು ಇನ್ನೊಂದು ಸ್ಟ್ರೇಚರ್ ಗಾಡಿಗಳೊಂದಿಗೆ ಸಜ್ಜಿತವಾಗಿತ್ತು. ಮತ್ತೊಂದು ಗುಂಪಿನ ಕೆಲಸ ಫೋಟೋಗ್ರಾಫರ್‌ಗಳನ್ನು ಹೊಡೆದುಬಡಿದು ದೂರವಿಡುವುದು... ಅಯೋಧ್ಯೆಯಿಂದ ಯಾವುದೇ ಸುದ್ದಿ ಹೋಗದಂತೆ ವ್ಯವಸ್ಥೆ ಮಾಡಲಾಗಿತ್ತು. ಪಿಕಾಸಿ, ಗುದ್ದಲಿಗಳು ಸಿದ್ಧವಾಗಿದ್ದವು. ಮೊದಲು ಮಸೀದಿಯತ್ತ ಧಾವಿಸಿದ ಕರಸೇವಕರ ಕೈಗಳಲ್ಲಿ ಗುಮ್ಮಟ ಹತ್ತಲು ಹಗ್ಗಗಳೂ ಸಿದ್ಧವಿದ್ದವು. ಅವರು ಗುಮ್ಮಟ ಹತ್ತುತ್ತಿದ್ದಂತೆ ವಿದ್ಯುತ್ ಸರಬರಾಜು ನಿಂತಿತು. ಇದರಿಂದ ಮಸೀದಿಯ ಸುತ್ತ ವಿದ್ಯುತ್ ಬೇಲಿಯನ್ನು ಹಾರುವುದು ಸುಲಭವಾಯಿತು. ಸಿ.ಆರ್. ಪಿ.ಎಫ್‌ನ ಸಂದೇಶ ತಂತಿಗಳನ್ನು ಕಡಿದು ಹಾಕಲಾಯಿತು! ರಾಮಜನ್ಮಭೂಮಿ ಟ್ರಸ್ಟ್ ಕಚೇರಿಯಲ್ಲೂ ಡಾಕ್ಟರುಗಳ ತಂಡ ಸಿದ್ಧವಾಗಿ ನಿಂತಿತ್ತು.

ನಿನ್ನೆ ಕೆಡವಿದೆವು ಮಸೀದಿಯನ್ನು; ಇಂದು ಕುಟ್ಟಿ ಕೆಡಹುವೆವು ದೇಶದೆಲ್ಲ ಕಾನೂನು
ದೆಹಲಿಯಲ್ಲಿ ಸಾಧು ಸಂತ (?)ರ ಅಮೃತ ವಾಣೆ

ಬಿಜೆಪಿ -ಆರ್.ಎಸ್.ಎಸ್.-ವಿಹೆಚ್‌ಪಿ ಕೂಟ ಬಾಬ್ರಿ ಮಸೀದಿ ರಾಮಜನ್ಮಭೂಮಿ ಪ್ರಶ್ನೆಯನ್ನು ಸಾಮೂಹಿಕ ಭಾವೋನ್ಮಾದ ಎಬ್ಬಿಸಲು ನಿರ್ಧರಿಸಿದಂದಿನಿಂದ ದೇಶದ ರಾಜಕೀಯದಲ್ಲಿ "ಸಾಧುಗಳ" "ಸಂತ"ರ ಮಹಂಥರ ಗುಂಪುಗಳ ಆಟಾಟೋಪ ಹೆಚ್ಚಿದೆ. ಬಿಜೆಪಿ ಕೂಟವೇ ಅಯೋಧ್ಯೆಗೆ ಸಂಬಂಧಪಟ್ಟಂತೆ ಎಲ್ಲಾ ಕಾರ್ಯಕ್ರಮಗಳ ಯೋಜನೆ ತಯಾರಿಸಿದರೂ ಅದಕ್ಕೊಂದು ಧಾರ್ಮಿಕ ವೇಷ ತೊಡಿಸಲು ಸಾಧು-ಸಂತರುಗಳನ್ನೂ, ಮಹಂತರುಗಳನ್ನೂ ಎದುರಿಗೆ ಇಟ್ಟುಕೊಂಡಿತು. ಇದರಿಂದಾಗಿ ಸರಕಾರದಿಂದ, ಪತ್ರಿಕೆಗಳಲ್ಲಿ ಭಾರೀ ಪ್ರಚಾರ ಗಿಟ್ಟಿಸಿದ ಇವರ ದಾಹ ಇನ್ನೂ ಹೆಚ್ಚಾದಂತೆ ಕಾಣುತ್ತಿದೆ. ಇತ್ತೀಚೆಗೆ ಅವರು ಭಾರತದ ಸಂವಿಧಾನದ ಮೇಲೂ ಧಾಳಿಯಿಟ್ಟಿದ್ದಾರೆ. ಅದು ಹಿಂದೂ- ವಿರೋಧಿಯಾದ್ದರಿಂದ ಅದನ್ನು ಬದಲಿಸಬೇಕು ಎಂದು ಹೇಳಲಾರಂಭಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಇಂತಹ ಹೇಳಿಕೆ ನೀಡಿದ್ದರೆ ಹುಚ್ಚುತನ ಎನ್ನುವ ಸ್ಥಿತಿಯಿತ್ತು. ಆದರೆ ಕಳೆದ ಕೆಲವು ತಿಂಗಳ ಘಟನೆಗಳ ಸ್ಥಿತಿಯಿತ್ತು. ಇದು ಭಾರತ ಗಣತಂತ್ರದ ಸಂವಿಧಾನಕ್ಕೆ ಒಡ್ಡಿರುವ ಒಂದು ಗಂಭೀರ ಸವಾಲು.

ಜನವರಿ 1ರಂದು ವಿಹೆಚ್‌ಪಿ ಸಾಧುಗಳು ದೆಹಲಿಯ ಜಾಮಾ ಮಸೀದಿ ಕೂಡಾ ಮೂಲತಃ ವಿಷ್ಣು ದೇವಸ್ಥಾನ. ಆದ್ದರಿಂದ ಅದನ್ನು ಹಿಂದಿರುಗಿಸಬೇಕೆಂದು ಒತ್ತಾಯಿಸಿದರು. ದೇಶದಲ್ಲಿ 3 ಸಾವಿರ ಮಸೀದಿಗಳನ್ನು ದೇವಸ್ಥಾನಗಳನ್ನು ಕೆಡವಿ ಮಾಡಲಾಗಿದೆ. ಇವುಗಳಲ್ಲಿ ಮುಖ್ಯವಾದ ಮೂರನ್ನು(ಅಯೋಧ್ಯೆ ವಾರಣಾಸಿ, ಮಥುರಾ) ಮುಸಲ್ಮಾನರು ತಮ್ಮ ವಶಕ್ಕೆ ಒಪ್ಪಿಸದಿದ್ದರೆ ಒಂದೊಂದಾಗಿ ಎಲ್ಲವನ್ನೂ ವಶಪಡಿಸಿಕೊಳ್ಳಲಾಗುವುದು ಎಂಬ ಬೆದರಿಕೆ ಹಾಕಿರುವುದಲ್ಲದೆ ಸಂವಿಧಾನದ ಮೇಲೂ ಹಲ್ಲೆ ಆರಂಭಿಸಿದ್ದಾರೆ. ಆ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಅಯೋಧ್ಯಾ ಆಂದೋಲನದ ಒಬ್ಬ ಪ್ರಮುಖ ವಾಮದೇವ ಮಹಾರಾಜ್ ಅಕ್ಟೋಬರ್ 13-14ರಂದು ಸಭೆ ಸೇರಿದ 'ಸಂತ ಸಮಿತಿ' ಭಾರತದ ಸಂವಿಧಾನವನ್ನು ಬದಲಿಸಿ ಅದನ್ನೂ ಪುನರ್ರಚಿಸುವ ಬಗ್ಗೆ ನಾಲ್ವರು ಸಾಧುಗಳ ಸಮಿತಿಯನ್ನು ರಚಿಸಿದೆ ಎಂದೂ ತಿಳಿಯಪಡಿಸಿದರು. ಸ್ವಾಮಿ ಮುಕ್ತಾನಂದ ಎಂಬುವರ ಅಧ್ಯಕ್ಷತೆಯಲ್ಲಿದ್ದ ಈ ಸಮಿತಿ ಆಗಲೇ ಸಂವಿಧಾನದ ಬಗ್ಗೆ ಒಂದು 63 ಪುಟಗಳ ಟೀಕೆಯನ್ನು ತಯಾರಿಸಿದ್ದು[...] ಪತ್ರಿಕಾ ಸಮ್ಮೇಳನದಲ್ಲಿ ಅದನ್ನು ಬಿಡು[...] ಕೂಡಾ ಮಾಡಲಾಯಿತು.

ಈಗಿನ ನಮ್ಮ ಸಂವಿಧಾನ ಬ್ರಿಟಿಷ[...] ತಯಾರಿಸಿದ ಕಾನೂನುಗಳ ಮೇಲೆ ನಿಂ[...] ಆದ್ದರಿಂದ ನಮ್ಮ ಸನಾತನ ಭೂಮಿ[...] ಪರಂಪರೆಗೆ ಅನುಗುಣವಾಗಿಲ್ಲವಂತೆ. ಯ[...] ದಿದು ಸನಾತನ ಪರಂಪರೆ? ಒಂದು ಉ[...] ಹರಣೆ ನೋಡಿ - ಈ ಸಾಧು ಸ[...] ಪ್ರಕಾರ ಯಾರಿಗೂ "ವಿಶೇಷ ಹಕ್ಕು"ಗಳ[...] ನೀಡಬಾರದು - ಮುಸಲ್ಮಾನರು, ಕ್ರಿಶ್ಚಿಯನ[...] ಮುಂತಾದ ಅಲ್ಪಸಂಖ್ಯಾತರ ಪ್ರಶ್ನೆ ಮ[...] ವಲ್ಲ, ಹರಿಜನ-ಗಿರಿಜನರಿಗೆ ಮೀಸಲಾತಿ[...] ಪ್ರಶ್ನೆಯೂ ಇರಲೇಬಾರದು! 'ಜನಗಣ[...] ರಾಷ್ಟ್ರಗೀತೆ ಯಾಕಿರಬೇಕು - ಬದಲಿಗೆ 'ವಂ[...] ಮಾತರಂ' ಆಗಬೇಕು. ನಮ್ಮ ರಾಷ್ಟ್ರೀ[...] ಧ್ವಜದಲ್ಲಿ ಅಶೋಕ ಚಕ್ರವನ್ನು ತೆಗೆಯಬೇ[...] ಏಕೆಂದರೆ ಅದು ಒಬ್ಬ ಬೌದ್ಧ ಸಾಮ್ರಾ[...] ಸಾಧು-ಸಂತರು ಜನವರಿ 1 ರಂದು ಬಿಡು[...] ಮಾಡಿದ ಕಿರು ಪುಸ್ತಕದಿಂದ ಕೆಲವು ಅಂಶಗಳ[...]

ಈ ಪುಸ್ತಕ 'ಹಿಂದೂ' ಪರ್ಯಾ[...] ಸಂವಿಧಾನದ ವಿವರವೇನೂ ನೀಡಿಲ್ಲ. ಆ[...] ಒಂದಂಶವನ್ನಂತೂ ಸ್ಪಷ್ಟಪಡಿಸಿದೆ. ಭಾ[...] ದಲ್ಲಿ ಭಾರತೀಯ ಪಾಲಕರಿಗೆ ಹುಟ್ಟಿದ ಪ[...] ಳಿಗೆ ತಂತಾನೇ ಭಾರತದ ಪೌರತ್ವ ನೀಡ[...] ರದಂತೆ. ಮತ್ತೆ ಹೇಗೆ ನೀಡಬೇಕು? "ವಿ[...] ಯತೆ ಮತ್ತು ದೇಶಭಕ್ತಿ"ಯ ಆಧಾರದ ಮೇ[...] ಈ "ವಿಧೇಯತೆ"ಯನ್ನು ನಿರ್ಧರಿಸುವ[...] ಯಾರು? 'ಸಾಧು ಸಂತ'ರಲ್ಲದೆ ಇನ್ನಾರು?

ದಿಲ್ಲಿ ಅಧಿಕಾರ ಬಯಸುವವರೇ ದೇಶದ ಸಂವಿಧಾನಕ್ಕೆ ಸವಾಲೆಸೆದರೆ?

- ಪಿ. ರಾಮಚಂದ್ರರಾವ್

......ಆದರೆ ಇದೀಗ ಬಿಜೆಪಿ ಮತ್ತು ವಿಶ್ವಹಿಂದೂಪರಿಷತ್ ಪ್ರಮುಖರು ಅದ್ವಾನಿ, ಮುರಳಿ ಮನೋಹರ ಜೋಷಿ ಮೊದಲಾದವರು- ಅತ್ಯುಚ್ಚ ನ್ಯಾಯಾಲಯಕ್ಕೆ ಕೊಟ್ಟ ಆಶ್ವಾಸನೆಗಳಿಗೆ ತೀರ ವಿರುದ್ಧವಾದ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಅದ್ವಾನಿಯವರೇ ಕರ ಸೇವೆಯೆಂದರೆ ನಿರ್ಮಾಣ ಕಾರ್ಯ ಮತ್ತು ಡಿಸೆಂಬರ್ 6 ರಂದು ಮಂದಿರ ನಿರ್ಮಾಣ ಕಾರ್ಯಕ್ರಮವನ್ನು ಮಾಡಿಯೇ ಮಾಡುವೆವು ಈ ಸಂದರ್ಭದಲ್ಲಿ ಉತ್ತರ ಪ್ರದೇಶ ಸರಕಾರ ಕಿತ್ತು ಹಾಕಿದರೆ ಇಡೀ ದೇಶದಲ್ಲೇ ಅದರ ಪರಿಣಾಮ ಎದುರಿಸಬೇಕಾದೀತು ಎಚ್ಚರಿಕೆ ಎಂದಿರುವರು. ಅದ್ವಾನಿಯಂತಹ ಜವಾಬ್ದಾರಿ ಬಿಜೆಪಿ ಮುಂದಾಳು, ಲೋಕಸಭೆಯಲ್ಲಿ ಪ್ರಮುಖ ವಿರೋಧ ಪಕ್ಷದ ಮುಂದಾಳು ಹೀಗೆ ದೇಶದ ಸಂವಿಧಾನವನ್ನೇ ಮುರಿಯುವ ಹೇಳಿಕೆ ಕೊಟ್ಟಿದ್ದರ ಕುರಿತು ಲೋಕಸಭೆಯಲ್ಲಿ ಬಿಸಿಬಿಸಿ ಚರ್ಚೆ ನಡೆದಾಗ ಎಲ್ಲಾ ಸದಸ್ಯರು "ಬಿಜೆಪಿ ಪಕ್ಷದ ವಕ್ತಾರರು ಡಿಸೆಂಬರ್ 6 ರಂದು ಕೇವಲ ಪ್ರಾರ್ಥನೆಯ ರೂಪದಲ್ಲಿ ಮಾತ್ರ ಕರಸೇವೆ ನಡೆಯುವುದು ಎಂಬುದನ್ನು ಪುಷ್ಟೀಕರಿಸುತ್ತೀರಾ" ಎಂದು ಕೇಳಿದಾಗ ಅವರು ಯಾರೂ ಉತ್ತರ ಕೊಡಲು ಒಪ್ಪಲಿಲ್ಲ.

ಆದ ಕಾರಣ, ಇಂದು ದೇಶಕ್ಕೇನೆ ಬಿಜೆಪಿ-ವಿಶ್ವಹಿಂದೂ ಪರಿಷತ್ ಆರ್.ಎಸ್.ಎಸ್.- ಭಜರಂಗದಳ ಈ ಸಂಘಟನೆಗಳು ಸವಾಲು ಹಾಕಿದಂತಿದೆ. ಈ ಸವಾಲನ್ನು ದೇಶದ 85 ಕೋಟಿ ಜನತೆಯ ಪರವಾಗಿ ಉಳಿದ ಎಲ್ಲಾ ರಾಜಕೀಯ ಪಕ್ಷಗಳು, ಪಕ್ಷ ಭೇದ ಬದಿಗಿಟ್ಟು ಎದುರಿಸಬೇಕಾಗಿದೆ. ಸಂವಿಧಾನವನ್ನು ಎತ್ತಿ ಹಿಡಿಯಬೇಕಾಗಿದೆ. ದೇಶದ ಕಾನೂನನ್ನು ಎತ್ತಿ ಹಿಡಿಯಬೇಕಾಗಿದೆ.

ಡಿಸೆಂಬರ್ 6, 1992

ಬಿಜೆಪಿಯ ಫಜೀತಿ: ಅತ್ತ ದರಿ ಇತ್ತ ಪುಲಿ

ಬಿಜೆಪಿ ಪರಿಸ್ಥಿತಿಯೀಗ ಚಿಂತಾಜನಕ - ಒಂದೆ[...] ಅದು ಸರಕಾರದ ಆರ್ಥಿಕ ನೀತಿಗಳಿಗೆ ಬಾಧ್ಯವಾಗಿದ[...] ಇನ್ನೊಂದೆಡೆ ಈ ನೀತಿಗಳ ದುಷ್ಪರಿಣಾಮದಿಂದ ನರ[...] ಳುವ ಜನಗಳ ಆಕ್ರೋಶಕ್ಕೆ ಕಾಂಗ್ರೆಸ್ (ಐ)ನೊ[...] ತಾನೂ ಬಲಿಯಾಗದಂತೆ ತನ್ನನ್ನು ಕಾಪಾಡಿಕೊಳ್ಳಬೇಕಾ[...] ಗಿದೆ.

ಈ ಫಜೀತಿಯಿಂದ ಪಾರಾಗುವ ಪ್ರಯತ್ನವಾ[...] ಇತ್ತೀಚೆಗೆ ಲಕ್ನೌದಲ್ಲಿ ಆರ್.ಎಸ್. ಎಸ್. ಮುಖಂ[...] ಡರ, ಸಾರಾನಾಥ್‌ನಲ್ಲಿ ಬಿಜೆಪಿ ಮುಖಂಡರ ಸಭೆಗ[...] ನಡೆದವು. ಈ ಸಭೆಗಳು ರೂಪಿಸಿರುವ ತಂತ್ರಗಳ[...] ಈ ಎರಡು ಸಂಘಟನೆಗಳ ನಡುವಿನ ಹಾಗೂ ಅವುಗ[...] ಒಳಗಿನ ಕಿತ್ತಾಟಗಳು ಕೂಡಾ ಬಯಲಿಗೆ ಬಂದಿದ್ದರೂ[...] ದೇಶವನ್ನು ಮತ್ತೆ ವಿಚ್ಛಿದ್ರಕಾರಿ ಮಾರ್ಗದತ್ತ ಒಯ್ಯು[...] ಅಪಾಯ ಕೂಡಾ ಇದೆ ಎಂದಿದೆ ಈ ಎರಡು ಸಭೆಗಳ[...] ರೂಪಿಸಿದ ತಂತ್ರಗಳನ್ನು ವಿಶ್ಲೇಷಿಸಿರುವ ಕಾಂ. ಸುರ್ಜಿತ್[...] ಅವರ ಈ ಲೇಖನ.

ಹಿಂದೂ ಕೋಮುವಾದಿ ಪ್ರಚಾರದ ಮೇಲೆ ಸಂಸತ್ತಿನಲ್ಲ[...] ಪ್ರಮುಖ ವಿರೋಧ ಪಕ್ಷವಾಗಿ ನಾಲ್ಕು ರಾಜ್ಯಗಳಲ್ಲಿ ಸರಕಾರಗ[...] ಳನ್ನು ರಚಿಸಿದ ತಾನು ಕಾಂಗ್ರೆಸ್(ಐ) ಗೆ ಪರ್ಯಾಯ ಎಂದು[...] ಹೇಳುತ್ತಿದ್ದ ಬಿಜೆಪಿ ಕೇವಲ ಕಾಂಗ್ರೆಸ್(ಐ)ನ 'ಬಿ' ತಂಡವೆಂಬ[...] ಭಾವನೆ ವ್ಯಾಪಕವಾಗುತ್ತಿದೆ.

ತಾನು ಆಳ್ವಿಕೆ ನಡೆಸುವ ನಾಲ್ಕು ರಾಜ್ಯಗಳಲ್ಲಿ ಅದು ಜನ[...] ಗಳಿಗೆ ಅಲ್ಪ ಸ್ವಲ್ಪ ಪರಿಹಾರ ನೀಡುವಲ್ಲಿಯೂ ವಿಫಲವಾ[...] ಗಿದೆಯಷ್ಟೇ ಅಲ್ಲ, ತದ್ವಿರುದ್ಧವಾಗಿ ದೊಡ್ಡ ವ್ಯಾಪಾರಿಗಳ[...] ಕಾಳಸಂತೆಕೋರರು, ಲಾಭಬಡುಕರೊಂದಿಗೆ ಅದರ ಸಂಬಂಧ[...] ಹೆಚ್ಚುಚ್ಚು ಬಯಲಿಗೆ ಬಂದು ಜನಗಳಲ್ಲಿ ಅಸಂತೃಪ್ತಿ ಹೆಚ್ಚು[...] ತ್ತಿದೆ. ನರಸಿಂಹರಾವ್ ನೇತೃತ್ವದ ಐ.ಎಂ.ಎಫ್‌ನ ಚೌಕಟ್ಟಿ[...] ನಲ್ಲಿ ಜನ - ವಿರೋಧಿ ಆರ್ಥಿಕ ಧೋರಣೆಗಳನ್ನು ಜ್ಯಾರಿಗ[...] ತರಲಾರಂಭಿಸಿದಾಗ ಅವರಿಗೆ ಉತ್ಸಾಹದ ಬೆಂಬಲ ದೊರ[...] ತದದ್ದು ಬಿಜೆಪಿಯಿಂದಲೇ ಎಂಬ ಸಂಗತಿಯೂ ಬಿಜೆಪಿಯ[...] ಕಾಂಗ್ರೆಸ್(ಐ)ನ 'ಬಿ' ತಂಡವೆಂಬ ಭಾವನೆ ಉಂಟುಮಾ[...] ಡಿದೆ............

ಮಾರ್ಚ್ 29, 1992

ಕೋಮು ಗಲಭೆ ನಿಯಂತ್ರಣ ಪಶ್ಚಿಮ ಬಂಗಾಳದ ಮಾದರಿ

ಎಡರಂಗ ಸರಕಾರ ಪರಿಸ್ಥಿತಿಯೆನ್ನುದುರಿಸಲು ಸಕಲ ಆಡಳಿತ ಕ್ರಮಗಳನ್ನು ಕೈಗೊಂಡಿತು. ಸೇನೆ ಕಳಿಸಲು ಕೇಂದ್ರ ರಕ್ಷಣಾ ಮಂತ್ರಿಗಳನ್ನು ಮೊದಲು ಕೇಳಿದ ರಾಜ್ಯ ಪ.ಬಂಗಾಳ. ಸೂಕ್ಷ್ಮ ಪ್ರದೇಶಗಳಲ್ಲಿ ತಕ್ಷಣ ಪೋಲೀಸ್, ಸೇನಾ ತುಕುಡಿಗಳನ್ನು ನಿಲ್ಲಿಸಲಾಯಿತು. ಇದರಿಂದಾಗಿ ಕೋಮುಗಲಭೆಗಳು ಕಲ್ಕತ್ತೆಯ ಕೆಲವು ಪ್ರದೇಶಗಳಿಗೇ ಸೀಮಿತಗೊಂಡವು. ಇಡೀ ರಾಜ್ಯದಲ್ಲಿ ಒಂದೆಡೆ ಮಾತ್ರ ಕೋಮುವಾದಿಗಳಿಗೆ ತುಸು ಯಶಸ್ಸು ದೊರೆಯಿತು.

ಡಿಸೆಂಬರ್ 9 ಕಲ್ಕತ್ತೆಯಿಂದ ಸ್ವಲ್ಪ ದೂರವಿರುವ ಕೈಗಾರಿಕಾ ಪಟ್ಟಣ ಜಗದ್ದಾಲ್‌ನ ಒಂದು ಗಿರಣಿ ಗೇಟಿನ ಹತ್ತಿರ ಎರಡು ಗುಂಪುಗಳು ಪರಸ್ಪರ ಕೊಚ್ಚಿ ಹಾಕಲು ಸನ್ನದ್ಧವಾಗಿ ನಿಂತಿದ್ದವು. ದೊಣ್ಣೆ ಮಚ್ಚು, ಕತ್ತಿ, ಖಡ್ಗ ಬಾಂಬುಗಳೊಂದಿಗೆ. ತಕ್ಷಣ ಉತ್ತರ 24 ಪರಗಣ ಜಿಲ್ಲೆಯ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ನೇಪಾಳ ದೇಬ್ ಭಟ್ಟಾಚಾರ್ಯರವರ ನೇತೃತ್ವದಲ್ಲಿ ಸಿಪಿಐ(ಎಂ) ಮಧ್ಯ ಪ್ರವೇಶಿಸಿ ಈ ಎರಡು ಗುಂಪುಗಳು ಹಿಂದೆ ಹೋಗುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಈ ಪ್ರಯತ್ನದಲ್ಲಿ ಭಟ್ಟಾಚಾರ್ಯರ ಮೇಲೆ ಹಲ್ಲೆಯಾಗಿ ಅವರು ತೀವ್ರವಾಗಿ ಗಾಯಗೊಂಡರು.ಅವರೀಗ ಆಸ್ಪತ್ರೆಯಲ್ಲಿದ್ದಾರೆ. ಇನ್ನೊಂದು ಕಡೆ ಕೋಮು ಸೌಹಾರ್ದ ಕಾಯುವಾಗ ಗೂಂಡಾಗಳ ಹಲ್ಲೆಗೆ ಒಳಗಾದ ಸಿಪಿಐ ಸಂಗಾತಿಯೊಬ್ಬರು ಹುತಾತ್ಮರಾದರು. ಡಿಸೆಂಬರ್ 6ರ ರಾತ್ರಿಯಿಂದಲೇ 'ಸುಳ್ಳು ವದಂತಿಗಳನ್ನು ಹರಡಿಸುತ್ತಿದ್ದಾರೆ. ಅವಕ್ಕೆ ಕಿವಿಗೊಡಬೇಡಿ' ಎಂದು ಬೀದಿ ಬೀದಿಗಳಲ್ಲಿ ಪಕ್ಷದ ಕಾರ್ಯಕರ್ತರಷ್ಟೇ ಅಲ್ಲ ಯಾವ ಪತ್ರಿಕೆಗಳಲ್ಲೂ ಹೆಸರು ಪಡೆಯದ ಜನ ಸಾಮಾನ್ಯರೂ ಕೋಮು ಸೌಹಾರ್ದ ಕಾಪಾಡಲು ಮುಂದೆ ಬಂದರು. ಪಶ್ಚಿಮ ಬಂಗಾಳ ಇನ್ನೊಂದು ಗುಜರಾತ್ ಅಥವಾ ಮಹಾರಾಷ್ಟ್ರವಾಗದಂತೆ ತಡೆದರು..............................



ಸೂರತ್ :
"ಮಾನಕ್ಕಾಗಿ ಪ್ರಾಣಕ್ಕಾಗಿ ಮಹಿಳೆಯರ ಚೀರಾಟ ಇನ್ನೂ ಕಿವಿಗಳಲ್ಲಿ ಮೊರೆಯುತ್ತಿದೆ"



ಅಯೋಧ್ಯೆಯಲ್ಲಿ ಡಿಸೆಂಬರ್ 6ರಂದು ಶ್ರೀರಾಮನ ಹೆಸರಿನಲ್ಲಿ ನಡೆದ ಗೂಂಡಾಗಿರಿ ಸೂರತ್‌ನ ಮಹಿಳೆಯರಿಗೆ ಡಿಸೆಂಬರ್ 8ರ ರಾತ್ರಿಯನ್ನು ಎಂದೂ ಮರೆಯಲಾಗದ ಅತ್ಯಂತ ಬರ್ಬರ, ಭಯಾನಕ ರಾತ್ರಿಯಾಗಿ ಮಾಡಿತು. ಸೂರತ್ ನಗರ ಕಾರ್ಪೋರೇಶನ್ ಬಿಜೆಪಿ ಕೈಯಲ್ಲಿದೆ. ಆದರೂ ಲಾಲ್ ಕೃಷ್ಣ ಅಡ್ವಾಣಿಯವರು ಬಿಜೆಪಿ ಅಧಿಕಾರಕ್ಕೆ ಬಂದರೆ ಕೋಮು ಗಲಭೆಗಳಿಗೆ ಅವಕಾಶವೇ ಇರುವುದಿಲ್ಲ ಎಂದರು ಇದಾದ ಒಂದು ತಿಂಗಳ ನಂತರ ಕೂಡಾ. ಅಂದರೆ ಅವರ "ಕೋಮು ಸಾಮರಸ್ಯ"ದ ಅರ್ಥವೂ ಅವರ "ಜಾತ್ಯಾತೀತತೆ" ಎಂಬ ಪದದ ಅರ್ಥದಂತೆ ತದ್ವಿರುದ್ಧವಾದದ್ದೇ ಇರಬಹುದೇ? ಸೂರತ್‌ನಲ್ಲಿ ಡಿಸೆಂಬರ್ 8-10ರ ನಡುವೆ ಸುಮಾರು 200 ಜನರನ್ನು ಬಲಿತೆಗೆದುಕೊಂಡ ಘಟನೆಗಳ ಈ ಒಂದು ಇಣುಕು ನೋಟದ ನಂತರ ನಿಮಗೆ ಖಂಡಿತಾ ಹಾಗೆಯೇ ಅನಿಸುತ್ತದೆ..................

ಹಿಂದೂ-ಮುಸ್ಲಿಂ ಮತಾಂಧರ ಮನಸೊಂದೇ, ಕನಸೊಂದೇ

ಮುಸ್ಲಿಂ ಮೂಲಭೂತವಾದಿ ಶಕ್ತಿಗಳು ಮುಸ್ಲಿಮರಲ್ಲಿ ಈಗ ಹುಟ್ಟಿರುವ ಅಭದ್ರತೆಯ ಭಾವನೆಯ ಪ್ರಯೋಜನ ಪಡೆಯಲು ಪ್ರಯತ್ನಿಸುತ್ತಾರೆ ಎಂಬುದನ್ನು ಒತ್ತಿ ಹೇಳಬೇಕಾಗುತ್ತದೆ. ಇಂತಹ ಮುಸ್ಲಿಂ ಮತಾಂಧತೆ ಹಿಂದೂ ಮತಾಂಧತೆಯನ್ನು ಇನ್ನಷ್ಟು ಪೋಷಿಸಿ ಬಲಗೊಳಿಸುವ ಆಹಾರ. ನಮ್ಮ ದೇಶದಲ್ಲಿ ಅಲ್ಪಸಂಖ್ಯಾತರ ರಕ್ಷಣೆ ದೇಶದ ಜಾತ್ಯಾತೀತ ಪ್ರಜಾಪ್ರಭುತ್ವ ಮುಖ್ಯಧಾರೆಯಿಂದಲೇ ಮಾತ್ರವೇ ಸಾಧ್ಯ ಎಂಬುದು ಮತ್ತೆ-ಮತ್ತೆ ಸಾಬೀತಾಗಿರುವ ಸಂಗತಿ.

ಈ ಹಿನ್ನೆಲೆಯಲ್ಲಿ ಮುಸ್ಲಿಂ ಮೂಲಭೂತವಾದದ ಅಥವಾ ಮತಾಂಧತೆಯ ಸ್ವರೂಪ ಏನು ಎಂದು ನೋಡೋಣ.

ಜಮಾತ್-ಎ-ಇಸ್ಲಾಮಿ ಆಗಸ್ಟ್ 25, 1941 ರಂದು ಸ್ಥಾಪನೆಗೊಂಡಿತು. ಪಠಾಣ್‌ಕೋಟ್‌ನಲ್ಲಿ ಮೌಲಾನಾ ಅಬ್ದುಲ್ ಅಲ್‌ಮೌದೂದಿ ಅಧ್ಯಕ್ಷತೆಯಲ್ಲಿ ಸೇರಿದ ಸಮ್ಮೇಳನದಲ್ಲಿ ಅದು ಆರಂಭವಾಯಿತು. ದೇಶ ವಿಭಜನೆಯ ನಂತರ ಮೌದೂದಿ ಪಾಕಿಸ್ತಾನಕ್ಕೆ ವಲಸೆ ಹೋದರು. ಆದರೆ ನಮ್ಮ ಉಪಖಂಡದಲ್ಲಿ ಮುಸ್ಲಿಂ ಮತಾಂಧತೆಯ ಅತ್ಯಂತ ಬಲವಾದ ದನಿಯಾಗಿಯೇ ಉಳಿದರು.

ಮುಸ್ಲಿಂ ಮತಾಂಧತೆ ಹೇಗೆ ಮುಸ್ಲಿಂ ಜನಸಾಮಾನ್ಯರ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ ಎಂಬುದನ್ನು ಮೌಲಾನಾ ಮೌದೂದಿಯವರ ಈ ಕೆಳಗಿನ ಹೇಳಿಕೆಯಿಂದಲೇ ತಿಳಿಯಬಹುದು.

"ಭಾರತದಲ್ಲಿ ಹಿಂದೂ ಕಾನೂನಿನ ಆಧಾರದ ಮೇಲೆ ಹಿಂದೂ ಸರಕಾರ ಬಂದರೆ ಮನುವಿನ ಶಾಸನ ದೇಶದ ಶಾಸನವಾಗಿ ಮುಸ್ಲಿಮರನ್ನು ಅಸ್ಪೃಶ್ಯರಂತೆ ಕಾಣಲಾರಂಭಿಸಿ ಪೌರತ್ವದ ಹಕ್ಕನ್ನೂ ನೀಡದಿದ್ದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ!" ಮೌದೂದಿಯವರ ಅಭ್ಯಂತರವಿಲ್ಲದ ಮನುಸ್ಮೃತಿಯ ಬಗ್ಗೆ ಬಿಜೆಪಿ ಮುಖಂಡ ಕೆ.ಆರ್. ಮಲ್ಕಾನಿ ಏನು ಹೇಳುತ್ತಾರೆ ಎಂಬುದನ್ನು ಗಮನಿಸಿ -"ಹಿಂದು ಕೋಡ್‌ಬಿಲ್ ಅಂಗೀಕರಿಸುವಾಗ (ಆರ್.ಎಸ್.ಎಸ್. ಮುಖಂಡ) ಗೋಲ್ವಾಲ್ಕರ್ ವಿರೋಧಿಸಿದರು. ಮನುಸ್ಮೃತಿಯೊಂದಿಗಿನ ಪ್ರಾಚೀನ ಸಂಬಂಧವನ್ನು ಮುರಿದುಕೊಳ್ಳಬೇಕಾದ ಅಗತ್ಯವಾದರೂ ಏನು?"

ಮಥುರೆಯಲ್ಲಿ ವಿ.ಹೆಚ್.ಪಿ. ಆಶ್ರಯದಲ್ಲಿ ನಡೆದ ಎರಡನೇ ಹಿಂದೂ ಅಡ್ವೋಕೇಟ್‌ಗಳ ಸಮ್ಮೇಳನದಲ್ಲಿ (ಎಪ್ರಿಲ್ 18 -19, 1992) ಉತ್ತರ ಪ್ರದೇಶದ ಅಡ್ವೋಕೇಟ್ ಜನರಲ್, ಮನುಸ್ಮೃತಿ ಎಲ್ಲರಿಗೂ ಎಲ್ಲಾ ಕಾಲಕ್ಕೂ ನ್ಯಾಯ ಒದಗಿಸಿದೆ ಎಂದರು. ಗೋಲ್ವಾಲ್ಕರ್ ಸ್ವತಃ 'ಮನು ಮಾನವಕುಲದ ಮೊದಲ ಅತ್ಯಂತ ಮಹಾನ್, ಬುದ್ಧಿವಂತ ಶಾಸನಕರ್ತ' ಎಂದಿದ್ದರು.....

ಪಂಪ ಬಿಕ್ಕುತ್ತಾನೆ........

ಪಂಪ ಬಿಕ್ಕುತ್ತಾನೆ ಕಂಪು ವಾಸನೆ ನಡುವೆ
ಬನವಾಸಿ ಕನಸುಗಳ ಚಿತ್ತಾರದಲ್ಲಿ
ಕಾವ್ಯ ಎಳಸಿನ ಮಧ್ಯೆ ಖಡ್ಗವನು ಹುಡುಕುತ್ತ
ರೆಕ್ಕೆ ಬಿಚ್ಚುತ್ತಾನೆ ಹಾಲಕ್ಕಿಯಂತೆ
ಕನಸಗೂಡ ಬೆನ್ನಲ್ಲಿ ಇಟ್ಟು, ಗೀಜಗವ ಅರಸುತಾನೆ
ಖಡ್ಗ ಒರೆಯುಲಿ ಕಾವ್ಯವಿಟ್ಟು, ಆ ಯೋಧ ನಡೆಯುತಾನೆ
ಹಾಲಕ್ಕಿ ಸಂಕುಲ ಸದ್ದು ಮಾಡುತಾವೆ ಮೇಲೆ ದೋಣಿಗೂಗೆ
ಹದ್ದಿನಂತೆ ಮೈ ಮೇಲೆ ಎರಗುತಾನೆ ಹಕ್ಕಿ ಕಿರುಚುತಾವೆ
ನೋವ ಸ್ವರವು ತಾನೊಂದೆ ಮೆರೆದು ಕಾವ್ಯವನು ಮರೆಸುತಾವೆ
ಕನಸಕೊಂದು ಬೆಳ್ಳಕ್ಕಿ ನೊಂದು ಮೈಮನ ಮುದುಡುತಾವೆ
ನೋವಿನಲ್ಲಿಯೂ ಖಡ್ಗ ಮಧ್ಯೆ ಕವನ ಇಣುಕುತಾವೆ
ಸದ್ದುಕೇಳುತಾವೆ ದೂರದಲ್ಲಿ ಮಾಮರದ ಮಧ್ಯದಲ್ಲಿ
ಗೀಜಗನ ಗೂಡು ತಾನೊಂದೆ ಒಂಟಿ ಗೀಜಗವು ಎಲ್ಲಿ ಎಲ್ಲಿ
ಬೆಳ್ಳಕ್ಕಿ ಎಲ್ಲಿ, ಹಾಲಕ್ಕಿ ಎಲ್ಲಿ, ಆ ಹಾರೋ ಕಂದ ಎಲ್ಲಿ
ಗೀಜಗವು ಎಲ್ಲಿ, ಚಿತ್ತಾರವೆಲ್ಲಿ, ಕನಸ ಕುಡಿಕೆ ಎಲ್ಲಿ
ಎದೆಯಲ್ಲಿ ಕಾವ್ಯ ಕೈಯಲ್ಲಿ ಖಡ್ಗ ಗಲ್ಲುಗಳ ಕುಣಿಕೆಯಲ್ಲಿ
ತೂಗೇ ತೂಗುತಾವೆ ಹಾರೋ ಕನಸು ಆ ಮುರಿದ ಗೋಣಿನಲ್ಲಿ
ಹಕ್ಕಿ ಮಾತ್ರ ಹಾರಾಡುತಾವೆ ನೀಲ ಗಗನದಲ್ಲಿ
ಎದೆಯ ಕನಸುಗಳು ಹಾರಲಾರವೆ ಮತ್ತೆ ಬಾನಿನಲ್ಲಿ
ಹಾರು ಹಕ್ಕಿಯೆ, ಹಾರು ಬೆಂಜಮಿನ್, ಹಾಡು ಮೌನಗೀತೆ
ಹಾಡು ಬೆಂಜಮಿನ್ ಗೋರಿಯಲ್ಲೂ ನೀ ಕಾಡೋ ಶಬ್ದ ತಾನೆ
ಪಂಪ ಬಿಕ್ಕುತಾನೆ ಗೋರಿ ಬಳಿಯಲಿ ಇತಿಹಾಸ ಪುಟದಿ ಮಲಗಿ
ಎದೆಯಲ್ಲಿ ಕಾವ್ಯ ಕೈಯಲ್ಲಿ ಖಡ್ಗ ಒಬ್ಬಂಟಿ ನಡೆಯುತಾನೆ.

ಜಿ.ಎಸ್. ಮೋಹನ್

ಮೇ ದಿನ, 1987

ಬರಗಾಲದ ರಾಜಕೀಯ ಅರ್ಥಶಾಸ್ತ್ರ

-- ಜಿ.ಎನ್. ನಾಗರಾಜ್

ಬರಗಾಲ, ನೆರೆ(ಪ್ರವಾಹ) ಇವುಗಳೆಲ್ಲಾ ಪ್ರಕೃತಿಯ ವಿಕೋಪವೆಂದು ಶತ ಶತಮಾನಗಳಿಂದ ಬರಗಾಲದಲ್ಲಿ ಹಸಿವಿನಿಂದ ಪ್ರಾಣ ತೆರುವುದೊಂದೇ ದಾರಿ ಎಂಬ ನಂಬಿಕೆಯನ್ನೇ ಅವಲಂಬಿಸಿ ನಮ್ಮ ದೇಶದ ಹಾಗೂ ರಾಜ್ಯದ ಸರಕಾರಗಳು, ನಾವು ಮಾಡಬಹುದಾದುದನೆಲ್ಲಾ ಮಾಡುತ್ತಿದ್ದೇವೆ, ಇಷ್ಟರ ಮೇಲೆ ಇದು ಮಾನವನ ಯತ್ನಕ್ಕೆ ಮೀರಿದ್ದು ಎಂಬ ಭಾವನೆಯನ್ನು ಮೂಡಿಸಲು ಯತ್ನಿಸುತ್ತಿದ್ದೇವೆ. ಈಗಾಗಲೇ ನಾವು ಬರಗಾಲ ಪರಿಹಾರಕ್ಕಾಗಿ ವಿಪರೀತವಾಗಿ ಹಣ ವೆಚ್ಚ ಮಾಡಿದ್ದೇವೆ, ಇದಕ್ಕಿಂತ ಹೆಚ್ಚಾಗಿ ಏನೂ ಮಾಡಲಾಗದು ಎನ್ನುವ ರಾಜೀವ ಗಾಂಧಿಯವರು, ಬರಗಾಲದ ವಿಷಯದಲ್ಲಿ ಕೇಂದ್ರ ಸರಕಾರ ಏನೂ ಮಾಡುತ್ತಿಲ್ಲ, ನಾವು "ಓವರ್‌ಡ್ರಾಫ್ಟ್" ಪಡೆಯುವುದಕ್ಕೆ ಆರಂಭಿಸುತ್ತೇವೆ ಎಂದು ಒಮ್ಮೆ ಬೆದರಿಸಿ, ಮರುದಿನವೇ ಕೇಂದ್ರದ ಸಚಿವರು ಜವಾಬ್ದಾರಿ ಬಹಳ ಅಲ್ಪ, ಎಲ್ಲಾ ಜವಾಬ್ದಾರಿ ರಾಜ್ಯಗಳದ್ದೇ ಎಂದು ಹೇಳುತ್ತಿರುವಾಗಲೇ, ಕೇಂದ್ರ ರಾಜ್ಯದ ಬರಗಾಲ ಪರಿಹಾರಕ್ಕಾಗಿ ಬಹಳ ಸಹಾಯ ಮಾಡಿದೆ, ರಾಜೀವ ಗಾಂಧಿಯವರಂತೂ ತಕ್ಷಣವೇ(!!! ಯಾವ ತಕ್ಷಣ ಎಂಬುದು ಹೆಗ್ಗಡೆಯವರಿಗಷ್ಟೇ ಗೊತ್ತು.) ಕ್ರಮ ತೆಗೆದುಕೊಂಡರು ಎಂದು ಹುಚ್ಚಾಪಟ್ಟೆ ಹೊಗಳಿದರು. ಈ ಎಲ್ಲಾ ದೊಂಬರಾಟಗಳ ಹಿಂದಿನ ಸತ್ಯವೇನು ಎಂಬುದನ್ನು ರಾಜ್ಯದ ಕೃಷಿಕ ಸಮುದಾಯಕ್ಕೆ, ಎಲ್ಲಾ ಜನತೆಗೆ ತಿಳಿಸಬೇಕಾಗಿದೆ.

ಬರಗಾಲ - ನೆರೆ, ಹದಗೆಟ್ಟ ಮಾನವ - ಪ್ರಕೃತಿ ಸಂಬಂಧದ ಸಾಕಾರರೂಪ

ತಾನೆ ಸ್ವತಃ ಪ್ರಕೃತಿಯ ಅಂಗವಾದ, ಪ್ರಕೃತಿಯ ವಿಕಾಸದ ಮಾತ್ರ ಪ್ರಜ್ಞಾವಂತ ಅಂಶವಾದ ಮಾನವ ತನ್ನ ಜನನದ ಆದಿಯಿಂದಲೂ ಸುತ್ತಣ ಪ್ರಕೃತಿಯೊಂದಿಗೆ ಹೋರಾಡುತ್ತಾ ಕ್ರಮ ಕ್ರಮವಾಗೆ ಪ್ರಕೃತಿಯ ನಿಗೂಢ ರಹಸ್ಯಗಳನ್ನು ಹೊರ ಹಾಕುತ್ತಾ ಅದನ್ನೇ ವಿಜ್ಞಾನವನ್ನಾಗಿಸಿ, ತಂತ್ರಜ್ಞಾನವನ್ನಾಗಿಸಿ ಪ್ರಕೃತಿಯನ್ನು ತನ್ನ ಅನುಕೂಲಕ್ಕೆ ಹೊಂದಿಸಿಕೊಳ್ಳುವ, ತಾನು ಪ್ರಕೃತಿ ರಚನೆಗೆ ಹೊಂದಿಕೊಳ್ಳುವ ಕೆಲವನ್ನು ನಿರಂತರ ನಡೆಸುತ್ತಲೇ ಬಂದಿದ್ದಾನೆ. ಹೀಗಾಗಿಯೇ ಅತ್ಯಂತ ಭೀಕರವಾದ ಮಂಜಿನಲ್ಲಿ - ಐಸ್‌ಲ್ಯಾಂಡ್ ಗ್ರೀನ್‌ಲ್ಯಾಂಡ್ ದ್ವೀಪಗಳ ಮೇಲೆ, ಬೆಂಕಿಯುಗುಳುವ ಅಗ್ನಿ ಪರ್ವತಗಳ ತಪ್ಪಲಲ್ಲಿ- ಜಪಾನಿನಲ್ಲಿ, ಅಷ್ಟೇ ಏಕೆ ಭಾರತದ ವಿಜ್ಞಾನಿಗಳೂ ಸೇರಿದಂತೆ ಜಗತ್ತಿನ ಹತ್ತಾರು ರಾಷ್ಟ್ರಗಳು ವಾಸಿಸಲೂ ಕೂಡ ಸಾಧ್ಯವಾಗದ ಅಂಟಾರ್ಟಿಕಾದಲ್ಲಿ ವಾಸಮಾಡುತ್ತಿದ್ದಾರೆ. ಇವೆಲ್ಲವೂ ಪ್ರಕೃತಿಯ ಅನುಕೂಲಗಳನ್ನು ಇಡೀ ಮಾನವ ಸಮಾಜದ ಹಿತಕ್ಕಾಗಿ ಬಳಸುತ್ತಾ, ಅನಾನುಕೂಲಗಳ ವಿರುದ್ಧ ರಕ್ಷಣಾತ್ಮಕ ಕ್ರಮಗಳನ್ನು ವಹಿಸುತ್ತಾ ಹೋದರೆ ಪ್ರಕೃತಿಮಾನವನ ಸಂಬಂಧ ಮಧುರವಾಗಿರಲು ಸಾಧ್ಯವೆಂಬುದನ್ನು ಸಾಬೀತುಪಡಿಸುತ್ತವೆ.

ಅಂಟಾರ್ಟಿಕಾದ ವಿರುದ್ಧ ಪ್ರಕೃತಿಯ ಮಡಿಲಲ್ಲಿಯೂ, ತಂತ್ರಜ್ಞಾನದ ಅತ್ಯುತ್ತಮ ಅಂಶಗಳನ್ನು ಬಳಸಿ ಅದಕ್ಕೆ ತಕ್ಕ ಸಂಪನ್ಮೂಲದ ವಿನಿಯೋಗಮಾಡಿದರೆ ಪ್ರಕೃತಿಯೊಡನೆ ಸುಮಧುರ ಸಂಬಂಧ ಸಾಧ್ಯ ಎನ್ನುವಾಗ ಮಾನವಹತ್ತಾರು ಸಾವಿರ ವರ್ಷಗಳಿಂದ ನೆಲಸಿ ವಿಕಾಸಗೊಂಡಿರುವ ನೆಲೆಗಳಲ್ಲಿ ಸಾಧ್ಯವಿಲ್ಲವೇ? ಸಂಪೂರ್ಣ ಸಾಧ್ಯ. ಅಸಾಧ್ಯವಾಗುವುದು ಕೇವಲ ಎರಡು ಸಂದರ್ಭಗಳಲ್ಲಿ. ಪ್ರಕೃತಿಯ ನಿಯಮಗಳನ್ನರಿತೂ ಕೂಡ ಮಾನವರೆಲ್ಲರ ಬದುಕನ್ನು ಸುಗಮಗೊಳಿಸಲು ಅದನ್ನು ಬಳಸದಿದ್ದಾಗ ಹಾಗೂ ಮಾನವರೇ ಪ್ರಕೃತಿಯ ಶೋಷಣೆ ನಡೆಸಿದಾಗ! ಎಲ್ಲ ಜನತೆಯ ಸುಖಕ್ಕಾಗಿ ಶ್ರಮಿಸದ ಕೆಲವೇ ಜನಗಳಿಗಾಗಿ ಇಡೀ ಪ್ರಕೃತಿಯನ್ನೇ, ಎಲ್ಲಾ ಮಿತಿಗಳನ್ನು ಮೀರಿ ಶೋಷಿಸುವ ಸಮಾಜದಲ್ಲಿ ಮಾತ್ರ - ಅದರಲ್ಲಿ ಈ ಶೋಷಣೆ ಗರಿಷ್ಠ ಮಟ್ಟವನ್ನು ಮುಟ್ಟುವುದು ಬಂಡವಾಳಶಾಹಿ ಸಮಾಜದಲ್ಲಿ ಮಾತ್ರ.

ಸೈಬೀರಿಯಾದಿಂದ ಉತ್ತರದ ಆರ್ಕ್‌ಟಿಕ್ ಸಾಗರಕ್ಕೆ ಹರಿಯುವ ನದಿಗಳ ಸಮೂಹವನ್ನೇ ಸಂಪೂರ್ಣ ವಿರುದ್ಧ ದಿಕ್ಕಿಗೆ ತಿರುಗಿಸಿ ಸೈಬೀರಿಯ ಶೀತಲ ಮರುಭೂಮಿಯನ್ನು ಕೃಷಿಯೋಗ್ಯ ವಾಸಯೋಗ್ಯವನ್ನಾಗಿ ಮಾಡುವುದು ಸಾಧ್ಯವಿರಬೇಕಾದರೆ, 100 ಕೋಟಿಗೂ ಹೆಚ್ಚು ಜನರಿಂದ್ದರೂ ಕೃಷಿ ಯೋಗ್ಯ ಭೂಮಿ ಭಾರತದಷ್ಟೇ ಇರುವ ಚೀನಾದಲ್ಲಿ ನೆರೆ ಪ್ರವಾಹಗಳನ್ನೆ ತಡೆಗಟ್ಟಲು ಬರಗಾಲದ ಪರಿಣಾಮಗಳನ್ನು ತಡೆಗಟ್ಟಲು ಬರಗಾಲದ ಪರಿಣಾಮಗಳೆನ್ನೆದುರಿಸಲು ಸಾಧ್ಯವಾಗಿರಬೇಕಾದರೆ ಇಡೀ ದೇಶದ ಎಲ್ಲರಿಗೂ ಸಾಕಾಗುವಷ್ಟು ಆಹಾರವನ್ನು ತಮ್ಮ ಪ್ರದೇಶದಲ್ಲಿ ಬೆಳೆದುಬರಗಾಲಪೀಡಿತಗಿರಿ ಪ್ರದೇಶಗಳಿಗೊಯ್ದು ಕೊಡುವುದು ಸಾಧ್ಯವಾಗಿರಬೇಕಾದರೆ, ಭಾರತದಲ್ಲಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಶಾಶ್ವತ ನೀರಾವರಿ ಕ್ರಮವನ್ನು ಕೈಗೊಳ್ಳುವುದಾಗಲಿ, ಗೋಡೌನುಗಳಲ್ಲಿ ತುಂಬಲಾಗದೆ ಹೊರಗೆ ಬಯಲೊಳಗೆ ಹರಡಿರುವ ಧಾನ್ಯಗಳನ್ನು ಬರಗಾಲಪೀಡಿತರಿಗೆ ಒದಗಿಸುವುದು ಸಾಧ್ಯವೇಕಾಗಿಲ್ಲ? ಗಂಗಾ-ಕಾವೇರಿ ಸಂಗಮವನ್ನೇರ್ಪಡಿಸುವ ಕಾಲುವೆಗಳ ಹಾರದ ಮಾತು, ವಿಜಯನಗರದ ಉಕ್ಕಿನ ಕಾರ್ಖಾನೆಯ ಮಾತಿನಂತೆಯೇ ಅನೇಕ ಬಾರಿ ಬಂದು ಬಿದ್ದು ಹೋಯಿತು. ಕರ್ನಾಟಕದಲ್ಲಿಯೇ ಕಾಳಿಯಿಂದ ಹಿಡಿದು ಕೊಡಗಿನ ಬರಪೊಳೆಯವರೆಗೆ ಹಲವಾರು ಸಣ್ಣ ದೊಡ್ಡ ನದಿಗಳ ನೀರು ವ್ಯರ್ಥವಾಗಿ ದಿನೇ ದಿನೇ ಹರಿದು ಅರೇಬಿಯಾ ಸಮುದ್ರವನ್ನು ಸೇರುತ್ತಿಲ್ಲವೇ? ಲಿಂಗನಮಕ್ಕಿಯಲ್ಲಿ, ಕಾಳಿ ವಿದ್ಯುತ್ ಯೋಜನೆಗಳ ಅಣೆಗಳ ಜಾಲದಲ್ಲಿ ಹಿಡಿದಿಟ್ಟ ನೀರನ್ನು ವಿದ್ಯುತ್ ಉತ್ಪಾದನೆಯ ನಂತರ ಮತ್ತೆ ಸಮುದ್ರಕ್ಕೆ ಬಿಡುತ್ತಿಲ್ಲವೆ? ಕರ್ನಾಟಕದಲ್ಲಿಯೇ ಹರಿಯುವ ಕೃಷ್ಣ ಕಾವೇರಿಯರ ಸಂಪರ್ಕವನ್ನು ಸಾಧಿಸಿದರೆ ಪಶ್ಚಿಮ ಘಟ್ಟಗಳ ನೀರನ್ನು ಹರಿಯಿಸಿದರೆ ಕರ್ನಾಟಕದಲ್ಲಿ ಮಳೆ ಆಶ್ರಿತ ಕೃಷಿ ಅನ್ವೇಶಿತ ಪ್ರದೇಶ ಬಹುಭಾಗ ನೀರಾವರಿಯಾಗುವುದು ಸಾಧ್ಯ, ಬರಗಾಲವನ್ನು ಸಂಪೂರ್ಣವಾಗಿ ಹೊರದೋಡಿಸುವುದು ಸಾಧ್ಯ. ಹಾಗಿದ್ದರೆ ಇಲ್ಲಿಯವರೆಗೆ ಇದು ಏಕೆ ಸಾಧ್ಯವಾಗಿಲ್ಲ? ಇದಕ್ಕೆ ಕಾರಣವಾದ ನಮ್ಮ ವರ್ಗ ಸಮಾಜದ ಸ್ವರೂಪವೇನು?


ಬರಗಾಲ ಮತ್ತು ಭೂ ಸಂಬಂಧಗಳು

ಕೇಂದ್ರವನ್ನಾಳುವ ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯದಿಂದೀಚೆಗೆ ತಂದ ಎಲ್ಲಾ ಭೂ ಸುಧಾರಣೆಗಳನ್ನೂ ಮೀರಿ ಭೂ ಕೇಂದ್ರೀಕರಣ ಹೆಚ್ಚುತ್ತಲೇ ಇದೆ. ಇದರ ಪರಿಣಾಮ ಕೆಲವೇ ಜನಭೂಸ್ವಾಮಿಗಳು ಒಂದುಕಡೆ, ಅಸಂಖ್ಯಾತ ಕೃಷಿ ಕೂಲಿಕಾರರು ಮತ್ತೊಂದು ಕಡೆ. ಬರಗಾಲವೆಂಬುದು ಭೂ ಸ್ವಾಮಿಗಳನ್ನು ಕಾಡುವುದಿಲ್ಲ ಆದರ ಪ್ರಹಾರ ಆರಂಭವಾಗುವುದೇ ಕೃಷಿ ಕಾರ್ಮಿಕನಿಂದ. ಬರಗಾಲದ ಪ್ರಮಾಣವನ್ನಳೆಯುವುದೇ, ಇಂತಹ "ವರ್ಷ ಎರಡೆತ್ತಿನವರೂ ಕೂಡ ಗುಳೇಹೋದರು" ನಾಲ್ಕೆತ್ತು, ಚಕ್ಕಡಿಯವರೂ ನಿರ್ನಾಮವಾದರು ಎಂದು ರೈತನ ಸಂಪನ್ಮೂಲಗಳನ್ನು ಗುರುತಿಸಿ ಆರಕ್ಕೆ ಮೂರಾಗಿ, ಒಂದಾಗಿ ಸೀದು ಹೋಗುತ್ತಿರುವ ರೈತನ ಸಂಪತ್ತನ್ನು ಕೊಳ್ಳುವವರು ಯಾರು? ಕೊಳ್ಳುವವರಿಲ್ಲದೇ ಮಾರಲಿಕ್ಕೆ ಸಾಧ್ಯವೇ? ಈ ಮಾರಾಟದಿಂದ ಮತ್ತಷ್ಟು ಸಂಪತ್ತಿನ ಕೇಂದ್ರೀಕರಣ ಹೆಚ್ಚುತ್ತದೆ. ಹಾಗೆ ಬರಗಾಲದಿಂದ ಬರಗಾಲಕ್ಕೆ ಭೂ ಸ್ವಾಮಿಗಳು ಧಡೂತಿ ಭೂ ಸ್ವಾಮಿಗಳಾಗುತ್ತಾರೆ. ಕೃಷಿ ಕಾರ್ಮಿಕರ ಸಂಕುಲಕ್ಕೆ ಹೊಸದಾಗಿ ಮತ್ತೊಂದು ಪಡೆ ಸೇರುತ್ತದೆ.

ಈ ಕೃಷಿ ಕಾರ್ಮಿಕರ, ಬರಗಾಲದಲ್ಲಿ ಅಗ್ಗದಲ್ಲಿ ವಿಕ್ರಯವಾಗುವ ಶ್ರಮಶಕ್ತಿಯ ಪರಿಣಾಮವೇ "ಜೀತದಾಳು" ಪದ್ಧತಿ, "ದೇವದಾಸಿ" ಪದ್ಧತಿ ಮೊದಲಾದ ಪಾಳೆಯಗಾರಿ ಪಳೆಯುಳಿಕೆಗಳು ಈ ಪದ್ಧತಿಗಳು ಎಷ್ಟು ಕಾನೂನುಗಳನ್ನು ಮಾಡಿದರೂ ಮತ್ತಷ್ಟು ಶಕ್ತವಾಗಿ ಮುಂದುವರಿಯುತ್ತಲೇ ಹೋಗುವುದು ಮಾತ್ರವಲ್ಲ ಇಂತಹ ಸಮಯಕ್ಕಾಗಿ ಬಾಯಿಬಿಟ್ಟು ಕಾದು ಕುಂತ ಭೂಸ್ವಾಮಿಗಳು ಈ ಅಗ್ಗದ ಶ್ರಮ ಶಕ್ತಿಯ ಉಪಯೋಗದಿಂದ ತಮ್ಮ ವಿಸ್ತಾರವಾದ ಹೊಲಗಳಲ್ಲಿ ಭೂ ಅಭಿವೃದ್ಧಿ ಕ್ರಮ, ನೀರಾವರಿ ಕ್ರಮಗಳನ್ನು ಕೈಗೊಂಡು ಇನ್ನಷ್ಟು ಶ್ರೀಮಂತರಾಗುವುದು ಬಂಡವಾಳಶಾಹಿ ಭೂ ಸಂಬಂಧಗಳ ಬೆಳವಣಿಗೆಗೆ ಕಾರಣವಾಗುವುದು.

ಬರಗಾಲ ಕೈಗಾರಿಕೆಗಳ ಕಾರ್ಮಿಕರನ್ನು ಬಾಧಿಸುವ ರೀತಿ ಹಾಗೂ ಜನರ ದಾರುಣ ಪರಿಸ್ಥಿತಿಗೆ ರಾಜೀವಗಾಂಧಿ ಹಾಗೂ ಹೆಗ್ಗಡೆಯವರು ತೋರಿಸಿದ ಕಾಳಜಿ ಏನು ಎಂಬುದು ಮುಂದೆ ನೋಡೋಣ............

ಜನವರಿ 19, 1986



ಕೇಂದ್ರ ಸರಕಾರದ ಬಜೆಟ್ ಎಂದರೆ ದುಡಿಯುವ ಜನಗಳ ಕೈಕಾಲು ನಡುಗುತ್ತವೆ. ಆದರೆ ನೂರು ದಿನಗಳು, 200 ದಿನಗಳು, ಒಂದು ವರ್ಷಗಳು 1000 ದಿನಗಳು ಇತ್ಯಾದಿ ಮೊತ್ತ ಮೊದಲ ಬಾರಿಗೆ ನಿರ್ದಿಷ್ಟ ಘಟ್ಟಗಳ ಭರವಸೆ ನೀಡಿದಾಗ ಜನ ಸ್ವಲ್ಪ ಮಟ್ಟಿಗೆ ನಂಬಿದರು ಆದರೆ ಹೀಗೆ ಮತ ಗಳಿಸಿದ ಕಾಂಗ್ರೆಸ್ ಸರಕಾರ ತನ್ನ ಭರವಸೆ ಈಡೇರಿಸುವುದು ಬಿತ್ತಟ್ಟಿಗಿರಲಿ ದುಡಿಯುವ ಜನಗಳನ್ನು ಹೆದರಿಸುವಲ್ಲಿ ಇನ್ನೂ ಮುಂದೆ ಹೋದ ಕಳೆದ ಬಜೆಟ್‌ನ ಮೊದಲೇ ಆರಂಭಿಸಿದ ದಾಳಿ ಈ ಬಾರಿಯ ಬಜೆಟ್ ಮೊದಲೇ ಇನ್ನಷ್ಟು ತೀವ್ರಗೊಂಡಿದೆ. ನಾವೀಗ ಫೆಬ್ರವರಿ 29ನ್ನು ಕಾತುರದಿಂದ ಕಾಯುತ್ತಿಲ್ಲ. ನಾಳೆ ಬೆಳಗಾದರೆ ಸರಕಾರದ ಬತ್ತಳಿಕೆಯಿಂದ ಇನ್ನೇನು ಮಾರಕಾಸ್ತ್ರ ಬರಲಿದೆ ಎಂಬ ಭೀತಿಯಲ್ಲಿ ಬದುಕುತ್ತಿದ್ದೇವೆ. ಕಳೆದ ಜುಲೈನಿಂದ ನಿರಂತರವಾಗಿ ನಮ್ಮ ಮೇಲೆ ನಡೆಸುತ್ತಿರುವ ಧಾಳಿಗಳ ಒಂದು ಸ್ಥೂಲ ಚಿತ್ರ ಇಲ್ಲಿದೆ.

ಐ.ಎಂ.ಎಫ್. ಗುಲಾಮರ ನಿಲ್ಲದ ಓಟ

ಜುಲೈ 1991

ಅಧಿಕಾರಕ್ಕೆ ಬಂದ ದಿನದಿಂದಲೇ ತ್ಯಾಗ ಮಾಡಲು ಜನಕ್ಕೆ ಕರೆಯ ಮೇಲೆ ಕರೆ, ಎರಡೇ ವಾರದೊಳಗೆ... ರೂಪಾಯಿ ಅಪಮೌಲ್ಯ ಒಂದಲ್ಲ... ಎರಡು ಬಾರಿ ಮೊದಲು ಶೇ. 9.56, ಮೂರು ದಿನಗಳೊಳಗೆ ಎರಡನೇ ಬಾರಿ 10.6 ರಿಂದ ಶೇ. 11.1 ವರೆಗೆ ಅಂದರೆ ಐ.ಎಂ.ಎಫ್ ಬಯಸಿದ ಶೇ. 18 ಕ್ಕೂ ಹೆಚ್ಚು!

ಮೊದಲಿಗೆ ಇದು ಅಪಮೌಲ್ಯವೇ ಅಲ್ಲ, ರೂಪಾಯಿ ಬೆಲೆಯ ಹೊಂದಾಣಿಕೆ ಎಂದರು ಹಣಕಾಸು ಮಂತ್ರಿಗಳು- ನಂತರ ಐ.ಎಂ.ಎಫ್‌ನ ಮನತಣಿಸಲು ಅಲ್ಲ ಎಂದು ಎರಡನೇ ಸುಳ್ಳು ಈಗಂತೂ ಬಟ್ಟಬಯಲಾಗಿರುವ ಸುಳ್ಳುಗಳು ಇವು.

ಇದು ಕೇವಲ ಆರಂಭ ಎಂದಿತ್ತು ಆಗ ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'

ಹಣದುಬ್ಬರ ಮಾರಿಯನ್ನು ತಂದಿದೆ. ಜನಗಳ ಮೇಲೆ ಐ.ಎಂ.ಎಫ್. ಹೇಳಿದಂತೆ ಹೊರೆ ಹಾಕಲು ತಂದಿದೆ ಎಂದು ಎಚ್ಚರಿಸಿತು ಸಿಪಿಐ(ಎಂ) ಪೊಲಿಟ್‌ಬ್ಯೂರೋ. ಈಗ ಎರಡೂ ನಿಜವಾಗಿದೆ.

ಹೊಸ ವ್ಯಾಪಾರ ನೀತಿಯ ಘೋಷಣೆ- ವಿದೇಶಿ ವಿನಿಮಯ ದ್ವಂದ್ವ ಮಾರುಕಟ್ಟೆ ನಿರ್ಮಿಸಿ ಸಟ್ಟಾ ವ್ಯಾಪಾರಿಗಳಿಗೆ ಅಪಾರ ಲಾಭ ಸುಲಿಯುವ ಅವಕಾಶ - ವ್ಯಾಪಾರದ "ಉದಾರೀಕರಣ" ಆಮದಿನ ಮೇಲೆ ದೇಶದ ಹಿತಾಸಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಕಿದ್ದ ಮಿತಿಗಳ ರದ್ದು.

ಆಹಾರ, ರಸಗೊಬ್ಬರ ಮೇಲಿನ ಸಬ್ಸಿಡಿ ಕಡಿತದ ಸೂಚನೆ.

ನಾಲ್ಕು ಬಾರಿ ಚಿನ್ನವನ್ನು ಗುಪ್ತವಾಗಿ ಸಾಗಿಸಿ ಬ್ಯಾಂಕ್ ಆಫ್ ಇಂಗ್ಲೆಂಡಿನಲ್ಲಿ ಒತ್ತೆ- ದೇಶದ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಹದಗೆಟ್ಟಿದೆ ಎಂಬ ಭಯ ಹುಟ್ಟಿಸುವ ಪ್ರಯತ್ನ.

ಡೀಸೆಲ್, ಸೀಮೆ ಎಣ್ಣೆ ಸಾಗಾಣಿಕೆ ಬೆಲೆಯೇರಿಕೆ.

584 ಕೋಟಿ ರೂ.ಗಳ ಹೊಸ ತೆರಿಗೆ, ಪ್ರಯಾಣ ದರವನ್ನು ಶೇ. 12.5 - 15 ದವರೆಗೆ ದೊಡ್ಡ ನಗರಗಳ ಜನಸಾಮಾನ್ಯರು ಅವಲಂಬಿಸಿರುವ ಉಪನಗರ ರೈಲ್ವೇ ಪ್ರಯಾಣದರಗಳಲ್ಲಿ ಶೇ. 15-17 ಹೆಚ್ಚಳ, ಸಾಗಾಣಿಕೆ ದರದಲ್ಲಿ ಶೇ. 10 ಏರಿಕೆಯ ರೈಲ್ವೇ ಬಜೆಟ್.

ಗುತ್ತೇದಾರಿ ಕಂಪೆನಿಗಳ ಮೇಲಿನ ಆಸ್ತಿ ಮಿತಿ ರದ್ದು ಮಾಡಿದ, ಉದ್ದಿಮೆಗಳಿಗೆ ಪರವಾನಿಗೆಯನ್ನು ಕೇವಲ 18 ನಿರ್ದಿಷ್ಟ ಗುಂಪುಗಳಿಗೆ ಸೀಮಿತಗೊಳಿಸಿ ಉಳಿದ ಕ್ಷೇತ್ರಗಳಲ್ಲಿ ಮುಕ್ತ ಅವಕಾಶ ನೀಡಿದ, ಸಾರ್ವಜನಿಕ ವಲಯವನ್ನು ಮೊಟಕುಗೊಳಿಸುವ, ಖಾಸಗೀಕರಣದತ್ತ ಸಾಗಿಸುವ, ಸಣ್ಣ ಉದ್ದಿಮೆಗಳನ್ನು ದೊಡ್ಡ ಬಂಡವಾಳಶಾಹಿಗಳಿಗೆ ಆಹಾರವಾಗಿಸುವ, ವಿದೇಶೀ ಇಕ್ವಿಟಿಯನ್ನು ಶೇ. 51 ಕ್ಕೇರಿಸಿ ದೇಶೀ- ವಿದೇಶೀ ಬಂಡವಾಳಶಾಹಿಗಳ ಲೂಟಿಗೆ ಮುಕ್ತದ್ವಾರ ತೆರೆದು ಕೈಗಾರೀಕರಣದ ಸ್ವಾವಲಂಬನೆಯ ಹಾದಿ ತೊರೆದ ಹೊಸ ಕೈಗಾರಿಕಾ ನೀತಿಯ ಘೋಷಣೆ.

ಬಜೆಟ್ ಕೊರತೆಯನ್ನು ಐ.ಎಂ.ಎಫ್. ಸೂಚಿಸಿದ 6.5 ಕ್ಕೆ ಇಳಿಸಲು ಸಕ್ಕರೆ, ರಸಗೊಬ್ಬರದ ಮೇಲಿನ ಸಬ್ಸಿಡಿ ರದ್ದು ಮಾಡಿ, ರಸಗೊಬ್ಬರ ಬೆಲೆ ಶೇ. 40 ಹೆಚ್ಚಿಸಿ, ಪೆಟ್ರೋಲ್, ಅಡಿಗೆ, ಅನಿಲ ಇತ್ಯಾದಿಗಳ ಬೆಲೆ ಏರಿಸಿದ, ಆಸ್ತಿ ತೆರಿಗೆಗಳ್ಳರಿಗೆ ಕೊನೆಯ ಎಚ್ಚರಿಕೆಯ ನಾಟಕವಾಡಿದ ಬಜೆಟ್ - ಭಾಗಶಃ ಉತ್ತಮವಾದ ಎಂದು ವಾಜಪೇಯಿ ನುಡಿದ, ಭಾರತವನ್ನೇ ದೊಡ್ಡ ಭಿಕ್ಷಾಪಾತ್ರೆಯಾಗಿಸಿದೆ ಎಂದು ಸಿಪಿಐ(ಎಂ)ನ ಸೋಮನಾಥ ಚಟರ್ಜಿಯವರು ವರ್ಣಿಸಿದ ಬಜೆಟ್

ರೇಶನ್‌ನಲ್ಲಿ ಸಕ್ಕರೆ ಬೆಲೆಯನ್ನು ರೂ. 5.25 ರಿಂದ 6.10 ಕ್ಕೆ ಏರಿಸುವ ಘೋಷಣೆ.

ಆಗಸ್ಟ್

ವಿದ್ಯುತ್ ಉತ್ಪಾದನೆಯನ್ನು ಖಾಸಗೀ ಕ್ಷೇತ್ರಕ್ಕೆ ನೀಡುವಂತೆ ಮಾಡಲು ವಿದ್ಯುತ್ ಕಾಯ್ದೆಗೆ ತಿದ್ದುಪಡಿ.

ಎಂಭತ್ತು ದಿನಗಳಾಗುವಷ್ಟರಲ್ಲಿ ಹಣದುಬ್ಬರ ಶೇ. 14.6. ಆದರೂ ಒಂದು ತಿಂಗಳೊಳಗೆ ಬೆಲೆಯೇರಿಕೆ ತಡೆಯುವ ಹಣಕಾಸು ಮಂತ್ರಿಗಳ ಭರವಸೆ - ಆಮೇಲೆ ಬಯಲಾದ ಮತ್ತೊಂದು ಸುಳ್ಳು.

ಸೆಪ್ಟೆಂಬರ್

ನೂರು ದಿನಗಳಾಗುತ್ತಿದ್ದಂತೆ ಹಣದುಬ್ಬರ ಶೇ. 15.7. ಆದರೆ ಅತ್ತ ಅಮೇರಿಕಾದಲ್ಲಿ ವಾಣಿಜ್ಯ ಮಂತ್ರಿಗಳ ಭಿಕ್ಷಾಟನೆ ಅದಕ್ಕೆ ಅನುಕೂಲವಾಗುವಂತೆ ಎಂ.ಆರ್.ಟಿ.ಪಿ. ಶಾಸನವನ್ನು ದೊಡ್ಡ ಬಂಡವಾಳಶಾಹಿಗಳ ಪರವಾಗಿ ತಿದ್ದುಪಡಿ ಮಾಡುವ ಸುಗ್ರೀವಾಜ್ಞೆ.

ಅಮೇರಿಕಾ ವ್ಯಾಪಾರ ಪ್ರತಿನಿಧಿ ಕಾರ್ಲಾ ಹಿಲ್ಸ್‌ಗೆ ಮಹಾ ಸ್ವಾಗತ ನೀಡಲು ಹಣಕಾಸು ಕಾರ್ಯದರ್ಶಿ ಎಸ್.ಪಿ. ಶುಕ್ಲಾರವರಿಗೆ ಆ ಹುದ್ದೆಯಿಂದ ಗೇಟ್ ಪಾಸ್! ಏಕೆಂದರೆ ಆತ ಕಳೆದ ಒಂದು ದಶಕದಿದ ಗ್ಯಾಟ್ ಮಾತುಕತೆಗಳಲ್ಲಿ ಭಾರತ ಮತ್ತು ಇತರ ಮೂರನೇ ಜಗತ್ತಿನ ದೇಶಗಳನ್ನು ಯಶಸ್ವಿಯಾಗಿ ಎದುರಿಸಿಕೊಂಡು ಬಂದಿದ್ದರು.

ಅಕ್ಟೋಬರ್

ಕಾರ್ಲಾ ಹಿಲ್ಸ್ ಭೇಟಿ ಭಾರತದ ಮಣ್ಣಲ್ಲೇ ನಿಂತು ಪೇಟೆಂಟ್ ಕುರಿತ ಭಾರತದ ನಿಲುವಿಗೆ ದುರಂದಹಕಾರದ ತಿರಸ್ಕಾರ ನೀಡಿದರೂ ಕೈ ಬಾಗಿಸಿ ನಿಂತರು ನಮ್ಮ ಆಳರಸರು.

ದೇಶದ ಆರ್ಥಿಕ ಸ್ವಾತಂತ್ರ್ಯವನ್ನು ಮಾರುವ ಹಣಕಾಸು ಮಂತ್ರಿಗಳ ಘೋಷಣೆಗಳು - ಬ್ಯಾಂಕಾಂಕ್‌ನಲ್ಲಿ ಐ.ಎಂ.ಎಫ್ ಸಭೆಯಲ್ಲಿ ಹಾಜರಾಗಲು ಹೋದ ಸಂದರ್ಭದಲ್ಲಿ "ಅಸಮರ್ಥ" ಸಾರ್ವಜನಿಕ ವಲಯದ ಘಟಕಗಳನ್ನು ಮುಚ್ಚುವ, ಸಾರ್ವಜನಿಕ ವಲಯದ ಶೇರುಗಳನ್ನು ಮಾರುವ, ವಿದೇಶೀ ಬ್ಯಾಂಕುಗಳಿಗೆ ಖಾಸಗೀ ಬ್ಯಾಂಕುಗಳಿಗೆ ವಿಶೇಷ ಪ್ರೋತ್ಸಾಹ ನೀಡುವ ಭರವಸೆ - ಬ್ಯಾಂಕಾಂಕ್ ಕೌಲಾಲಂಪುರಗಳಲ್ಲಿ!.

ಮುಂಗಾರು ಬೆಳೆ ಬಂದು ಅಕ್ಟೋಬರ್ ತಿಂಗಳು ಮುಗಿಯುತ್ತಿದ್ದರೂ ನಿಲ್ಲದ ಬೆಲೆಯೇರಿಕೆ. ಹಣಕಾಸು ಮಂತ್ರಿಗಳ ಇನ್ನೊಂದು ಭರವಸೆಯ ಟೊಳ್ಳುತನ ಬಯಲು.

ನವಂಬರ್

ಐ.ಎಂ.ಎಫ್ ನಿರ್ದೇಶಕ ಕಾಮೆಡೆಸ್ಸುಸ್ ಭಾರತ ಭೇಟಿ - ಭಾರತ ಸರಕಾರ ತನ್ನ ಆರ್ಥಿಕ ಚಟುವಟಿಕೆಗಳನ್ನು ಮಿತಿಗೊಳಿಸಬೇಕು, ಅಂದರೆ ಅದನ್ನು ದೇಶೀವಿ ದೇಶೀ ಖಾಸಗೀ ಬಂಡವಾಳದಾರರಿಗೆ ಬಿಡಬೇಕು ಎಂಬ ಆದೇಶ - ಶಿರಸಾವಹಿಸುವ ಭರವಸೆ ನಮ್ಮ ಆಳರಸರಿಂದ.

ಭಾರತ ಅಮೇರಿಕಾ ಜಂಟಿ ವ್ಯಾಪಾರ ಮಂಡಳಿಯ ಅಧ್ಯಕ್ಷ ಡೋನಾಲ್ಡ್ ಕೆಂಡಾಲ್ ಭೇಟಿ-ವಿದೇಶೀ ಬಂಡವಾಳಿಗರ ಭಯವನ್ನೆಲ್ಲಾ ದೂರ ಮಾಡಿ ಎಂಬ ಆದೇಶ - ಜೀ ಹುಜೂರ್!

ರೋಗಗ್ರಸ್ತ ಘಟಕಗಳನ್ನು ಮುಚ್ಚುತ್ತೇವೆ - ಈಗ ಮುಂಬೈಯಲ್ಲಿ ಹಣಕಾಸು ಮಂತ್ರಿಗಳ ಘೋಷಣೆ. 32 ಲಾಭದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಶೇ. 20 ಶೇರುಗಳನ್ನು ಮಾರಲು ನಿರ್ಧಾರ- ಕಲ್ಲಿದ್ದಲು ಗಣಿಗಳನ್ನು ಖಾಸಗಿಯವರಿಗೆ ತೆರೆಯುವ ಸೂಚನೆ- ಸಾಮ್ರಾಜ್ಯಶಾಹಿಗಳು ಬಗ್ಗು ಎಂದರೆ ಇಲ್ಲ ಹುಜೂರ್- ಸಾಷ್ಟಾಂಗ ನಮಸ್ಕಾರವನ್ನೇ ಮಾಡುತ್ತೇವೆ ಎಂದು ಉರುಳುವ ನೀತಿ. ವಿದೇಶೀ ಇಕ್ವಿಟಿಗಳನ್ನು ಶೇ. 51 ಮಾತ್ರವಲ್ಲ ಶೇ. 100 ರವರೆಗೂ ಹೆಚ್ಚಿಸಲು ತಾನು ಸಿದ್ಧ ಎಂಬ ದೈನ್ಯದ ನುಡಿ.

ರಾಷ್ಟ್ರೀಕೃತ ಬ್ಯಾಂಕುಗಳ ಖಾಸಗೀಕರಣದ ಸೂಚನೆ ನೀಡಿದ ನರಸಿಂಹನ್ ವರದಿ.

ಭಾರತದ ಆರ್ಥಿಕತೆ ಐ.ಎಂ.ಎಫ್ ಉಸ್ತುವಾರಿಗೆ ನೂರು ವರ್ಷಕಾಲ ಭಾರತದ ಹೊಸ ಆರ್ಥಿಕ ನೀತಿಗಳ ಉಸ್ತುವಾರಿಗೆ ನವದೆಹಲಿಯಲ್ಲಿ ಐ.ಎಂ.ಎಫ್ ಕಚೇರಿ! - ಕಾರ್ಲಾ ಹಿಲ್ಸ್, ಕಾಮೆಡೆಸ್ಸುಸ್ ಹಾಗೂ ಕೆಂಡಾಲ್ ಈ ಮೂರು ಅಂತರಾಷ್ಟ್ರೀಯ ಬಂಡವಾಳಶಾಹಿಗಳ ಪ್ರತಿನಿಧಿಗಳ ಭೇಟಿಯ ಫಲ.

ದುಡಿಯುವ ಜನಗಳ ಜೀವನ ವೆಚ್ಚ ಸೂಚ್ಯಂಕದ ನಾಗಾಲೋಟ ಜ್ಯಾರಿ- ಬೆಲೆಯಿಳಿಸುವಂತೆ ತಮ್ಮ ಬಳಿ ಮಂತ್ರ ದಂಡವಿಲ್ಲವೆಂದು ಹಣಕಾಸು ಮಂತ್ರಿಗಳು.

ಡಿಸೆಂಬರ್

ಬಿಜೆಪಿ ಬೆಂಬಲದಿಂದ ಬಿ.ಐ.ಎಫ್. ಆರ್ ಶಾಸನಕ್ಕೆ ತಿದ್ದುಪಡಿ ತಂದು 50 ರೋಗಗ್ರಸ್ತ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಗಲ್ಲು ಶಿಕ್ಷೆ ನೀಡಲು ಲಕ್ಷಾಂತರ ಕಾರ್ಮಿಕರನ್ನು ಬೀದಿ ಪಾಲು ಮಾಡಲು ಸಿದ್ಧತೆ.

ಹಾಲು ಉತ್ಪನ್ನಗಳ ಉತ್ಪಾದನೆಯಲ್ಲಿ 'ಉದಾರೀಕರಣ' ತಂದು ಬಡವರ ಹಾಲನ್ನು ಶ್ರೀಮಂತರ ಚಾಕೋಲೇಟ್‌ಗಳತ್ತ ಹರಿಸಲು ವಿದೇಶೀ ಕಂಪೆನಿಗಳಿಗೆ ಪರವಾನಿಗೆ.

ಐ.ಎಂ.ಎಫ್ ಸಾಲಕ್ಕೆ ಭಾರತ ಸರಕಾರ ಸಲ್ಲಿಸಿದ ಮನವಿಯ ಒಕ್ಕಣಿಕೆ ಕೊನೆಗೂ ಭಾರಿ ಒತ್ತಾಯಕ್ಕೆ ತಲೆಬಾಗಿ ನಾಲ್ಕು ತಿಂಗಳ ನಂತರ ಸಂಸತ್ತಿನಲ್ಲಿ ಮಂಡನೆ. ಐ.ಎಂ.ಎಫ್-ವಿಶ್ವಬ್ಯಾಂಕ್‌ಗೆ ಶರಣಾಗತಿಯ ಸ್ಪಷ್ಟ ಸಾಕ್ಷಿ ಹೊತ್ತ ಭಾರತ ಸರಕಾರದ ಗುಲಾಮ ಬುದ್ಧಿ ತೋರುವ ಪತ್ರ. ಈ ಮನವಿಯನ್ನು ಬರೆದಿರುವುದು ಕೂಡಾ ಭಾರತ ಸರಕಾರದ ಪ್ರತಿನಿಧಿಗಳಲ್ಲ- ಐ.ಎಂ.ಎಫ್ ಪ್ರತಿನಿಧಿಗಳೇ ಬರೆದುಕೊಟ್ಟ ಮನವಿ ಎಂದು ಪತ್ರಿಕೆಗಳು ವರದಿ ಮಾಡಿವೆ. ಪ್ರಧಾನಮಂತ್ರಿ ಹಣಕಾಸು ಮಂತ್ರಿಗಳು ನಾಲ್ಕು ತಿಂಗಳಿಂದ ದೇಶದ ಜನಗಳಿಗೆ ಹೇಳುತ್ತಾ ಬಂದ ಸುಳ್ಳುಗಳು ಕೊನೆಗೆ ಬಯಲಾದರೂ ಕಾಂಗ್ರೆಸ್ಸಿಗಂತೂ ನಾಚಿಕೆಯಿಲ್ಲ. ಹೊಸ ವರ್ಷದ ಉಡುಗೊರೆ ನೀಡಲು ಸಿದ್ಧತೆ- ದಶಕದ ಹಿಂದೆ ದೇಶದಿಂದ ಒದ್ದೋಡಿಸಿದ ಐ.ಬಿ.ಎಂ, ಕೋಕಾ-ಕೋಲಾಗಳಿಗೆ ಬೆನ್ನು ಬಗ್ಗಿಸಿ ಡೊಗ್ಗು ಸಲಾಮು ಹೊಡೆದು ಸ್ವಾಗತ.

ಜನವರಿ

ಭಾರತದ ಜನತೆಗೂ ಹೊಸ ವರ್ಷದ ಭಾರೀ ಉಡುಗೊರೆ. ಪಡಿತರದ ಮೂಲಕ ನೀಡುವ ಅಕ್ಕಿ, ಗೋಧಿಗಳ ಬೆಲೆಯಲ್ಲಿ ಶೇ. 33 ರಷ್ಟು ಬೆಲೆಯೇರಿಕೆ. 'ಮುಕ್ತ' ಮಾರುಕಟ್ಟೆಗೆ ಇದರಿಂದ ಇನ್ನಷ್ಟು ಪ್ರೋತ್ಸಾಹ [illegible] ಬೆಲೆ 10 ರೂ. ಗೂ ಹೆಚ್ಚು.

ಸಾಲದೆಂಬಂತೆ ಮತ್ತೆ ಪೆಟ್ರೋಲ್, ಡೀಸೆಲ್, ಸೀಮೆ ಎಣ್ಣೆ, ಬೆಲೆಯೇರಿಕೆ, ಕಲ್ಲಿದ್ದಲು ಬೆಲೆಯೇರಿಕೆ- ಒಟ್ಟಿನಲ್ಲಿ ಸಾಗಾಣಿಕೆ ವೆಚ್ಚ ಏರಿಕೆ.

ಡೇರಿ ಹಾಲಿನ ಬೆಲೆಯೇರಿಕೆ ಬಸ್ ದರ ಏರಿಕೆಯ ನಿರಂತರ ಬೆದರಿಕೆ.

ಇದೂ ಸಾಲದೆಂದನಿಸಿತೇನೋ ಐ.ಎಂ. ಎಫ್ ಗುಲಾಮರಿಗೆ - ಮತ್ತೆ ರೇಶನ್ ಮೂಲಕ ನೀಡುವ ಸಕ್ಕರೆ ಬೆಲೆಯೇರಿಕೆ ಕಬ್ಬಿಣದ ಬೆಲೆಗಳ ಹತೋಟಿ ರದ್ದು ಮಾಡಿ ಅವುಗಳ ಬೆಲೆಯೇರಿಕೆ.

ರೈಲು ರಿಸರ್ವೇಷನ್ ದರದಲ್ಲಿ ಏಕಾಏಕಿ ಹೆಚ್ಚಳ. ಬಜೆಟ್‌ಗೆ ಮೊದಲೇ ಐ.ಎಂ. ಎಫ್ ಗುಲಾಮರ ಆಟಾಟೋಪ.

ಫೆಬ್ರವರಿ 2, 1992

ನಮ್ಮ ವೈಜ್ಞಾನಿಕ ಬುದ್ಧಿಶಕ್ತಿಗೆ ಮಂಕುಬಡಿಯುವ "ಬೌದ್ಧಿಕ ಆಸ್ತಿಹಕ್ಕು"ಗಳು

ಬೌದ್ಧಿಕ ಆಸ್ತಿಹಕ್ಕುಗಳು ಅಂತ ಬೇರೆ ಇದೆಯೇ? ಎಂದು ಹುಬ್ಬೇರಿಸಬೇಡಿ! ಇಂತಹ ಹಕ್ಕುಗಳು ಇವೆ ಮಾತ್ರವಲ್ಲ ಶ್ರೀಮಂತರ ಆಸ್ತಿ ಹಕ್ಕುಗಳು ಬಡವರ ಶೋಷಣೆಯ ಉಪಕರಣವಾದಂತೆ ಬೌದ್ಧಿಕ ಆಸ್ತಿ ಹಕ್ಕುಗಳು ಸಾಮ್ರಾಜ್ಯಶಾಹಿ ಶ್ರೀಮಂತ ದೇಶಗಳಿಂದ ಮೂರನೇ ಜಗತ್ತಿನ ಬಡದೇಶಗಳ ಶೋಷಣೆಗೆ ಪ್ರಮುಖ ಉಪಕರಣವೂ ಹೌದು.

ಇತ್ತೀಚಿಗೆ GATT ನ ಉರುಗ್ವೆ ಸುತ್ತಿನ ಮಾತುಕತೆಗಳ ವಿಷಯಸೂಚಿಯನ್ನು ತಯಾರಿಸಲು ಜಿನೇವಾದಲ್ಲಿ ನಡೆದ ಸಭೆಯಲ್ಲಿ "ಬೌದ್ಧಿಕ ಆಸ್ತಿ ಹಕ್ಕುಗಳು" ಮತ್ತು ಸೇವಾ ಕ್ಷೇತ್ರದಲ್ಲಿ ವ್ಯಾಪಾರವನ್ನು ಸೇರಿಸಬೇಕೆಂಬ ಸಾಮ್ರಾಜ್ಯಶಾಹಿ ಒತ್ತಡಕ್ಕೆ ಭಾರತ ಮಣಿದಿದೆ. ಈ ಮೂಲಕ ರಾಜೀವ್‌ಗಾಂಧಿ ಸರ್ಕಾರ ಭಾರತ ಮಾತ್ರವಲ್ಲ ಇಡೀ ಮೂರನೇ ಜಗತ್ತಿನ ದೇಶಗಳ ಹಿತಾಸಕ್ತಿಗಳಿಗೆ ತಿಲಾಂಜಲಿ ಇತ್ತಿದೆ. ಅಷ್ಟೇ ಅಲ್ಲ. ಈವರೆಗೆ ಭಾರತ-ಬ್ರೆಜಿಲ್‌ನ ಸಮರ್ಥ ಬೆಂಬಲದಿಂದ ಸಾಮ್ರಾಜ್ಯಶಾಹಿ ಒತ್ತಡಕ್ಕೆ ನೀಡಿದ ಪ್ರತಿರೋಧದ ನೀತಿ ತಲೆಕೆಳಗಾದಂತಾಗಿದೆ.

ಆಗಸ್ಟ್ 6, 1989

ಐ.ಎಂ.ಎಫ್. ಮೊಳಕಾಲೂರು ಎಂದರೆ ಭಾರತ ಸರ್ಕಾರ ಕಾಲಿಗೇ ಉರುಳಿದೆ

ಪ್ರಕಾಶ್ ಕಾರಾಟ್

ನರಸಿಂಹರಾವ್ ಸರಕಾರ ಐ.ಎಂ.ಎಫ್ ವಿಶ್ವಬ್ಯಾಂಕ್, ಅಮೇರಿಕನ್ ಒತ್ತಡಗಳೆದುರು ಶರವೇಗದಲ್ಲಿ ಕುಸಿಯುತ್ತಿದೆ. ಜುಲೈ 1991 ರಲ್ಲಿ ಹೊಸ ಕೈಗಾರಿಕಾ ನೀತಿ ಘೋಷಿಸಿದಂದಿನಿಂದ ಅದು ಬಹಳ ದೂರ ಸಾಗಿದೆ. ದೇಶದ ಸಾರ್ವಭೌಮತೆಗೇ ಸಂಚಾಕರ ತರುವ ದಾರಿಯಲ್ಲಿ ದೇಶದ ಇದುವರೆಗಿನ ಧೋರಣೆಗಳನ್ನು ಸಂಪೂರ್ಣವಾಗಿ ತಿರುಗು-ಮುರುಗುಗೊಳಿಸುವಲ್ಲಿ ಬಿರುಸಿನಿಂದ ಅಡಗಿರುವ ಪ್ರಮುಖರೆಂದರೆ ಹಣಕಾಸು ಮಂತ್ರಿ ಚಿದಂಬರಂ. ಇತರ ಮಂತ್ರಿಗಳಿಗೆಲ್ಲಾ ಅವರೊಡನೆ ಹೆಜ್ಜೆ ಹಾಕಲು ಹೆಣಗುತ್ತಿದ್ದಾರೆ.

ಕಾಂಗ್ರೆಸ್ (ಐ) ಸರಕಾರ ಅಧಿಕಾರ ವಹಿಸಿಕೊಂಡಾಗ ಪರೋಕ್ಷವಾಗಿ ಮಾಡುತ್ತಿದ್ದನ್ನು ಈಗ ಪ್ರತ್ಯಕ್ಷವಾಗಿಯೇ ಮಾಡುತ್ತಿದೆ. ಕಳೆದ ಕೆಲವು ವಾರಗಳಲ್ಲಿ ಐ.ಎಂ.ಎಫ್-ವಿಶ್ವಬ್ಯಾಂಕ್‌ನ ನಿರ್ದೇಶನಗಳನ್ನೆಲ್ಲಾ ಚಾಚೂ ತಪ್ಪದೆ ಪಾಲಿಸಲು ಎಷ್ಟೊಂದು ಆತುರ ತೋರುತ್ತಿದೆಯೆಂದರೆ ಮೊಳಕಾಲೂರು ಎಂದರೆ ಇಲ್ಲ, ನಿಮ್ಮ ಕಾಲಿಗೇ ಬೀಳುತ್ತೇನೆ ಎಂಬ ಆತ್ಮಗೌರವವನ್ನೇ ಸಂಪೂರ್ಣ ಕಳಕೊಂಡಂತೆ ನಾಚಿಕೆಯೇ ಇಲ್ಲದಂತೆ ಭಾರತ ಸರಕಾರ ವರ್ತಿಸುತ್ತಿದೆ. ಭಾರತಕ್ಕೆ ಇನ್ನಷ್ಟು ಸಾಲ ದೇಡಲು ಹಲ್ಲು ಗಿಂಜುತ್ತಾ ಸ್ವಾವಲಂಬನೆಯ ಮುಖವಾಡ ಕೂಡಾ ಈ ಸರಕಾರಕ್ಕೆ ಈಗ ಬೇಡವಾಗಿದೆ.

ಐ.ಎಂ.ಎಫ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಮೈಕೆಲ್ ಕಾಮ್‌ಡೆಸುಸ್ ಭೇಟಿಯ ನಂತರ ಭಾರತಕ್ಕೆ 2.26 ಶತಕೋಟಿ ಡಾಲರುಗಳ ತಾತ್ಕಾಲಿಕ ಸಾಲ ದೊರೆಯಿತು. ಅದರೊಂದಿಗೆ ಭಾರತ ಸರಕಾರ ಇತಿಹಾಸದಲ್ಲಿ ಮೊದಲ ಬಾರಿಗೆ ಇ.ಎಸ್.ಎ.ಎಫ್ ಸಾಲಕ್ಕೆ ಅರ್ಜಿ ಹಾಕಿದೆ ಎಂಬ ಸುದ್ದಿಯೂ ಪ್ರಕಟಗೊಂಡಿದೆ. ಇ.ಎಸ್.ಎ.ಎಫ್ ಎಂದರೆ "ಆರ್ಥಿಕ ಆಧಾರಭೂತ ಹೊಂದಾಣಿಕೆ"ಗಾಗಿ ನೀಡುವ ಸಾಲಸೌಲಭ್ಯ, ಈ ಸೌಲಭ್ಯ ಪಡೆಯಲು ಎಂತಹ ಅವಮಾನಕಾರೀ ಶರತ್ತುಗಳನ್ನು ಪಾಲೀಸಬೇಕೆಂದರೆ ಈ ಸಾಲ ಪಡೆಯುವವರನ್ನು ಐ.ಎಂ.ಎಫ್ ವಲಯಗಳಲ್ಲಿ 'ಭಿಕ್ಷುಕರ ಕ್ಲಬ್'ನ ಸದಸ್ಯರೆನ್ನಲಾಗುತ್ತಿದೆ.

ಅಂದರೆ ಈಗ ಐ.ಎಂ.ಎಫ್.- ವಿಶ್ವ ಬ್ಯಾಂಕ್‌ನ ಶರತ್ತುಗಳಿಗೆ ತಲೆಬಾಗುವುದಕ್ಕಿಂತಲೂ ಬಹಳ ಮುಂದೆ ಸಾಗಿದ್ದಾರೆ. ಈಗ ಶರತ್ತುಗಳನ್ನು ಪಾಲಿಸುವ ಪ್ರಶ್ನೆಗೆ ಅರ್ಥವಿಲ್ಲ ಏಕೆಂದರೆ ಈ ಸಾಲಸೌಲಭ್ಯಕ್ಕೆ ಅರ್ಜಿ ಹಾಕುವ ಮೂಲಕ ಭಾರತದ ಆರ್ಥಿಕವನ್ನು ಮುಂದಿನ ಮೂರು ವರ್ಷ ಐ.ಎಂ.ಎಫ್‌ನ ಸಂಪೂರ್ಣ ಉಸ್ತುವಾರಿಗೆ ಬಿಟ್ಟುಕೊಡುವ ಒಪ್ಪಂದಕ್ಕೆ ಭಾರತ ಸರಕಾರ ಬಿಟ್ಟುಕೊಟ್ಟಂತಾಗಿದೆ. ಒಂದಾದ ಮೇಲೊಂದರಂತೆ ಅಮೇರಿಕನ್ ವ್ಯಾಪಾರ ಪ್ರತಿನಿಧಿ ಕಾರ್ಲಾ ಓಲ್ಸ್, ಐ.ಎಂ.ಎಫ್ ಮ್ಯಾನೇಜಿಂಗ್ ಡೈರೆಕ್ಟರ್ ಕಾಮಡೆಸುಸ್ ಹಾಗೂ ಭಾರತ-ಅಮೇರಿಕಾ ಜಂಟಿ ವ್ಯಾಪಾರ ಮಂಡಳಿಯ ಸಹ ಅಧ್ಯಕ್ಷ ಹಾಗೂ ಪೆಪ್ಸಿಕೋದ ಅದ್ಯಕ್ಷ ಡೊನಾಲ್ಡ್ ಕೆಂಡಾಲ್‌ರ ಭಾರತ ಭೇಟಿಗಳ ಅರ್ಥ ಇದೇ. ಹಿಂದೆ ರೋಮ್ ಸಾಮ್ರಾಜ್ಯದ ರಾಯಭಾರಿಗಳು ವಸಾಹತುಗಳಿಗೆ ಹೋಗಿ ಕಾಣಿಕೆ ತಂದಂತೆ ಬಂದು ಹೋದ ಈ ಮೂವರ ಎದುರು ಭಾರತ ಸರಕಾರ ಗುಲಾಮರಂತೆ ಹಲ್ಲುಗಿಂಜಿದೆ.

ಈ ಸರಕಾರದ ಹೊಸ ಆರ್ಥಿಕ ನೀತಿಗಳನ್ನು ಆರಂಭದಲ್ಲೇ ಟೀಕಿಸಿದವರು ಎಚ್ಚರಿಸಿದಂತೆ ಹಣದುಬ್ಬರಕ್ಕೆ ತುಪ್ಪ ಸುರಿದಂತಾಗಿದೆ. ತಾತ್ಕಾಲಿಕ ಸಾಲ ಪಡೆದು ಸುಧಾರಿಸಿದ್ದ ವಿದೇಶೀ ವಿನಿಮಯ ಮತ್ತೆ ಸರ್ರನೆ 'ಇಳಿಯುವ' ಸಂಕೇತಗಳೆಲ್ಲಾ ಇವೆ. ಐ.ಎಂ.ಎಫ್. ಮ್ಯಾನೇಜಿಂಗ್ ಡೈರೆಕ್ಟರ್‌ನ ನಿರ್ದೇಶನದಂತೆ ಆಮದು ಹೆಚ್ಚಾಗಲಿದೆ. ರಫ್ತು ಇಳಿಮುಖವಾಗಲಿದೆ. ಏಕೆಂದರೆ ಅಮೇರಿಕಾದಂತ ಮುಂದುವರಿದ ದೇಶಗಳಲ್ಲೇ ಆರ್ಥಿಕ ಹಿಂಜರಿತ ಕಾಣಲಾಗುತ್ತಿದೆ. ದೇಶದ ವ್ಯಾಪಾರ ಖೋತಾ ಕಮ್ಮಿಯಾಗುವ ಬದಲು ಇನ್ನಷ್ಟು ಹೆಚ್ಚಲಿದೆ.

ಜನ ಹಣದುಬ್ಬರದಿಂದ ಒದ್ದಾಡಿದರೇನಂತೆ, ಕೆಲಸ ಕಳಕೊಂಡು ನರಳಿದರೇನಂತೆ- ಇದು ಸರಕಾರದಲ್ಲಿರುವ ಮುಕ್ತ ಮಾರುಕಟ್ಟೆಯ ಪ್ರೇಮಿಗಳ ಪ್ರಶ್ನೆ. ಅತ್ತ ಭಾರತ ಸರಕಾರ ಸಾರ್ವಜನಿಕ ಖಾಸಗೀ ಉದ್ದಿಮೆಗಳನ್ನು ದೊಡ್ಡ ಪ್ರಮಾಣದಲ್ಲಿ ಮುಚ್ಚುವಂತೆ ಪ್ರೇರೀಪಿಸುವ 'ಎಕ್ಸಿಟ್ ಪಾಲಿಸಿ' ರೂಪಿಸುವಂತೆ ಒತ್ತಡ ಹಾಕಲು 50 ಕೋಟಿ ಡಾಲರುಗಳ 'ರಾಷ್ಟ್ರೀಯ ನವೀಕರಣ ನಿಧಿ'ಯ ಸಾಲ ನೀಡಿದೆ ವಿಶ್ವ ಬ್ಯಾಂಕ್!

ಆರ್ಥಿಕ ರಂಗದಲ್ಲಿ ಇಂತಹ ನಾಚಿಕೆಗೇಡಿನ ವರ್ತನೆಗೆ ಅನುಗುಣವಾಗಿ ಮಿಲಿಟರಿ ರಂಗದಲ್ಲೂ ಸರಕಾರ ಅಮೇರಿಕಾದೊಡನೆ ಸಂಬಂಧ ಕಲ್ಪಿಸಿಕೊಳ್ಳುವ ವಿನಾಶಕಾರಿ ದಾರಿ ಹಿಡಿದಿದೆ. ಮಿಲಿಟರಿ ಉತ್ಪಾದನೆ, ತರಬೇತಿಯಲ್ಲಿ ಅಮೇರಿಕವನ್ನು ವ್ಯವಸ್ಥಿತವಾಗಿ ಅವಲಂಬಿಸುವ ಈ ನೀತಿಯನ್ನು ಈಗ ಜಗತ್ತಿನ ಏಕೈಕ ಸೂಪರ್ ಪವರ್‌ನೊಂದಿಗೆ ನಾವು ಸಂಬಂಧ ಕುದುರಿಸಕೊಳ್ಳಬೇಕು ಎಂಬ ಹೆಸರಿನಲ್ಲಿ ಅಂಗೀಕರಿಸಲಾಗಿದೆ.

ಅತ್ತ ರಾಯಭಾರ ರಂಗದಲ್ಲೂ ಬುಶ್ ಆಡಳಿತ ಭಾರೀ ಒತ್ತಡ ಹಾಕುತ್ತಿದೆ -(1) ಅಣ್ವಸ್ತ್ರ ವಿಸ್ತರಣೆ ತಡೆ ಕುರಿತಾದ ಸಂಧಿಗೆ ಸಹಿ ಹಾಕಲು (2) ದಕ್ಷಿಣ ಏಷ್ಯಾದಲ್ಲಿ ಪರಮಾಣು ಮುಕ್ತ ವಲಯ ಮಾಡಬೇಕೆಂಬ ಪಾಕಿಸ್ತಾನದ ಸಲಹೆಯನ್ನು ಒಪ್ಪಲು ಹಾಗೂ (3) ಇರಾನ್‌ಗೆ 10 ಮೆಗವಾಟ್ ಪರಮಾಣು ಸ್ಥಾವರ ಮಾರದಂತೆ ತಡೆಯಲು. ಮೂರನೇ ಜಗತ್ತಿನಲ್ಲಿ ಗಮನಾರ್ಹ ತಾಂತ್ರಿಕ ಸಾಮರ್ಥ್ಯ ಹೊಂದಿರುವ ಭಾರತವನ್ನು ಬ್ಲಾಕ್ ಮೇಲ್ ಮಾಡುವ ತಂತ್ರಗಳಿವು. ಅಮೇರಿಕಾ ಈಗಾಗಲೇ ಅದೇ ಇರಾನ್‌ಗೆ 5 ಮೆಗವಾಟ್ ಸಾಮರ್ಥ್ಯದ ಪರಮಾಣು ಸ್ಥಾವರವನ್ನು ಮಾರಿರುವುದನ್ನು ಜ್ಞಾಪಿಸುತ್ತಾ ಭಾರತದ ಅಣು ಶಕ್ತಿ ಆಯೋಗದ ಅಧ್ಯಕ್ಷ, ಡಾ. ಕೆ.ಪಿ. ಶ್ರೀನಿವಾಸನ್ ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.- "ಪರಮಾಣು ಸ್ಥಾವರ ಸರಬರಾಜು ಮಾಡುವ ಹಕ್ಕು ಬಹುಶಃ ಬಿಳಿಯರಿಗೆ ಮಾತ್ರ ಇದೆ. ನಾವು ಕೇವಲ ಅವರಿಗೆ ಉಡುಪುಗಳನ್ನು ಚರ್ಮವನ್ನು ಕಬ್ಬಿಣದ ಅದುರನ್ನು ಮಾರಬೇಕು!" ಆದರೆ ಅಮೇರಿಕಾದ ಆಕ್ಷೇಪಣೆಯನ್ನು ಮೀರಿ ಇರಾನ್‌ಗೆ ಪರಮಾಣು ಸ್ಥಾವರ ಮಾರುವ ಧೈರ್ಯವನ್ನು ಈ ನರಸಿಂಹರಾವ್ ಸರಕಾರ ತೋರಲಾರದು.

ಕಳೆದ ಕೆಲವು ವಾರಗಳಲ್ಲಿ ಅಮೇರಿಕಾ, ಐ.ಎಂ.ಎಫ್. ವಿಶ್ವಬ್ಯಾಂಕ್ ಕುರಿತಂತೆ ಭಾರತ ವ್ಯವಹಾರ ಮಾಡುತ್ತಿರುವ ಒಂದು ಚಿತ್ರ ಇದು-ಒಂದೊಂದಾಗಿ ತನ್ನ ಸಾರ್ವಭೌಮತೆಯನ್ನೇ, ತನ್ನ ದೇಶಕ್ಕೆ ಯಾವುದು ಸರಿ ಎಂಬುದನ್ನು ನಿರ್ಣಯಿಸುವ ತನ್ನ ಹಕ್ಕನ್ನೇ ನಾಚಿಕೆಯಿಲ್ಲದೆ ಬಿಟ್ಟುಕೊಡುತ್ತಿದೆ ಈ ಸರಕಾರ.

ಈ ಶರಣಾಗತಿಯನ್ನು ವಿರೋಧಿಸುವ ಸಿಪಿಐ(ಎಂ) ಮತ್ತು ಇತರ ಎಡಶಕ್ತಿಗಳನ್ನು "ಅವರ ಹಳೆಯ ಕಾಲದಲ್ಲಿರುವವರು" ಎಂದು ಮೂದಲಿಸಲಾಗುತ್ತಿದೆ. ಆದರೆ ಈ ದೇಶ-ವಿರೋಧಿ ದಾರಿಯನ್ನು ಮಾರ್ಕ್ಸ್‌ವಾದಿಗಳಷ್ಟೇ ಅಲ್ಲ, ಹೆಚ್ಚೆಚ್ಚು ದೇಶಪ್ರೇಮಿ ಶಕ್ತಿಗಲು ವಿರೋಧಿಸಲಾರಂಬಿಸಿದ್ದಾರೆ. ನರಸಿಂಹರಾವ್ ಇತ್ತೀಚಿಗೆ ತನ್ನ ಸರಕಾರದ ನೀತಿಗಳನ್ನು ಟೀಕಿಸುವವರ ವಿರುದ್ಧ ಸಮರಕ್ಕಿಳಿಯುವ ಅಹರಿಯಲ್ಲಿದ್ದಾರೆ. ಈ ಸವಾಲನ್ನು ನೇರವಾಗಿ ಎದುರಿಸಬೇಕು. ನವಂಬರ್ 29ರ ಸಾರ್ವತ್ರಿಕ ಮುಷ್ಕರ ಈ ಸಮರದ ಮೊದಲ ಸುತ್ತು. ಕಾರ್ಮಿಕವರ್ಗ ಕಾರ್ಯಾಚರಣೆಗಿಳಿದ ನಂತರ ಸಮರ ಇನ್ನಷ್ಟು ತೀವ್ರಗತಿಯಿಂದ ಮುಂದುವರಿಯುತ್ತದೆ- ಈ ಬಗ್ಗೆ ಯಾವ ಸಂಶಯವೂ ಬೇಡ, ನರಸಿಂಹರಾಯರೇ!

> *ಒಂದಾದ ಮೇಲೊಂದರಂತೆ ಅಮೇರಿಕನ್ ವ್ಯಾಪಾರ ಪ್ರತಿನಿಧಿ ಕಾರ್ಲಾ ಹಿಲ್ಸ್, ಐ.ಎಂ.ಎಫ್ ಮ್ಯಾನೇಜಿಂಗ್ ಡೈರೆಕ್ಟರ್ ಕಾಮಡೆಸುಸ್ ಹಾಗೂ ಭಾರತ-ಅಮೇರಿಕಾ ಜಂಟಿ ವ್ಯಾಪಾರ ಮಂಡಳಿಯ ಸಹ ಅಧ್ಯಕ್ಷ ಹಾಗೂ ಪೆಪ್ಸಿಕೋದ ಅದ್ಯಕ್ಷ ಡೊನಾಲ್ಡ್ ಕೆಂಡಾಲ್‌ರ ಭಾರತ ಭೇಟಿಗಳ ಅರ್ಥ ಇದೇ. ಹಿಂದೆ ರೋಮ್ ಸಾಮ್ರಾಜ್ಯದ ರಾಯಭಾರಿಗಳು ವಸಾಹತು-ಗಳಿಗೆ ಹೋಗಿ ಕಾಣಿಕೆ ತಂದಂತೆ ಬಂದು ಹೋದ ಈ ಮೂವರ ಎದುರು ಭಾರತ ಸರಕಾರ ಗುಲಾಮರಂತೆ ಹಲ್ಲುಗಿಂಜಿದೆ.*

ಡಿಸೆಂಬರ್ 10, 1991

ನೆನೆ ನೆನೆ ಆ ದಿನವ ಓ, ಭಾರತ ಬಾಂಧವ

ನೆನೆ, ನೆನೆ ಆ ದಿನ ಓ ಭಾರತ ಬಾಂಧವ. ಯಾವ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಜನ ಪ್ರಾಣವನ್ನಿತ್ತರೋ, ಲಕ್ಷಾಂತರ ಮಂದಿ, ಮನೆ ಗುಡಿಸಲು ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡರೋ, ಆ ಮಹಾನ್ ಹೋರಾಟವನ್ನು, 40-50 ವರ್ಷಗಳ ದೀರ್ಘ ಕಾಲ ಭಾರತದ ಮೂಲೆ ಮೂಲೆಯಲ್ಲಿ ಜನ ಎದ್ದು ನಿಂತು ಸೆಣಸಿದ ಆ ದಿನಗಳನ್ನು ನೆನೆ, ನೆನೆ.

ಯಾವ ಸ್ವಾತಂತ್ರ್ಯಕ್ಕಾಗಿ, ನಮ್ಮ ಭವಿಷ್ಯವನ್ನು ನಾವೇ ನಿರ್ಧರಿಸುವ ಹಕ್ಕಿಗಾಗಿ, ನಮ್ಮ ಬದುಕನ್ನು ನಮ್ಮೆಲ್ಲಾ ಶಕ್ತಿ ಸಾಮರ್ಥ್ಯಗಳಿಂದ, ನಮ್ಮ ದೇಶದ ಅಪಾರ ನೈಸರ್ಗಿಕ ಸಂಪತ್ತಿನಿಂದ ರೂಪಿಸಿಕೊಳ್ಳುವ ಕನಸಿಗಾಗಿ ಯಾರಿಗೂ ತಲೆಬಾಗದ ದೃಢ ದೇಶವನ್ನು ಕಟ್ಟುವ ಗುರಿಗಾಗಿ ಸೆಣಸಿದೆವೋ ಆ ದಿನಗಳನ್ನು ಇಂದು ಮತ್ತೆ ಮತ್ತೆ ನೆನೆಸಿಕೊಳ್ಳಬೇಕಾಗಿದೆ.

ನಮ್ಮ ದೇಶದ ಬಜೆಟ್ ಅನ್ನು ಐ.ಎಂ.ಎಫ್ ಅಮೇರಿಕಾದ ರಾಜಧಾನಿ ವಾಷಿಂಗ್‌ಟನ್‌ನಲ್ಲಿ ಕುಳಿತು ನಿರ್ಧರಿಸುವ ಈ ದಿನಗಳಲ್ಲಿ, ನಮ್ಮ ದೇಶದ ಜನರಿಂದ ಆಯ್ಕೆಯಾಗಿ ಇದೇ ದೇಶದ ಎಲ್ಲ ಆಗುಹೋಗುಗಳನ್ನು ನಿರ್ಧರಿಸುವ, ನಮ್ಮ ದೇಶದ ಸ್ವಾತಂತ್ರ್ಯ ಸಾರ್ವಭೌಮತೆಯ ರಕ್ಷಣೆಯ ಹೊಣೆ ಹೊತ್ತ ಲೋಕಸಭೆ, ಹಾಗೂ ರಾಜ್ಯ ಸಭೆಗಳಿಗೆ ಗೊತ್ತಾಗುವ ನಾಲ್ಕು ತಿಂಗಳ ಮೊದಲೇ ಇಲ್ಲಿ ಏನು ನಡೆಯಬೇಕು ಎಂದು ವಾಷಿಂಗ್‌ಟನ್‌ಗೆ ಗೊತ್ತಾಗಿರುವ ಈ ದಿನಗಳಲ್ಲಿ, ಇಂತಹ ನಾಚಿಕೆಗೆಟ್ಟ ಕೆಲಸ ಮಾಡಿಯೂ, ದೇಶದ ಸ್ವಾತಂತ್ರ್ಯವನ್ನು ಹರಾಜು ಹಾಕುವ ಕೆಲಸ ಮಾಡಿದ ನಂತರವೂ ಅದನ್ನು ಸಮರ್ಥಿಸಿಕೊಳ್ಳಲು ಸುಳ್ಳಿನ ಸರಮಾಲೆಯನ್ನೇ ಹೆಣೆಯುತ್ತಿರುವ ಈ ದಿನಗಳಲ್ಲಿ ಸ್ವಾತಂತ್ರ್ಯದ ಗುರಿ, ಲಕ್ಷ್ಯದ ಬಗ್ಗೆ ನೆನಕೆ ಅವಶ್ಯವಾಗಿದೆ.

ಮಾರ್ಚ್ 1, 1992

'ಗೂಳಿ'ಯ ಗೋಲ್‌ಮಾಲ್ ಹೇಗೆ?

ಈ 2,500 ಕೋಟಿರೂಗಳ ಗೋಲ್‌ಮಾಲ್ ಸಾಧ್ಯವಾದದ್ದು ಹೇಗೆ? ಸರಕಾರಿ ಸೆಕ್ಯೂರಿಟಿಸ್‌ಗಳನ್ನು ಮಾರುವ, ಕೊಳ್ಳುವ ವ್ಯವಸ್ಥೆಯಲ್ಲಿ ಲೋಪದೋಷಗಳ ಉಪಯೋಗದಿಂದ ಎನ್ನುವುದೇ ಉತ್ತರ. ಸರಕಾರಿ ಸೆಕ್ಯುರಿಟಿಸ್‌ನ ಮಾರಾಟ ದೊಡ್ಡ ವ್ಯವಹಾರ-ಸುಮಾರು 1 ಲಕ್ಷ ಕೋಟಿ ರೂ ನಷ್ಟು ಇವನ್ನು ಹಣ ಕಡಿಮೆ ಇರುವ ಬ್ಯಾಂಕ್‌ಗಳು, ಹಣ ಹೆಚ್ಚು ಇರುವ ದೊಡ್ಡ ಬ್ಯಾಂಕ್‌ಗಳಿಂದ ಕೊಳ್ಳುತ್ತವೆ. ಬ್ಯಾಂಕ್‌ನ ಡಿಪಾಸಿಟ್‌ಗಳ ಶೇ. 30 ಸರಕಾರಿ ಸೆಕ್ಯುರಿಟಿಸ್‌ಗಳಲ್ಲಿ ಇಡಬೇಕು ಎಂಬುದು ರಿಸರ್ವ್‌ಬ್ಯಾಂಕ್ ನಿಯಮ. ಶೇರು ಮಾರುಕಟ್ಟೆನಲ್ಲಿನಂತೆ ಈ ಮಾರಾಟವೂ ದಲ್ಲಾಳಿಗಳ ಮೂಲಕ ಆಗುತ್ತದೆ. ಇಂತಹ 30-40 ದಲ್ಲಾಳಿಗಳಲ್ಲಿ ಹರ್ಷದ್ ಮೆಹ್ತಾ ಒಬ್ಬ, ಈ ದಲ್ಲಾಳಿಗಳಿಗೆ ನ್ಯಾಯವಾದ ಕಾನೂನುಬದ್ಧ ದಲ್ಲಾಳಿಯೇ ಸಾಕಷ್ಟು ಸಿಗುತ್ತದೆ. ಏಕೆಂದರೆ ವ್ಯಾಪಾರ ಹಲವಾರು ಸಾವಿರಾರು ಕೋಟಿಗಳಲ್ಲಿ ಇರುತ್ತದೆ.

ಆದರೆ ಹರ್ಷದ್ ಮೆಹ್ತಾ ಬರಿಯ ದಲ್ಲಾಳಿಯಿಂದ ತೃಪ್ತಿಪಡುವ ವ್ಯಕ್ತಿ ಅಲ್ಲ. ಸೆಕ್ಯುರಿಟಿಸ್ ಮಾರುವ ಬ್ಯಾಂಕ್ ಕೊಳ್ಳುವ ಬ್ಯಾಂಕ್ ಸೆಕ್ಯುರಿಟಿಸ್ ಅಥವಾ ಅಷ್ಟೇ ಮೊತ್ತಕ್ಕೆ ಬ್ಯಾಂಕರ್ಸ್ ರಸೀತಿ ಕೊಡಬೇಕು ಕೊಳ್ಳುವ ಬ್ಯಾಂಕ್‌ಗೆ ಕೊಡಬೇಕು. ಅದರ ಬದಲು ಸ್ಟೇಟ್ ಬ್ಯಾಂಕ್ ಸೆಕ್ಯುರಿಟಿಸ್ ಮಾರಾಟದಲ್ಲಿ ಇಡೀ ಮೊತ್ತ ದಲ್ಲಾಳಿ ಹರ್ಷದ್ ಮೆಹ್ತಾರ ಖಾತೆಗೆ ಹೋಯಿತು. ಎರಡು ತಿಂಗಳ ಮಟ್ಟಿಗಾದರೂ ಆ ಹಣವನ್ನು ಕೊಡಲಿಲ್ಲ. ಬ್ಯಾಂಕರ್ಸ್ ರಸೀದಿ ಸಹ ಕೊಡಲಿಲ್ಲ. ಅದರ ಬದಲು ಆ ಹಣವನ್ನು ಶೇರು ಮಾರ್ಕೆಟ್ ವ್ಯವಹಾರಕ್ಕೆ ಬಳಸಿಕೊಂಡ-- ಮದ್ಯದ ಅವಧಿಯಲ್ಲಿ.

ರಿಸರ್ವ್ ಬ್ಯಾಂಕ್ ತನಿಖೆಯ ನಂತರ ಸ್ಟೇಟ್ ಬ್ಯಾಂಕ್ 622 ಕೋಟಿರೂಗಳನ್ನು ತಕ್ಷಣ ಪಾವತಿ ಮಾಡಬೇಕು ಎಂದಾಗ ಅದನ್ನು ಹರ್ಷದ್ ಮೆಹ್ತಾ ಪಾವತಿ ಮಾಡಿದ. ಆದರೆ ಇನ್ನೊಂದು ಗೋಲ್‌ಮಾಲ್ ಮೂಲಕ. ಸ್ಟೇಟ್ ಬ್ಯಾಂಕ್‌ನ ಬ್ಯಾಕರ್ಸ್ ರಿಸಿಟ್‌ಗಳನ್ನು ನೇಶನಲ್ ಹೌಸಿಂಗ್ ಬ್ಯಾಂಕ್‌ಗೆ ಅಡವಾಗಿ ಕೊಟ್ಟು ಅದರಿಂದ ಹಣ ಪಡೆದ-- ಬೇರೆ ಬೇರೆ ಬ್ಯಾಂಕ್‌ಗಳ ಹೆಸರಿಗೆ- ಆದರೆ ಹಣ ಹೋದದ್ದು ಮೆಹ್ತಾ ಖಾತೆಗೆ. ಬ್ಯಾಂಕಿಂಗ್ ನಿಯಮಗಳ ಪ್ರಕಾರ ಬ್ಯಾಂಕರ್ಸ್ ರಸೀತಿಗಳನ್ನು ಅಡವು ಇಟ್ಟುಕೊಂಡು ಅದರ ಆಧಾರದ ಮೇಲೆ ಅಡ್ವಾನ್ಸ್ ಕೊಡುವುದು ನಿಷಿದ್ಧ. ಈ ನಿಯಮವನ್ನು ನೇಶನಲ್ ಹೌಸಿಂಗ್ ಬ್ಯಾಂಕ್ ಮುರಿದಿತ್ತು- ಮೆಹ್ತಾನ ಪ್ರಯೋಜನಕ್ಕಾಗಿ. ಅಷ್ಟೇ ಅಲ್ಲ. ಆ ಮೇಲೆ ಸೆಕ್ಯುರಿಟಿಸ್ ಕೊಡುವ ಆಶ್ವಾಸನೆ ಮೇಲೆ ಬ್ಯಾಂಕರ್ಸ್ ರಸೀತಿಯನ್ನು ವಾಪಸು ಪಡೆದ ಸೆಕ್ಯುರಿಟಿಸ್ ಕೊಡಲಿಲ್ಲ.

ಇದೇ ರೀತಿ ಹಲವು ತಂತ್ರಗಳನ್ನು ಬಳಸಿ ಯುಕೋಬ್ಯಾಂಕ್ ಮತ್ತು ನಾಲ್ಕು ವಿದೇಶಿ ಬ್ಯಾಂಕ್‌ಗಳ ಖಾತೆ ವ್ಯವಹಾರದಲ್ಲೂ ಹರ್ಷದ್ ಮೆಹ್ತಾ ಹಣ ಗಳಿಸಿದ್ದಾನಂತೆ. ರಿಸರ್ವ್ ಬ್ಯಾಂಕ್ ಸ್ಟೇಟ್ ಬ್ಯಾಂಕ್‌ನ ಸೆಕ್ಯುರಿಟಿಸ್ ಕೊರತೆ ಮೇಲೆ ಹರ್ಷದ್ ಮೆಹ್ತಾ ನೇಶನಲ್ ಹೌಸಿಂಗ್ ಬ್ಯಾಂಕ್‌ನಿಂದ ಬ್ಯಾಂಕರ್ಸ್ ರಸೀತಿ ಬಳಸುವ ಅಕ್ರಮವನ್ನು ತನಿಖೆ ನಡೆಸಲು ಹೋಗಲಿಲ್ಲ. ಬ್ಯಾಂಕರ್ಸ್ ರಸೀತಿಯನ್ನು ಹಲವು ಬ್ಯಾಂಕ್‌ಗಳು ಕೊಳ್ಳುತ್ತಿರುವುದು ಗೊತ್ತಿದ್ದೂ ರಿಸರ್ವ್ ಬ್ಯಾಂಕ್ ಸುಮ್ಮನಿತ್ತು.

ಕೇಂದ್ರ ಕಾಂಗ್ರೆ ಸರಕಾರಕ್ಕೆ ಜನರ ನೋಟೀಸ್ "ಜನವಿರೋಧಿ ನೀತಿ ಕೈಬಿಡದಿದ್ದರೆ ಕೆಳಗಿಳಿಸುತ್ತೇವೆ"

ದೇಶವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ, ಆ ಮೂಲಕ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಒತ್ತೆಯಿಟ್ಟು ದೇಶಬಾಂಧವರನ್ನು ಸಂಕಷ್ಟಕ್ಕೆ ನೂಕುವ ಜನವಿರೋಧಿ ಸರಕಾರವೊಂದು ಕೇಂದ್ರದಲ್ಲಿ ಅಧಿಕಾರದಲ್ಲಿದೆ ಎಂದು ಭಾರತೀಯರನ್ನು ಎಚ್ಚರಗೊಳಿಸುವ ಮಹತ್ವ ಕಾರ್ಯವೊಂದು ಸೆಪ್ಟೆಂಬರ್ 27 ರಂದು ರಾಷ್ಟ್ರದ ರಾಜಧಾನಿಯಲ್ಲಿ ನಡೆಯಿತು.

ಪಿ.ವಿ. ನರಸಿಂಹರಾವ್ ನೇತೃತ್ವದ ಅಲ್ಪಸಂಖ್ಯಾತ ಕಾಂಗ್ರೆಸ್ (ಐ) ಸರಕಾರದ ತಪ್ಪು ಆರ್ಥಿಕ ನೀತಿಗಳನ್ನು ಪ್ರತಿರೋಧಿಸಲು ರಾಷ್ಟ್ರೀಯರಂಗ ಮತ್ತು ಎಡರಂಗ ಸಂಯುಕ್ತವಾಗಿ ನವದೆಹಲಿಯಲ್ಲಿ ಏರ್ಪಡಿಸಿದ ಬೃಹತ್ ರ್‍ಯಾಲಿಗೆ ದೇಶದ ಮೂಲೆ ಮೂಲೆಗಳಿಂದ ಲಕ್ಷಾಂತರ ರೈತ, ಕಾರ್ಮಿಕ, ಕೃಷಿ ಕೂಲಿಗಾರ ಜನರು ಬಂದು ರಾಷ್ಟ್ರವನ್ನು ಸಂರಕ್ಷಿಸಲು ಹೋರಾಟದ ಪ್ರತಿಜ್ಞೆಗೈದರು.

ಐ.ಎಂ.ಎಫ್. ವಿಶ್ವಬ್ಯಾಂಕ್ ನಿರ್ದೇಶನಗಳಿಗೆ ತಲೆಬಾಗಿ ಕೈಗಾರಿಕೆ ಆರ್ಥಿಕ ನೀತಿಗಳನ್ನು ರೂಪಿಸುವುದುನ್ನು ನಿಲ್ಲಿಸಲು, ಜನಸಾಮಾನ್ಯರು ನೆಮ್ಮದಿಯಿಂದ ಬದುಕುವಂತಾಗಲು ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಇಳಿಸಲು ದೂರ ದೂರದಿಂದ ರೈಲು, ಬಸ್ಸು, ಟ್ರಾಕ್ಟರ್ ಮೊದಲಾದ ವಾಹನಗಳಲ್ಲಿ ಬಂದ ನೊಂದ ಬಸವಳಿದ ಜನತೆ ಒಕ್ಕೊರಲಿನಿಂದ ಹೇಳಿತು.

ಸಂಸತ್ ಭವನಕ್ಕೆ ಸ್ವಲ್ಪ ದೂರದಲ್ಲಿರುವ ವಿಶಾಲವಾದ ಬೋಟ್ ಕ್ಲಬ್ ಇದು ಈಗ ಜನದನಿಯ ತಾಣ. ಈ ತಾಣ. ಸೆ. 27 ರಂದು ದುಡಿವ ಜನತೆಯ ಹೋರಾಟದ ಸಂಕೇತವಾದ ಕೆಂಬಾವುಟಗಳು ಮತ್ತು ಇತರ ವಿವಿಧ ಪಕ್ಷಗಳ ಧ್ವಜಗಳಿಂದ ರಾರಾಜಿಸುತ್ತಿತ್ತು.

ಘೋಷಣೆಗಳು ಮುಗಿಲು ಮುಟ್ಟಿದವು. ಪ್ಲೇಕಾರ್ಡ್‌ಗಳು ವಿವಿಧ ಸಂದೇಶವನ್ನು ಸಾರಿದವು. ನೋವನ್ನು ಉಲಿದವು. ಬೋಟ್ ಕ್ಲಬ್ ಕೆಂಪು ಹಸಿರು ಧ್ವಜಗಳ ಆಗರವಾಗಿತ್ತೆಂದು ಸುದ್ದಿಸಂಸ್ಥೆಗಳು ವರದಿ ಮಾಡಿವೆ.

ಸೆಪ್ಟೆಂಬರ್ 29, 1991

ಐ.ಎಂ.ಎಫ್. ಸೂತ್ರ ರಾಮಬಾಣವಲ್ಲ ಸ್ವಾವಲಂಬೀ ಆರ್ಥಿಕ ಪರ್ಯಾಯ ಸಾಧ್ಯ.

ಆರ್ಥಿಕ ತಜ್ಞರ ಸಮಾವೇಶ

ದೇಶದ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ. ಇದನ್ನು ಸುಧಾರಿಸಲು ತನ್ನ ಸಾಲ ಪಡೆದು ಏನು ಮಾಡಬೇಕು, ಏನೇನು ಮಾಡಬಾರದು ಎಂದು ಅಂತರಾಷ್ಟ್ರೀಯ ಹಣಕಾಸು ನಿಧಿ- ಐ.ಎಂ.ಎಫ್ ತನ್ನ ಪಟ್ಟದ ಒಂದು ದೊಡ್ಡ ಪಟ್ಟಿಯನ್ನೆ ನೀಡಿದೆ. ದೇಶದ ಆರ್ಥಿಕ ಆರೋಗ್ಯಕ್ಕೆ ಇದು ಏಕಮಾತ್ರ ಔಷಧಿ ಎಂಬ ಪ್ರಚಾರ ಜೋರಾಗಿ ನಡೆದಿದೆ. ನಮ್ಮ ಆಳರಸರು ಹಾಗೆಂದು ನಂಬಿಯೇ ಬಿಟ್ಟಂತಿದೆ. ಆದರೆ ಇದು ನಿಜವೇ? ಅಲ್ಲ ಎನ್ನುತ್ತಾರೆ ದೇಶದ ಕೆಲವು ಪ್ರಖ್ಯಾತ ಅರ್ಥಶಾಸ್ತ್ರಜ್ಞರು.

ನಮ್ಮೆದುರು ಎರಡು ಪರ್ಯಾಯ ದಾರಿಗಳಿವೆ. ಐ.ಎಂ.ಎಫ್. ಸಾಲ ಪಡೆದು ಆರ್ಥಿಕ ವ್ಯವಸ್ಥೆಯ ಹೊಂದಾಣಿಕೆಯ ಭಾರವನ್ನು ಬಡವರ ಮೇಲೆ ಹೊರಿಸುವುದು ಮತ್ತು ಅದರ ಜತೆಗೆ ದೇಶದ ಆರ್ಥಿಕ ರಾಜಕೀಯ ಸಾರ್ವಭೌಮತ್ವವನ್ನು ಕಳಕೊಳ್ಳುವುದು, ಅಷ್ಟೇ ಅಲ್ಲ, ಮುಂದೆಯೂ ಆರ್ಥಿಕ ಸ್ಥಿತಿ ಸುಧಾರಣೆಗೆ ಒಂದು ನಮ್ಮದೇ ಸ್ವತಂತ್ರ ಹಾದಿ ಹುಡುಕಿಕೊಳ್ಳುವ ನಮ್ಮ ಸಾಮರ್ಥ್ಯವನ್ನೇ ಬುಡಮೇಲು ಮಾಡುವುದು.

ಇನ್ನೊಂದು ಹಾದಿಯೆಂದರೆ ದೇಶದ ಆರ್ಥಿಕದಲ್ಲಿ ಅಳಿದುಳಿದ ಸಕಾರಾತ್ಮಕ ಆಧಾರ ಬಳಸಿ ದೇಶದ ಆರ್ಥಿಕ ಹಾಗೂ ರಾಜಕೀಯವನ್ನು ಕಾದುಕೊಳ್ಳಲು ಒಂದು ಹೆಚ್ಚು ಸಮಾನತೆಯ ಸಮಾಜ ವ್ಯವಸ್ಥೆಯತ್ತ ಸಾಗುವುದು. ಈ ಹಾದಿ ಹಿಡಿಯಲು ಸಾಧ್ಯವೆ? ಸಾಧ್ಯ ಎಂದಿರುವ ಈ ಅರ್ಥಶಾಸ್ತ್ರಜ್ಞರು ಪರ್ಯಾಯ ಮಾರ್ಗದ ರೂಪರೇಷೆಯನ್ನೂ ಕೊಟ್ಟಿದ್ದಾರೆ.

ಫೆಬ್ರುವರಿ 23 ಹಾಗೂ 24 ರಂದು ಎಡಪಕ್ಷಗಳು ಏರ್ಪಡಿಸಿದ್ದ ಆರ್ಥಿಕ ಧೋರಣೆಗಳ ಕುರಿತಾದ ವಿಚಾರ ಸಂಕಿರಣ ಅಂಗೀಕರಿಸಿದ ಹೇಳಿಕೆ ಈ ಪರ್ಯಾಯ ಮಾರ್ಗ ಹೇಗಿರಬೇಕೆಂಬ ಒಂದು ನೋಟವನ್ನು ನೀಡಿದೆ. ಅಶೋಕ ಮಿತ್ರ, ಕೃಷ್ಣ ಭಾರದ್ವಾಜ್, ಪ್ರಭಾತ್ ಪಟ್ನಾಯಕ್, ಅಶೀಂ ದಾಸ್ ಗುಪ್ತಾ, ಹನುಮಂತರಾವ್ ಮೊದಲಾದ ಪ್ರಖ್ಯಾತ ಆರ್ಥಿಕ ತಜ್ಞರು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಇದರಲ್ಲಿ ಭಾಗವಹಿಸಿದ ಎಡಪಕ್ಷಗಳ ಪ್ರತಿನಿಧಿಗಳೆಂದರೆ ಇ.ಎಂ.ಎಸ್. ನಂಬೂದರಿಪ್ಪಾದ್, ಇಂದ್ರಜಿತ್ ಗುಪ್ತಾ, ಸುರ್ಜಿತ್, ಬರ್ಧನ್, ಚತುರಾನನ್ ಮಿಶ್ರ, ಪ್ರಕಾಶ್ ಕಾರಾಟ್, ಸೀತಾರಾಂ ಯೆಚೂರಿ ಮತ್ತಿತರರು.

ವಿಚಾರ ಸಂಕಿರಣ ಅಂಗೀರಿಸಿದ ಹೇಳಿಕೆಯ ಕೆಲವು ಅಂಶಗಳು ಇಲ್ಲಿವೆ:

ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಈಗ ಎರಡು ಆತಂಕಕಾರಿ ಲಕ್ಷಣಗಳು ಕಾಣುತ್ತಿವೆ. ಒಂದೆಡೆ ಆದಾಯದ ಹೆಚ್ಚಳದಲ್ಲಿ ಹಿನ್ನಡೆ ಮತ್ತು ಆದಾಯದ ಅಸಮಾನತೆಯಲ್ಲಿ ಹೆಚ್ಚಳ, ನಿರುದ್ಯೋಗ ದರದಲ್ಲಿ ಹೆಚ್ಚಳ, ತೀವ್ರ ಹಣದುಬ್ಬರ, ವಿದೇಶಿ ವಿನಿಮಯದ ತೀವ್ರ ಕೊರತೆ- ಇವೆಲ್ಲಾ ಅಭೂತ ಪೂರ್ವ ಆರ್ಥಿಕ ಬಿಕ್ಕಟ್ಟಿನ ವಿವಿಧ ಆಯಾಮಗಳು. ಇನ್ನೊಂದೆಡೆ ದೇಶ ಹಿಡಿದ ಅಭಿವೃದ್ಧಿ ದಾರಿಯ ಪರಾಮರ್ಶೆ ನಡೆಸಿ ಅದರ ಪುನರ್ರಚನೆ ಮಾಡುವ ಬದಲು ಸರಕಾರ ಈ ಬಿಕ್ಕಟ್ಟನ್ನು ನಿರ್ವಹಿಸುವ ಜವಾಬ್ದಾರಿಯೇ ತನಗಿಲ್ಲ ಎಂಬಂತೆ ವರ್ತಿಸುತ್ತಿದೆ. ಪೂರ್ಣ ಪ್ರಮಾಣದ ಬಜೆಟ್ ಬದಲು ಲೇಖಾನುದಾನ ಹಾಗೂ ಐ.ಎಂ.ಎಫ್ ಸಾಲಕ್ಕೆ ಕೈ ನೀಡಿರುವುದು ಇದಕ್ಕೆ ಉದಾಹರಣೆ.

ಐ.ಎಂ.ಎಫ್. ಪರಿಸ್ಥಿತಿ ಸುಧಾರಿಸಲು ಸಲಹೆ ಮಾಡಿರುವ ಹೊಂದಾಣಿಕೆ ಸೂತ್ರ ಏನು?

"1980 ರ ದಶಕದ ಆರಂಭದಲ್ಲಿ ಭಾರತ ಸರಕಾರ ಅನುಸರಿಸಿದ 'ಉದಾರೀಕರಣ' ದ ಪ್ರಕ್ರಿಯೆ ಸರಿಯಾದ ಕ್ರಮವೇ ಆಗಿತ್ತು. ಆದರೂ ಬಿಕ್ಕಟ್ಟಿನ ಪರಿಸ್ಥಿತಿಗೆ ಅದೇಕೆ ಹಾದಿ ಮಾಡಿಕೊಟ್ಟಿತು? ಸರಕಾರದ ಬಜೆಟ್‌ನಲ್ಲಿ ವಿಪರೀತ ಕೊರತೆಯೇ ಅದಕ್ಕೆ ಏಕೈಕ ಕಾರಣ" - ಇದು ತಾನು ಸೂಚಿಸಿದ ಸೂತ್ರಕ್ಕೆ ಆಧಾರವಾಗಿರುವ ಐ.ಎಂ. ಎಫ್ ವಿಶ್ಲೇಷಣೆ. ಆದ್ದರಿಂದ ಅದು ಸೂಚಿಸುವ ರಸೌಷಧಿಯೆಂದರೆ ಬಜೆಟ್ ಕೊರತೆಯನ್ನು ನಿವ್ವಳ ಉತ್ಪನ್ನದ ಶೇಕಡಾ 8.5ರಿಂದ ಶೇ. 6.5ಕ್ಕೆ ಇಳಿಸಬೇಕು. ಹೇಗೆ ಇಳಿಸಬೇಕು? ನೇರ ತೆರಿಗೆ ಹೆಚ್ಚಿಸಿ ಅಲ್ಲ. ಏಕೆಂದರೆ ಇದು ಶ್ರೀಮಂತ ವಿಭಾಗಗಳಿಗೆ ಆರ್ಥಿಕ ಚಟುವಟಿಕೆಗಳಲ್ಲಿ ನಿರಾಸಕ್ತಿ ಮೂಡಿಸುತ್ತದಂತೆ! ಆದ್ದರಿಂದ ಆಹಾರ ಸಾಮಗ್ರಿ ಪೂರೈಕೆಗೆ ನೀಡುವ ಸಹಾಯಧನ, ಉದ್ಯೋಗಾವಕಾಶ ನಿರ್ಮಿಸುವ ಯೋಜನೆಗಳಿಗೆ ಸಹಾಯಧನ ಮುಂತಾದ ದೇಶದ ಬಡವಿಭಾಗಗಳಿಗೆ ಸ್ವಲ್ಪವಾದರೂ ಪರಿಹಾರ ನೀಡುವ ಕಲ್ಯಾಣ ಕಾರ್ಯಕ್ರಮಗಳನ್ನು ನಿಲ್ಲಿಸಿ ಈ ಕೊರತೆಯನ್ನು ನೀಗಿಸಬೇಕು! ಇದು ಐ.ಎಂ. ಎಫ್ ಸೂತ್ರದ ಸಾರಾಂಶ.

ಅಂದರೆ ಈ ಬಿಕ್ಕಟ್ಟು ಪರಿಹರಿಸುವ ತೀವ್ರ ಕ್ರಮಗಳು 1980 ರ ಉದಾರೀಕರಣದ ನೆರಳಲ್ಲಿ ತಮ್ಮ ಐಷಾರಾಮದ ಜೀವನಕ್ಕೆ ದೇಶದ ಅಮೂಲ್ಯ ವಿದೇಶೀ ವಿನಿಮಯ ಸೂರೆಗೊಂಡು ಪ್ರಯೋಜನ ಪಡೆದವರನ್ನು ತಟ್ಟಬಾರದು. ಬದಲಿಗೆ ಉದಾರೀಕರಣದಿಂದ ಏನೇನೂ ಪ್ರಯೋಜನ ಪಡೆಯದ ಬಡಜನ ಅದರ ಬೆಲೆ ತೆರಬೇಕು- ಇದು ಐ.ಎಂ.ಎಫ್ ಸೂತ್ರಂ ಸಾರಾಂಶ.

ಆದರೆ ಈ ಐ.ಎಂ.ಎಫ್ ಸೂತ್ರ ಅನುಸರಿಸಿ ಸರಕಾರ ತನ್ನ ಬಂಡವಾಳ ಖರ್ಚಿನಲ್ಲಿ ಕಡಿತ ಮಾಡಿದರೆ ದೇಶದ ಕೈಗಾರಿಕಾ ರಂಗದಲ್ಲಿ ಹಿಂಜರಿತ ಎದುರಿಸಬೇಕಾಗುತ್ತದೆ. ಇದರಿಂದ ಮುಂದಿನ ಕೈಗಾರಿಕಾ ಬೆಳವಣಿಗೆಯ ಮೇಲೂ ಭಾರಿ ದುಷ್ಪರಿಣಾಮ ಬೀಳುತ್ತದೆ. ನಮ್ಮ ಅಭಿಪ್ರಾಯದಲ್ಲಿ, ಸರಕಾರ ಐ.ಎಂ.ಎಫ್ ಸೂಚಿಸಿದಷ್ಟು ಪ್ರಮಾಣದಲ್ಲಿ ಬಜೆಟ್ ಕೊರತೆ ಕಡಿಮೆ ಮಾಡಬೇಕಾಗಿಲ್ಲ. ಮತ್ತು ಈ ಕಡಿತವೂ ಬಂಡವಾಳ ಬಾಬ್ತಿನಿಂದ ಬರಬೇಕಾಗಿಲ್ಲ, ರೆವಿನ್ಯೂ ಬಾಬ್ತಿನಿಂದ ಬರಲು ಸಾಧ್ಯ. ಐಷಾರಾಮದ ಸರಕುಗಳಿಗೆ, ಬಿಡಿ ಭಾಗಗಳ ಆಮದಿನ ಮೇಲೆ ಕಡಿವಾಣ ಹಾಕಿ, ರಕ್ಷಣಾ ಅಗತ್ಯಗಳಿಗಾಗಿ ಮಾಡುವ ಆಮದುಗಳ ಮೇಲೆ ಕಡಿವಾಣ ಹಾಕಿ ವಿದೇಶಿ ವಿನಿಮಯದ ಕೊರತೆಯನ್ನು ಸಾಕಷ್ಟು ಪ್ರಮಾಣದಲ್ಲಿ ಇಳಿಸಲು ಸಾಧ್ಯ.

ದೊಡ್ಡ ದೊಡ್ಡ ಕಂಪನಿಗಳಿಗೆ ತೆರಿಗೆ ನೀಡಬೇಕಾದ ಲಾಭಾಂಶವನ್ನು ಕಡಿಮೆ ಮಾಡಿ ತೋರಿಸಲು ಈಗಿರುವ ಕಾನೂನುಗಳಲ್ಲಿ ಸಾಕಷ್ಟು ತೂತುಗಳನ್ನು ಬಿಡಲಾಗಿದೆ. ಇಂತಹ ತೂತುಗಳನ್ನು ಮುಚ್ಚಿ ಈ ಕಂಪನಿಗಳು ಹೆಚ್ಚು ಪ್ರಾಮಾಣಿಕವಾದ ಲೆಕ್ಕ ಪತ್ರ ನೀಡುವಂತೆ ಮಾಡಲು ಸಾಧ್ಯ. ಶ್ರೀಮಂತ ವಿಭಾಗಗಳಿಂದ ವೈಯುಕ್ತಿಕ ಆದಾಯ ತೆರಿಗೆಯ ವ್ಯಾಪ್ತಿ ಹೆಚ್ಚಿಸಲು, ಕಪ್ಪು ಹಣದ ವಿರುದ್ಧ ತೀವ್ರ ಕ್ರಮ ಕೈಗೊಳ್ಳಲು ಸಾಧ್ಯ. ಈ ಮೂರು ಕ್ರಮಗಳಿಂದ ರೆವಿನ್ಯೂ ಬಾಬ್ತಿನಲ್ಲಿ ಕೊರತೆ ಕಮ್ಮಿ ಮಾಡುವ ಪರ್ಯಾಯ ಮಾರ್ಗವನ್ನು ಸರಕಾರ ಅನುಸರಿಸಲು ಸಾಧ್ಯವಿದೆ.

ಅಂದರೆ ಶ್ರೀಮಂತರನ್ನು ತಟ್ಟದೆ, ಬಜೆಟ್ ಕೊರತೆಯ ಭಾರವನ್ನು ಬಡವಿಭಾಗಗಳ ಹೆಗಲ ಮೇಲೆ ವರ್ಗಾಯಿಸುವ ಐ.ಎಂ.ಎಫ್ ಸೂತ್ರ ನಮ್ಮ ಸರಕಾರದ ಸಮ್ಮುಖ ಇರುವ ಏಕೈಕ ಮಾರ್ಗವಲ್ಲ. ಆಮದಿನ ಮೇಲೆ ಹತೋಟಿ ಮತ್ತು ಸೂಕ್ತ ಬಜೆಟ್ ಧೋರಣೆಗಳ ಮೂಲಕ ಕೈಗಾರಿಕಾ ಹಿಂಜರಿತ ಇಲ್ಲದೆ ಪಾವತಿ ಬಾಕಿ ಹೊಂದಾಣಿಕೆ ತರಲು ಸಾಧ್ಯ.

ಅಸಮಾನತೆಯನ್ನು ಕಡಿಮೆ ಮಾಡುವ ಪರ್ಯಾಯ ಮಾರ್ಗ

ಹೇಗಿರಲು ಸಾಧ್ಯ?

ವಿದೇಶೀ ವಿನಿಮಯ ಗಳಿಕೆಗೆ ಐ.ಎಂ. ಎಫ್‌ನ ಶರತ್ತುಗಳಿಲ್ಲದ ಮೂಲಗಳನ್ನು ಹುಡುಕಿಕೊಳ್ಳಲು ಸಾಧ್ಯ. ಕೊಲ್ಲಿ ಬಿಕ್ಕಟ್ಟು ಪ್ರಾರಂಭವಾದಾಗ, ಮತ್ತು ಅದರ ಮೊದಲು ವಿದೇಶಗಳಲ್ಲಿ ದುಡಿಯುತ್ತಿರುವ ಭಾರತೀಯ ಕಾರ್ಮಿಕರ ಪಾವತಿಯನ್ನು ಸೂಕ್ತ ರೀತಿಯಲ್ಲಿ ಕ್ರೋಢೀಕರಿಸುವ ಒಂದು ಅವಕಾಶವನ್ನು ಬಳಸುವಲ್ಲಿ ಸರಕಾರ ವಿಫಲವಾಗಿದೆ. ಇದಕ್ಕೆ ಈಗಲೂ ಕಾಲ ಮಿಂಚಿಲ್ಲ.

ಈಗ ಕೊಲ್ಲಿ ಯುದ್ಧದ ನಂತರ ಬಡ ದೇಶಗಳ ನಡುವೆ ಹೆಚ್ಚಿನ ಸಹಕಾರದ ಅವಕಾಶವೂ ಹೆಚ್ಚಿದೆ. ತೃತೀಯ ಜಗತ್ತಿನ ಸೌಹಾರ್ದತೆಯ ಭಾವನೆ ಉದ್ದೀಪನಗೊಂಡಿರುವ ವಾತಾವರಣದಲ್ಲಿ ಐ.ಎಂ.ಎಫ್‌ಗೆ ಪರ್ಯಾಯವಾಗಿ ಬಡದೇಶಗಳ ಹಿತಾಸಕ್ತಿಗಳನ್ನು ಕಾಪಾಡುವ ಇನ್ನೊಂದು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಸ್ಥಾಪಿಸಲು ಭಾರತ ಸರಕಾರ ಪ್ರಯತ್ನಿಸಲು ಉತ್ತಮ ಅವಕಾಶವಿದೆ.

ಇಂತಹ ಒಂದು ಹಾದಿಯನ್ನು ಹಿಡಿದು 1980ರ 'ಉದಾರೀಕರಣ' ದಶಕದಲ್ಲಿ ಹಿಡಿದ ಹಾದಿಯಲ್ಲಿನ ಸಿರಿವಂತರ-ಪರ ವಿಕೃತಿಯನ್ನು ಸರಿಪಡಿಸಬಹುದು. ಈಗಿನ ಉದ್ಯೋಗ ನಿರ್ಮಾಣ ಹಾಗೂ ಇತರ ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ವಿಸ್ತರಿಸಿ ಕೆಲಸದ ಹಕ್ಕನ್ನು ಸಾಧಿಸಲು ಸೂಕ್ತ ಆಧಾರ ನಿರ್ಮಿಸಬಹುದು. ಕುಡಿಯುವ ನೀರು, ಪ್ರಾಥಮಿಕ ಶಿಕ್ಷಣ, ಆರೋಗ್ಯ ನೈರ್ಮಲ್ಯ ಇವಕ್ಕೆ ಆದ್ಯತೆ ನೀಡಬೇಕು. ಎರಡನೆಯದಾಗಿ ಸಾಮಾಜಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು. ಅಂದರೆ ದ್ವಿದಳ ಧಾನ್ಯಗಳನ್ನು ಈ ಜಾಲದ ಮೂಲಕ ವಿತರಣೆ ಮಾಡಬಹುದು. ಈಗಾಗಲೇ ವಿತರಣೆ ಮಾಡುವ ವಸ್ತುಗಳ ಪ್ರಮಾಣ ಹಾಗೂ ಭೌಗೋಳಿಕ ವ್ಯಾಪ್ತಿಯನ್ನು ಹೆಚ್ಚಿಸಬಹುದು.

ಹೀಗೆ ನಮ್ಮ ದೇಶದ ಆರ್ಥಿಕದ ತಕ್ಷಣದ ಹಾಗೂ ಮಧ್ಯಮ ಅವಧಿಯ ಸಮಸ್ಯೆಗಳನ್ನು ಎದುರಿಸಿದ ನಂತರ ನಮ್ಮ ಅಭಿವೃದ್ಧಿಯ ಕಣ್ನೋಟವನ್ನೇ ಪರಾಮರ್ಶಿಸಿ ಅದನ್ನು ಪುನರ್ರಚಿಸುವತ್ತ ಗಮನ ಹರಿಸಬೇಕು. ವಿಪರೀತ ಬಂಡವಾಳ, ಆಮದು ಹಾಗೂ ಐಷಾರಾಮದ ಸರಕುಗಳನ್ನು ಆಧರಿಸಿದ ಅಭಿವೃದ್ಧಿ ಪಥವನ್ನು ಬಿಡಬೇಕು. ಹೀಗಾಗ ಬೇಕಾದರೆ ಕೈಗಾರಿಕೋದ್ಯಮಿಗಳ, ಭೂಮಾಲಿಕರ ಒತ್ತಡವನ್ನು ಪ್ರತಿರೋಧಿಸಿ ನಿಲ್ಲಬೇಕಾದದ್ದು ಅಗತ್ಯ. ಜತೆಗೆ ನಗರ, ಗ್ರಾಮೀಣ ಪ್ರದೇಶಗಳಲ್ಲಿ ಅಸಮಾನತೆ ತಪ್ಪಿಸಲು ಕಾರ್ಯಕ್ರಮ ರೂಪಿಸಬೇಕು. ಪ್ರಾಮಾಣಿಕ ಭೂ ಸುಧಾರಣೆ ಇದರ ಪ್ರಮುಖ ಅಂಶವಾಗಲೇಬೇಕು ಏಕೆಂದರೆ ಕೇವಲ ಒಂದು ಶೇಕಡಾ ಭೂಮಿಯನ್ನು ಹಂಚಿ ಈ ಕ್ರಾಯಕ್ರಮವನ್ನು ಮೂಲೆಗುಂಪು ಮಾಡಲಾಗಿದೆ. ಈ ರೀತಿಯ ಆದಾಯ ಹಂಚಿಕೆಯಲ್ಲಿ ಅಸಮಾನತೆಯನ್ನು ತಪ್ಪಿಸಿರುವುದು ಕೈಗಾರಿಕಾ ಉತ್ಪನ್ನಗಳಿಗೆ ಆಂತರಿಕ ಮಾರುಕಟ್ಟೆ ಹೆಚ್ಚಿಸಲು ಅತ್ಯಗತ್ಯ ಯಾವುದೇ ಸ್ವಾವಲಂಬೀ ತಂತ್ರಜ್ಞಾನ ಬೆಳೆಸಲು ನಮ್ಮ ಸಂಶೋಧನಾ ಸಾಮರ್ಥ್ಯವನ್ನು ಬಳಸಬೇಕು, ಈಗಿನಂತೆ ಸುಲಭದ ವಿದೇಶಿ ಸಾಲ ಪಡೆಯುವುದಕ್ಕಾಗಿ ಈ ಸಾಮರ್ಥ್ಯವನ್ನು ಮೂಲೆಗುಂಪು ಮಾಡಬಾರದು.

ಈ ಸಂದರ್ಭದಲ್ಲಿ 'ಖಾಸಗೀಕರಣದ' ಬೆದರಿಕೆಯ ಬಗ್ಗೆಯೂ ಎಚ್ಚರಿಕೆ ನೀಡಬೇಕಾಗಿದೆ. ಸಾರ್ವಜನಿಕ ವಲಯವನ್ನು ಮೂದಲಿಸುವುದು ಈಗೊಂದು ಆಕರ್ಷಕ ಸಂಗತಿ, ಆದರೆ ಇದಕ್ಕೆ ಕಾರಣ ಒಂದು ಅಜ್ಞಾನ ಅಥವಾ ಸೈದ್ಧಾಂತಿಕ ದುರುದ್ದೇಶ.

ದೇಶದ ಸ್ವಾವಲಂಬೀ ತಾಂತ್ರಿಕ, ಆರ್ಥಿಕ ಬೆಳವಣಿಗೆಗೆ ಸಾರ್ವಜನಿಕ ವಲಯ ಒಂದು ಶಕ್ತ ಸಾಧನವಾಗಲ್ಲದು. ಸಾರ್ವಜನಿಕ ವಲಯದ ನಿರ್ವಹಣೆಯಲ್ಲಿ ಅಧಿಕಾರಶಾಹೀ ಹಸ್ತಕ್ಷೇಪ ನಿಲ್ಲಿಸಿ, ಆಡಳಿತದಲ್ಲಿ ಕಾರ್ಮಿಕರ ಪಾತ್ರಕ್ಕೆ ಅವಕಾಶ ನೀಡಿ ಇದನ್ನು ಸಾಧಿಸಬಹುದು.

'ಖಾಸಗೀಕರಣ' ಪ್ರತಿಪಾದಿಸುವವರು ನೀಡುವ ರೆವಿನ್ಯೂವಾದ ಅಂದರೆ ಖಾಸಗೀಕರಣ ಮಾಡಿ ಸರಕಾರದ ಬಜೆಟ್ ಕೊರತೆ ನೀಗಿಸಬಹುದು ಎಂಬುವವರ ವಾದ ಕೂಡ ತಪ್ಪು. ಏಕೆಂದರೆ ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಖಾಸಗೀ ಉದ್ದಿಮೆಗಳಿಗೂ ಹಣ ಒದಗಿಸಿದ್ದು ಸಾರ್ವಜನಿಕ ಹಣಕಾಸು ಸಂಸ್ಥೆಗಳೇ. ಸರಕಾರ ಈಗ ತನ್ನ ರೆವಿನ್ಯೂ ಸಂಪಾದಿಸುವ ಆಸ್ತಿಗಳನ್ನು (ಲಾಭಕಾರೀ ಸಾರ್ವಜನಿಕ ಉದ್ದಿಮೆಗಳನ್ನು) ಖಾಸಗೀ ವಲಯಕ್ಕೆ ವಹಿಸಲು ಬಯಸಿದರೆ (ಖಾಸಗೀ ವಲಯ ಸಾರ್ವಜನಿಕ ವಲಯ ಒದಗಿಸುವ ಬಂಡವಾಳದಿಂದಲೇ ಅವನ್ನು ಖರೀದಿಸಲು ಸಿದ್ಧವಿದೆ!) ಅದರಿಂದ ಅಲ್ಪಾವಧಿಯಲ್ಲಿ ಸ್ವಲ್ಪ ಹಣ ಸಿಗಬಹುದು. ಆದರೆ ಅದರಿಂದ ಮಧ್ಯಾವದಿಯಲ್ಲೇ ಸರಕಾರದ ಹಣಕಾಸು ಪರಿಸ್ಥಿತಿಯ ಮೇಲೆ ತೀವ್ರ ದುಷ್ಪರಿಣಾಮವಾಗುತ್ತದೆ. ಸಾರ್ವಜನಿಕ ಹಣಕಾಸು ಸಂಸ್ಥೆಗಳನ್ನು ಖಾಸಗೀಕರಣಗೊಳಿಸಬೇಕೆಂಬ ಐ.ಎಂ.ಎಫ್ ಸಲಹೆ ಸ್ವೀಕರಿಸಲು ಯೋಗ್ಯವಲ್ಲ. ಅದು ನಮ್ಮ ದೇಶದ ಅಭಿವೃದ್ಧಿಯ ಸಾಮಾಜಿಕ ಆರ್ಥಿಕ ಉದ್ದೇಶಗಳಿಗೆ ತದ್ವಿರುದ್ಧವಾದದ್ದು.

ಮಾರ್ಚ್ 17, 1991

ಸ್ವತಂತ್ರ ಭಾರತದ ಅತ್ಯಂತ ನೀಚ ಬಜೆಟ್

ಇದು ಹಣಕಾಸು ಮಂತ್ರಿ ಡಾ. ಮನಮೋಹನ್‌ಸಿಂಗ್ ಫೆಬ್ರವರಿ 29 ರಂದು ಸಂಸತ್ತಿನಲ್ಲಿ ಮಂಡಿಸಿದ 1992-93 ರ ಬಜೆಟ್ ಬಗ್ಗೆ ಆರ್ಥಿಕ ತಜ್ಞ ಕಾರ್ತಿಕ್ ರಾಯ್ ಅವರ ವಿಶ್ಲೇಷಣೆ.

ಈ ಬಜೆಟ್‌ನಲ್ಲಿ ಮೂರು ಸ್ಪಷ್ಟ ಅಂಶಗಳಿವೆ.

ಬಡಜನರನ್ನು ಹಿಂಡಿ ಹಿಪ್ಪೆ ಮಾಡಿ ಸಿರಿವಂತರಿಗೆ ಭಾರಿ ಉಡುಗೊರೆಗಳು ಸುರಿಮಳೆ.

ಎರಡನೆಯದು-ದೇಶದ ಆರ್ಥಿಕ ಸಾರ್ವಭೌಮತೆಗೆ ಶರಣು ಹೊಡೆದ ಕ್ರಿಮಿನಲ್ ಕ್ರಮಗಳು.

ಮೂರನೆಯದು ದೇಶದ ಆರ್ಥಿಕ ಬೆಳವಣಿಗೆಯ ಕತ್ತು ಹಿಸುಕುವ ಕ್ರಮಗಳು.

ಸಿರಿವಂತರಿಗೆ ಭಾರೀ ಉಡುಗೊರೆಗಳನ್ನು ದಯಪಾಲಿಸಿದ ಬಜೆಟ್ ಇದು ಮೊದಲನೆಯದೇನಲ್ಲ. ಸ್ವಾತಂತ್ರ್ಯ ಬಂದ ದಹೊಸದರಲ್ಲಿ 1948-49 ರಲ್ಲಿ ಶಣ್ಮುಗಶೆಟ್ಟಿಯವರು ಮಂಡಿಸಿದ ಬಜೆಟ್, ಅದೇ ರೀತಿ ರಾಜೀವ್‌ಗಾಂಧಿಯ ಭಾರೀ ವಿಜಯದ ನಂತರ ಬಂದ 1985-86 ರ ಬಜೆಟ್ ಈ ವಿಷಯದಲ್ಲಿ ಮನಮೋಹನ್‌ಸಿಂಗ್‌ರ ಬಜೆಟ್‌ಗೆ ಸ್ಪರ್ಧಾಳುಗಳಾಗಿ ಇವೆ.

ಉಳಿದೆರಡು ಅಂಶಗಳಲ್ಲಿ ಮಾತ್ರ 1992-93ರ ಬಜೆಟ್‌ಗೆ ಸರಿಸಾಟಿ ಯಾವುದೂ ಇಲ್ಲ ಎನ್ನುತ್ತಾರೆ ಕಾರ್ತಿಕ್ ರಾಯ್.................................

15 ನೇ ಮಾರ್ಚ್ 1992



ಕರ್ನಾಟಕದ ಉದ್ದಿಮೆಗಳಿಗೆ ಅಪಮೃತ್ಯು

ಕಾಂ. ಸೂರಿ

ಐಕ್ಯರಂಗ : ನಮ್ಮ ರಾಜ್ಯದಲ್ಲಿ ಈ ನೀತಿಗಳಿಂದ ಎಂತಹ ಪರಿಣಾಮವಾಗುತ್ತಿದೆ

* ನಮ್ಮ ರಾಜ್ಯದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳಾದ ಬಿ.ಇ. ಎಲ್., ಬಿ.ಹೆಚ್.ಇ. ಎಲ್., ವಿ. ಐ.ಎಸ್.ಎಲ್., ಐ.ಟಿ.ಐ., ಎಲ್ಲವುಗಳನ್ನು ಇದು ತಟ್ಟಲಿದೆ.

ಐಕ್ಯರಂಗ : ಬಿ.ಇ.ಎಲ್.ನ ಮೇಲೆ ಇದರ ಪರಿಣಾಮವೇನು?

* ಬಿ.ಇ.ಎಲ್.ನಲ್ಲಿ ಒಂದು ವಿಭಾಗದಲ್ಲಿ ಕಪ್ಪು-ಬಿಳುಪು ಟಿ.ವಿ. ಟ್ಯೂಬ್‌ಗಳನ್ನು ಉತ್ಪಾದಿಸುತ್ತದೆ. ಇದಕ್ಕೆ ಈಗ ಮಾರುಕಟ್ಟೆಯಿಲ್ಲ. ಕೋಟಿಗಟ್ಟಲೆ ತಯಾರಾಗಿ ಬಿದ್ದಿವೆ. ಬಣ್ಣದ ಟಿ.ವಿ. ಟ್ಯೂಬ್ ಮಾಡುತ್ತೇವೆಂದರೆ ಅವರಿಗೆ ಅನುಮತಿ ನೀಡಲಿಲ್ಲ. ಖಾಸಗೀ ವಲಯಕ್ಕೆ ನೀಡಲಾಯಿತು. ಇದರಿಂದ ಈ ವಿಭಾಗದಲ್ಲಿ ನಷ್ಟವಾಗುತ್ತದೆ. ಇದನ್ನು ಈಗ ಹೊಸ ಆರ್ಥಿಕ ನೀತಿ ಪ್ರಕಾರ ಮುಚ್ಚಬೇಕಾಗುತ್ತದೆ.

ಐಕ್ಯರಂಗ : ಈ ವಿಭಾಗದಲ್ಲಿ ಎಷ್ಟು ಕಾರ್ಮಿಕರಿದ್ದಾರೆ?

* ಬಿ.ಇ.ಎಲ್.ನಲ್ಲಿ ಒಟ್ಟು 20 ಸಾವಿರ ಕಾರ್ಮಿಕರಲ್ಲಿ ಒಂದು ಸಾವಿರ ಇಲ್ಲೇ ಇದ್ದಾರೆ.

ಇಷ್ಟೇ ಅಲ್ಲ. ಬಿ.ಇ.ಎಲ್. ರಾಡಾರ್ ಮತ್ತಿತರ ರಕ್ಷಣೆಗೆ ಬೇಕಾದ ದೂರಸಂಪರ್ಕ ಸಾಧನಗಳನ್ನು ಉತ್ಪಾದಿಸುತ್ತದೆ. ಇದಕ್ಕೆ ಬೇಕಾದ ಬಂಡವಾಳ ಸುಮಾರು 950 ಕೋಟಿ ರೂ. ಇದರಲ್ಲಿ 250 ಕೋಟಿ. ನಷ್ಟು ಬಿಡಿ ಭಾಗಗಳ ಆಮದು ಮಾಡಿಕೊಳ್ಳಬೇಕಾಗುತ್ತದೆ. ಆದರೆ ಹೊಸ ಕ್ರಮಗಳ ಪ್ರಕಾರ ಕೇಂದ್ರ ಸರ್ಕಾರ ಕೇವಲ 35 ಕೋಟಿ ರೂ. ಕೊಡುತ್ತದೆ. ಉಳಿದದ್ದನ್ನು ಎಲ್ಲಿಂದ ಪಡೆಯುವುದು?

ಹೊಸ ಕ್ರಮದ ಪ್ರಕಾರ ಎಕ್ಸಿಮ್ ಸ್ಕ್ರಿಪ್ ಆರಂಭಿಸಲಾಗಿದೆ. 100 ರೂ. ನಷ್ಟು ರಫ್ತು ಮಾಡಿದರೆ 30 ರೂ ನಷ್ಟು ವಿದೇಶೀ ವಿನಿಮಯವನ್ನು ಮಾರಿಕೊಳ್ಳಬಹುದು. ಆದರೆ ಬಿ.ಇ.ಎಲ್.ನ ಉತ್ಪಾದನೆ ರಕ್ಷಣಾ ವಲಯಕ್ಕಾಗಿ ರಫ್ತಿಗಾಗಿ ಅಲ್ಲ. ಅಂದರೆ ಬಿ.ಇ.ಎಲ್.ಗೆ ಬಿಡಿ ಭಾಗಗಳನ್ನು ತರಿಸಲು ವಿದೇಶೀ ವಿನಿಮಯ ದೊರೆಯುವುದಿಲ್ಲ. ಇದರಿಂದ ಉತ್ಪಾದನೆ ಕಡಿತವಾಗುತ್ತದೆ. ಲೇ ಆಫ್ ಬಗ್ಗೆ ಆಗಲೇ ಬಿ.ಇ.ಎಲ್ ಮ್ಯಾನೇಜ್‌ಮೆಂಟ್ ಯೋಚಿಸಲಾರಂಭಿಸಿತ್ತು. ಸಂತೋಷದ ಸಂಗತಿಯೇನೆಂದರೆ ಬಿ.ಇ.ಎಲ್.ನಲ್ಲಿರುವ ಎಲ್ಲಾ ಕಾರ್ಮಿಕ ಸಂಘಗಳು, ಇಂಟಕ್ ಹಾಗೂ ಬಿಎಂಎಸ್. ಸಂಘಗಳು ಕೂಡಾ ಆಫೀಸರುಗಳು ಕೂಡಾ ಭಾಗವಹಿಸಿದ ಒಂದು ಸಮಾವೇಶ ನಡೆಸಲಾಗಿದೆ. ಲೇ-ಆಫ್ ಕ್ರಮವನ್ನು ಈ ಸಮಾವೇಶ ಖಂಡಿಸಿದೆ.

ಇತ್ತೀಚೆಗೆ ರಕ್ಷಣಾ ಮಂತ್ರಿಗಳು ರಕ್ಷಣಾ ಉತ್ಪಾದನೆಯನ್ನೂ ಖಾಸಗೀಕರಿಸುತ್ತೇವೆ, ಬೇಕಾದ್ದನ್ನು ಆಮದು ಮಾಡುತ್ತೇವೆ ಎಂದಿರುವುದನ್ನು ಗಮನಿಸಬೇಕು.

ಐಕ್ಯರಂಗ : ಬಿ.ಹೆಚ್.ಇ.ಎಲ್., ಹೆಚ್.ಎ.ಎಲ್., ಐ.ಟಿ.ಐ ಗಳಲ್ಲಿ?

* ಹೊಸ ನೀತಿಯ ಪ್ರಕಾರ ಮೊದಲೇ ಹೇಳಿದಂತೆ ವಿದ್ಯುತ್ ಉತ್ಪಾದನೆ. ಕೋರ್ ಸೆಕ್ಟರ್‌ನಲ್ಲಿ ಬರುವುದಿಲ್ಲ. ಇದರಿಂದಾಗಿ ಬಿ.ಎಚ್.ಇ.ಎಲ್.ಗೆ ವಿದ್ಯುತ್ ಉತ್ಪಾದನೆಗೆ ಬೇಕಾಗುವ ಟರ್ಬೈನ್ ಮುಂತಾದುವುಗಳ ಆರ್ಡ್‌ರ್ ಕಡಿಮೆಯಾಗುತ್ತಿದೆ. ವಿಶ್ವವ್ಯಾಪಿ ಟೆಂಡರ್ ಮೂಲಕ ವಿದೇಶೀ ಖಾಸಗೀ ಕಂಪೆನಿಗಳಿಗೆ ಆರ್ಡರ್ ಹೋಗುತ್ತದೆ. ಪರಿಣಾಮವಾಗಿ ಅಲ್ಲೂ ಲೇ ಆಫ್ ರಿಟ್ರೆಂಚ್‌ಮೆಂಟ್ ಬರಬಹುದು. ಹೆಚ್.ಎ. ಎಲ್.ನಲ್ಲಿ ಮೊದಲೇ ಉತ್ಪಾದನಾ ಸಾಮರ್ಥ್ಯದ ಪೂರ್ಣ ಉಪಯೋಗ ಆಗುತ್ತಿಲ್ಲ. ಈಗ ರಕ್ಷಣಾ ಮಂತ್ರಿ ಹೇಳಿದಂತೆ ಖಾಸಗಿಯವರಿಗೆ ಅಲ್ಲೂ ಅವಕಾಶ ಕೊಟ್ಟರೆ ವಿಮಾನ ಬೇಕಾದರೆ ಆಮದು ಮಾಡಿಕೊಳ್ಳುತ್ತೇವೆ ಎಂದರೆ ಬಿ.ಹೆಚ್.ಎ.ಎಲ್.ನಲ್ಲೂ ಅದೇ ಸ್ಥಿತಿ.

ಟೆಲಿಫೋನ್ ಉಪಕರಣಗಳ ಉತ್ಪಾದನೆ ಆಗಲೇ ಖಾಸಗೀ ರಂಗದಲ್ಲಿ ಭರದಿಂದ ನಡೆಯುತ್ತಿದೆ. ಈ ರಂಗದಲ್ಲಿ ಹೊಸದಾಗಿ ಉದ್ದಿಮೆ ಹಾಕುವವರು ಕನಿಷ್ಠ ಕೂಲಿ ನೀಡಬೇಕಾದ ಅಗತ್ಯವೂ ಇಲ್ಲವಾದದ್ದರಿಂದ ಐ.ಟಿ.ಐ ನಲ್ಲಿ ಉತ್ಪಾದನೆ ಕುಂಠಿತವಾಗುತ್ತದೆ. ಲೇ ಆಫ್‌ಗೆ ಅವಕಾಶ ಕಲ್ಪಿಸಲಾಗುತ್ತದೆ.

ಐಕ್ಯರಂಗ : ವಿ.ಐ.ಎಸ್.ಎಲ್‌ಗೂ ಇದು ತಟ್ಟುತ್ತದೆಯೆಂದಿರಿ, ಹೇಗೆ?

* ವಿ.ಐ.ಎಸ್.ಎಲ್. ಸ್ಟೀಲ್ ಅಥಾರಿಟಿ (ಎಸ್.ಐ.ಎಲ್)ಗೆ ಸೇರುವ ಮೊದಲು ವಿಸ್ತರಣೆಯಿಲ್ಲದೆ ಕಾರ್ಮಿಕರ ಸಂಖ್ಯೆ 14-15 ಸಾವಿರದಿಂದ ಸುಮಾರು 9 ಸಾವಿರಕ್ಕಿಳಿಯಿತು. ಸ್ಟೀಲ್ ಅಥಾರಿಟಿಗೆ ಸೇರಿದ ಮೇಲೆ ಸ್ವಲ್ಪ ವಿಸ್ತರಣೆಗೆ ಅವಕಾಶವಾಯಿತು. ಆದರೆ ಈಗ ಉಕ್ಕು ಕೂಡಾ ಕೋರ್ ವಲಯದಲ್ಲಿ ಇಲ್ಲ. ಅಲ್ಲದೆ ಉಕ್ಕು ವಿಸ್ತರಣೆಗೆ ಸರಕಾರ ಹಣ ಹಾಕುವುದಿಲ್ಲ ಎಂದು ಪ್ರಧಾನಿಗಳು ಘೋಷಿಸಿದ್ದಾರೆ. ಅಂದರೆ ವಿ.ಎಸ್.ಐ.ಎಲ್. ವಿಸ್ತರಣೆಯಾಗದೆ ಕಾರ್ಮಿಕರ ಸಂಖ್ಯೆ ಮತ್ತಷ್ಟು ಕಡಿತಗೊಳ್ಳುತ್ತದೆ.

ಐಕ್ಯರಂಗ : ಬೆಂಗಳೂರಿನಲ್ಲಿ ಸಾರ್ವಜನಿಕ ವಲಯದ ಕಾರ್ಮಿಕರು ಎಷ್ಟಿದ್ದಾರೆ?

* ಸುಮಾರು ಎಪ್ಪತ್ತು ಸಾವಿರ

ಐಕ್ಯರಂಗ : ಅಂದರೆ ಸುಮಾರು ಎಪ್ಪತ್ತು ಸಾವಿರ ಕುಟುಂಬಗಳು

* ಹೌದು ಬ್ಯಾಂಕ್, ಇನ್ಶೂರೆನ್ಸ್ ವಲಯವನ್ನು ಖಾಸಗೀಕರಿಸುವ ಒತ್ತಾಯ ಕೂಡಾ ವಿದೇಶೀ ಕಂಪೆನಿಗಳಿಂದ ಬರುತ್ತದೆ.

ಇನ್ನು ಸರಕಾರ ಬ್ಯಾಂಕುಗಳ ಸಾಲ ನೀಡಿಕೆಯ ಬಡ್ಡಿ ದರದ ಮೇಲೆ ಇದ್ದ ಮಿತಿಯನ್ನು ತೆಗೆದುಬಿಟ್ಟರೆ, ಗ್ರಿಂಡ್ಲೇಸ್ ವಿದೇಶೀ ಬ್ಯಾಂಕ್ ಸಾಲದ ಬಡ್ಡಿದರವನ್ನು ಶೇ. 50 ಕ್ಕೆ ಹೆಚ್ಚಿಸಿದೆಯಂತೆ. ವಿಜಯ ಬ್ಯಾಂಕ್ ಶೇ. 30 ಕ್ಕೆ ಹೆಚ್ಚಿಸುತ್ತದಂತೆ. ಬಂಡವಾಳ ತುಂಬಾ ದುಬಾರಿಯಾಗುತ್ತದೆ. ಇದರಿಂದ ಶೇ. 51 ಇಕ್ವಿಟಿಯ ಅವಕಾಶ ಹೊಂದಿರುವ ವಿದೇಶೀ ಕಂಪೆನಿಗಳಿಗೆ ತಾವೇ ಬಂಡವಾಳ ತರಲು ಸಾಧ್ಯವಿರುವುದರಿಂದ ಸ್ಥಳೀಯ ಉದ್ದಿಮೆಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಇದು 1985 ರಲ್ಲೇ ಆರಂಭವಾಗಿತ್ತು. ಈಗ ಹೆಚ್ಚಾಗಿದೆ.

ಸೆಪ್ಟೆಂಬರ್ 1, 1991



ಬ್ರೆಕ್ಟ್ ಕವನಗಳು

ಫರ್ ಮರಗಳು

ಬೆಳಗಿನ ಹೊತ್ತಲ್ಲಿ
ಫರ್ ಮರಗಳೆಂದರೆ ತಾಮ್ರ,
ಅರ್ಧ ಶತಮಾನದ ಹಿಂದೆ
ಎರಡು ಜಾಗತಿಕ ಯುದ್ಧಗಳಿಗಿಂತ ಮೊದಲು
ನನ್ನ ಪುಟ್ಟ ಕಣ್ಣುಗಳಿಗೆ
ಅವು ಕಂಡದ್ದು ಹಾಗೆ.

ಈ ಬೇಸಿಗೆಯ ಆಕಾಶ

ಸರೋವರದ ಮೇಲೆ, ತೀರ ಎತ್ತರದಲ್ಲಿ
ಸಿಡಿಗುಂಡಿನ ವಿಮಾನ ಹಾರುತ್ತಿದೆ.
ಹುಟ್ಟು ಹಾಕುತ್ತಿರುವ ದೋಣಿಗಳಲ್ಲಿ
ಮಕ್ಕಳು, ಮಹಿಳೆಯರು, ಮುದಕನೊಬ್ಬ
ಕತ್ತೆತ್ತಿ ನೋಡುತ್ತಾರೆ.
ದೂರಕ್ಕೆ ಅವರು
ಆಹಾರಕ್ಕೊಂದು ಇಷ್ಟಗಲ ಕೊಕ್ಕು ತೆರೆದ
ಪುಟ್ಟ ಮೈನಾಗಳಂತೆ ಕಾಣುತ್ತಾರೆ.

ಜನರಲ್

ಜನರಲ್
ನಿನ್ನ ಟ್ಯಾಂಕಿನದು ಭೀಮಬಲ
ಅದು ಕೂಡ ಕೊಲ್ಲುವುದು ನೂರಾರು
ಜನರ ಜಜ್ಜುವುದು
ಆದರೆ ಅದರಲ್ಲೊಂದು ಕೆಡುಕಿದೆ:
ಅದಕ್ಕೊಬ್ಬ ಬೇಕು ಡ್ರೈವರ್

ಜನರಲ್
ನಿನ್ನ ಬಾಂಬರ್ ಭಾರಿ ಶಕ್ತಿಯದು
ಚಂಡಮಾರುತಕ್ಕಿಂತಲು ಮಿಗಿಲುವೇಗದಲ್ಲಿ
ಆನೆಗಿಂತಲು ಮಿಗಿಲು ಭಾರ ಹೊರುವಲ್ಲಿ
ಆದರೆ ಅದರಲ್ಲೊಂದು ಕೆಡುಕಿದೆ:
ಅದಕ್ಕೊಬ್ಬ ಬೇಕು ಮೆಕ್ಯಾನಿಕ್.

ಜನರಲ್
ಮನುಷ್ಯ ಬಹಳ ಉಪಯುಕ್ತ ಪ್ರಾಣಿ
ಅವನು ಹಾರಾಡಬಲ್ಲ ಕೊಲ್ಲಬಲ್ಲ
ಆದರೆ ಅವನಲ್ಲೊಂದು ಕೆಡುಕಿದೆ.
ಅವನು ಮಾಡಬಲ್ಲ ಚಿಂತನೆ.

ಅಂಕಲ್ ಚಿಪ್ಸ್ ತಂತ್ರಜ್ಞಾನ?

ನಮಗೆ ಹೊಸ ತಂತ್ರಜ್ಞಾನ ಬೇಕು, ಅದನ್ನು ವಿದೇಶಗಳಿಂದ ಪಡೆಯಬೇಕು, ಬೇಕಾಗುತ್ತದೆ ಎನ್ನಲಾಗುತ್ತಿದೆ. ಆದರೆ ನಾವು ಪಡೆಯುತ್ತಿರುವುದು ಎಂತಹ ತಂತ್ರಜ್ಞಾನ? 50 ಪೈಸೆಗೆ ದೊರೆಯುವ ಆಲೂಗೆಡ್ಡೆಯನ್ನು 7-8 ರೂಗೆ ಖರೀದಿಸುವಂತೆ ಮಾಡುವ ಅಂಕಲ್ ಚಿಪ್ಸ್ ತಂತ್ರಜ್ಞಾನವೇ ಎಂದು ಲೇವಡಿ ಮಾಡಿದರು ಡಾ. ಫಂದೆ ಕೊಡಗಿನ ಕಾಫಿ ತೋಟ ಕಾರ್ಮಿಕರು ಉತ್ಪಾದಿಸುವ ಕಾಫಿಯನ್ನು ನೆಸ್ಕೆಫೆಯವರು ಆಕರ್ಷಕವಾಗಿ ಪ್ಯಾಕೇಜುಮಾಡಿ ದುಬಾರಿ ಬೆಲೆಗೆ ಮಾರುತ್ತಾರೆ. ನಮಗೆ ದೊರೆತಿರುವುದು ಇಂತಹ ಪ್ಯಾಕೇಜಿಂಗ್ ತಂತ್ರಜ್ಞಾನ ಮಾತ್ರ. ಹಿಂದೆ ಬಿಇಎಲ್ ತಾನು ವಿಕಾಸಗೊಳಿಸಿದ ತಂತ್ರಜ್ಞಾನದಿಂದಲೇ ಎಲ್ಲಾ ಟಿವಿ ಬಿಡಿ ಭಾಗಗಳನ್ನು ತಯಾರಿಸುವುದಾಗಿ ಹೇಳಿತ್ತು. ಆದರೆ ಸರಕಾರ ಅದಕ್ಕೆ ಅನುಮತಿ ನೀಡಲಿಲ್ಲ. ಯಾವ ದೇಶ ತಾನೇ ತನ್ನ ಕೈಗಾರಿಕೆಗಳನ್ನೂ ಮುಚ್ಚಿ ವಿದೇಶೀಯರಿಗೆ ಕಾಂಟ್ರಾಕ್ಟ್ ಕೊಡುತ್ತದೆ ಎಂದು ಪ್ರಶ್ನಿಸಿದ ಡಾ. ಫಂದೆ ಭಾರತ ಸರಕಾರ ಮಾತ್ರ ಹಾಗೆ ಮಾಡುತ್ತಿದೆ, ಜಪಾನ್ ಹಾಗೆ ಮಾಡುವುದಿಲ್ಲ, ಅಮೇರಿಕಾದಲ್ಲೀಗ ಅಮೇರಿಕಾದ ಕಾರುಗಳನ್ನೇ ಬಳಸಬೇಕೆಂದು ಹೇಳಲಾಗುತ್ತಿದೆ ಎಂದರು. ಬಿ.ಹೆಚ್.ಇ.ಎಲ್. ನಾಲ್ಕು ಕೋಟಿ ರೂಗಳಲ್ಲಿ ಮಾಡಿಕೊಡುವುದಾಗಿ ಹೇಳಿದ ಕಾಂಟ್ರಾಕ್ಟ್‌ನ್ನು ಎಬಿಬಿಗೆ 24 ಕೋಟಿ ರೂಗೆ ನೀಡಲಾಯಿತು. ಈ ಹೊಲಸು ವ್ಯವಹಾರದಲ್ಲಿ ನಿಮ್ಮ ಬೆಂಗಳೂರಿನವರೇ ಆದ ಜಾಫರ್ ಶರೀಫ್‌ರ ಪಾತ್ರ ವಿದೆ ಎಂದು ಡಾ. ಫಂದೆ ಹೇಳುತ್ತಾ ಯುಕ್ತ ಇದು ಎಂತಹ ಸ್ಪರ್ಧೆ ಎಂದು ಪ್ರಶ್ನಿಸಿದರು. ಯಾವ ದೇಶವೂ ಸಾಲ ತಂದ ತಂತ್ರಜ್ಞಾನದ ಮೇಲೆ ವಿಶ್ವ ಮಟ್ಟದಲ್ಲಿ ಸ್ಪರ್ಧೆಗಿಳಿಯಲು ಸಾಧ್ಯವಿಲ್ಲ ಎಂದರು.... .....

ಅಕ್ಟೋಬರ್ 18, 1992





ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ 1930 ರಲ್ಲಿ 'ಜೀವನ ವೇತನ' ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿತ್ತು. ಸ್ವಾತಂತ್ರ್ಯದ ನಂತರ 1950 ರಲ್ಲಿ ಅದು ಸಂವಿಧಾನದ ನಿರ್ದೇಶಕ ಸೂತ್ರಗಳಿಗೆ ತಳ್ಳಲ್ಪಟ್ಟಿತು. 'ಜೀವನವೇತನ' ಕೆಳಕ್ಕಿಳಿದು "ನ್ಯಾಯಯುತ ವೇತನ" ವಾಯಿತು. ಅದೂ ಜ್ಯಾರಿಯಾಗಲಿಲ್ಲ. 1957 ರಲ್ಲಿ ಇದು ಇನ್ನೂ ಇಳಿದು 'ಜೀವನಾವಶ್ಯಕ ಕನಿಷ್ಠ ವೇತನ' ಅಥವಾ 'ಬದುಕಿನ ವೇತನ' ಆದರೆ ಇದನ್ನು ಜಾರಿ ಮಾಡುವುದು ಭಾರತ ಸರ್ಕಾರಕ್ಕೆ ಆಗಿಲ್ಲ. ಸುಪ್ರೀಂ ಕೋರ್ಟಿನ ತೀರ್ಪಿಗೂ ಆಗಿಲ್ಲ. ಆದ್ದರಿಂದ ಕಾರ್ಮಿಕರ ವರ್ಗದ ಹೋರಾಟ ಮಾತ್ರವೇ ಇದನ್ನು ಬಗೆಹರಿಸಬಲ್ಲದು.

ಜೀವನಾವಶ್ಯಕ ಕನಿಷ್ಠ ವೇತನ ಎಂದರೇನು? ಅದನ್ನೇಕೆ ಕೇಳುತ್ತೇವೆ?

ವಿ.ಜಿ.ಕೆ. ನಾಯರ್

ಕನಿಷ್ಠ ವೇತನ ತಿಂಗಳಿಗೆ ಒಂದು ಸಾವಿರದ ಐವತ್ತು ರೂಪಾಯಿಗಳಾಗ ಬೇಕೆಂದು ಒತ್ತಾಯಿಸಿ ದೆಹಲಿ ಸುತ್ತ ಮುತ್ತ ಆರಂಭವಾದ ಚಳುವಳಿ ಈಗ ದೇಶವ್ಯಾಪಿಯಾಗಿ ಹರಡಲಾರಂಭಿಸಿದೆ. ಕರ್ನಾಟಕದಲ್ಲಿಯೂ ಈ ಬೇಡಿಕೆಗಾಗಿ ಚಳುವಳಿಯನ್ನು ಬೆಳೆಸಲು ನಿರ್ಧರಿಸಲಾಗಿದ್ದು.

ಮಾಸಿಕ ಕನಿಷ್ಠ ವೇತನ ಒಂದು ಸಾವಿರದ ಐವತ್ತು ರೂಪಾಯಿಗಳಿಗಿಂತ ಕಡಿಮೆಯಾಗಬಾರದೆಂದು ಯಾವ ಆಧಾರದಲ್ಲಿ ಕೇಳಲಾಗುತ್ತದೆ? ಕರ್ನಾಟಕ ರಾಜ್ಯ ಸರ್ಕಾರ ನಿಗದಿಮಾಡಿರುವ ಕನಿಷ್ಠ ವೇತನ ಕೇವಲ ಇದರ ಅರ್ಧದಷ್ಟು ಮಾತ್ರ ಇದೆ. ಹೀಗಿರುವಾಗ ನಾವು ಅದರ ಎರಡರಷ್ಟನ್ನು ಕೇಳಬಹುದಾ ಎಂಬ ಪ್ರಶ್ನೆಯು ಒಂದು ಕಡೆ ಕೇಳಬರುತ್ತಿದೆ. ಇನ್ನೊಂದು ಕಡೆ ಈ ಒಂದು ಸಾವಿರದ ಐವತ್ತು ರೂಪಾಯಿ ಮಾಸಿಕ ಕನಿಷ್ಠ ವೇತನ ಏನೇನೂ ಸಾಲದು: ಇಷ್ಟರಿಂದ ಜೀವನ ನಡೆಸುವುದು ಸಾಧ್ಯವಿಲ್ಲ ಎಂಬ ವಾದವೂ ಕೇಳಿ ಬರುತ್ತದೆ. ಅಖಿಲ ಭಾರತ ಮಟ್ಟದಲ್ಲಿ ಒಂದು ಚಳುವಳಿಯನ್ನು ಬೆಳೆಸುವುದು ಈಗ ಅತ್ಯಗತ್ಯವಾಗಿರುವುದರಿಂದ ಬೇರೆ ಬೇರೆ ರಾಜ್ಯಗಳಲ್ಲಿ ಈಗಿರುವ ಕನಿಷ್ಠ ವೇತನದ ದರಗಳನ್ನು ಪರಿಗಣಿಸಬೇಕಾಗುತ್ತದೆ. ದೆಹಲಿಯಲ್ಲಿ ಈಗಾಗಲೇ ಪರಿಣಾಮಕಾರಿಯಾಗಿ ನಡೆಸಲಾದ ಚಳುವಳಿಯಲ್ಲಿ ಮೂಡಿಬಂದಿರುವ "ಸಾವಿರದ ಐವತ್ತು" ರೂಪಾಯಿಗಳ ಬೇಡಿಕೆಯನ್ನು ನಮ್ಮ ರಾಜ್ಯದಲ್ಲಿಯೂ ಅಳವಡಿಸುವುದು ಸೂಕ್ತವೆನಿಸುತ್ತದೆ. ವೇತನದ ಬಗ್ಗೆ ಸರ್ಕಾರದ ಧೋರಣೆ ಬಂಡವಾಳಶಾಹಿಗಳ ಧೋರಣೆಯಾಗಿದೆ. 1930 ರ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ರಚಿತವಾದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ 'ಜೀವನ ವೇತನ' (Living wage) ದ ಹಕ್ಕು ಒಂದು ಮೂಲಭೂತ ಹಕ್ಕು. ಆದರೆ ಸ್ವಾತಂತ್ರ್ಯ ಬಂದ ನಂತರ ಮೂಲಭೂತ ಹಕ್ಕುಗಳ ಈ ಪಟ್ಟಿ ಹಿಂದಕ್ಕೆ ತಳ್ಳಲ್ಪಟ್ಟು ಸಂವಿಧಾ ರಾಷ್ಟ್ರೀಯ ಧೋರಣೆಯ ನಿರ್ದೇಶನಾತತ್ವ (Directive Principles of State Policy) ಗಳಲ್ಲಿ ಸೇರಿಸಲ್ಪಟ್ಟಿತು. ಹಲ್ಲಿಲ್ಲದ ಬಾಯಿಯಂತಿರುವ ಈ ರಾಷ್ಟ್ರೀಯ ಧೋರಣೆಯ ನಿರ್ದೇಶನಾ ತತ್ವಗಳಲ್ಲಿ 'ಜೀವನ ವೇತನ'ದ ಬಗ್ಗೆ ಹೀಗೆ ಹೇಳಲಾಗಿದೆ. ಕೃಷಿ ಕೂಲಿಕಾರನೂ ಸೇರಿ ... ಎಲ್ಲಾ ಕಾರ್ಮಿಕರಿಗೂ ಅವರ ಜೀವನ ...ನ್ನು ಸುಧಾರಿಸಲು ಮತ್ತು ಅವರ ...ಕ ಮಟ್ಟವನ್ನು ಉತ್ತಮಗೊಳಿ...ವಾದ 'ಜೀವನ ವೇತನ'ವನ್ನು ...ಮ ಸರ್ಕಾರದ ಕರ್ತವ್ಯವಾಗಿರುತ್ತದೆ.

1950 ರಲ್ಲಿ ರಚಿತವಾದ ಸಂವಿಧಾನದ ಈ ನಿರ್ದೇಶನವು ಜಾರಿಯಾಗಲಿಲ್ಲ. ಈ ಬಗ್ಗೆ ಪರಿಶೀಲಿಸಿದ ಭಾರತ ಸರ್ಕಾರವು 'ನ್ಯಾಯ ವೇತನ ಆಯೋಗ' ವನ್ನು ನೇಮಿಸಿತು. ವೇತನದ ಪ್ರಶ್ನೆಯನ್ನು ಪರಿಶೀಲಿಸಿದ ಆಯೋಗವು ಕಾರ್ಮಿಕರಿಗೆ 'ಜೀವನ ವೇತನ' ಕೊಡುವುದು ಆಗುವುದಿಲ್ಲ: ಲಾಭ ಇದ್ದಲ್ಲಿ ಅದರಲ್ಲಿ ಒಂದು ಪಾಲನ್ನು ಕಾರ್ಮಿಕರಿಗೆ ಕೊಡಬೇಕು ಎಂದು ಶಿಫಾರಸು ಮಾಡಿತು. ನ್ಯಾಯ ವೇತನ ಆಯೋಗದ ಶಿಫಾರಸುಗಳು ಕಾಗದದಲ್ಲೇ ಉಳಿದಿವೆ. ಆದರೆ ಜೀವನಕ್ಕೆ ಅವಶ್ಯವಾದ ವೇತನವನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದ್ದರೂ ಅದಕ್ಕಿಂತಲೂ ಕಡಿಮೆಯಾದ 'ನ್ಯಾಯಯುತ ವೇತನ' (Just Wage) ಕ್ಕೆ ಸರ್ಕಾರ 15 ನೇ ಇಂಡಿಯನ್ ಲೇಬರ್ ಕಾನ್ಫರೆನ್ಸ್‌ನಲ್ಲಿ 'ಜೀವನಾವಶ್ಯಕ ವೇತನ' ಕೊಡಬೇಕು ಎಂಬುದನ್ನು ಒಪ್ಪಲಾಯಿತು. ಈ ಸಮ್ಮೇಳನದಲ್ಲಿ ಮಾಲೀಕರ ಪ್ರತಿನಿಧಿಗಳು, ಕಾರ್ಮಿಕರ ಪ್ರತಿನಿಧಿಗಳು, ಮತ್ತು ಸರ್ಕಾರದ ಪ್ರತಿನಿಧಿಗಳು ಇದ್ದರು.

ಜೀವನಾವಶ್ಯಕ ವೇತನಕ್ಕೆ (Need based minimun Wage) ಬದುಕಿನ ವೇತನ (Subsistence Wage) ಎಂದೂ ಕರೆಯಲಾಗಿದೆ. ಮನುಷ್ಯನು ಬದುಕಿರಲು ಉತ್ಪಾದನೆ ಮತ್ತು ಪುನರುತ್ಪಾದನೆ ಮಾಡಲು ಅಗತ್ಯವಿರುವ ಕನಿಷ್ಠ ಆಹಾರ, ಬಟ್ಟೆ ಮನೆ ಮತ್ತು ಇತರ ಖರ್ಚನ್ನು ಲೆಕ್ಕಹಾಕಿ ಅಷ್ಟನ್ನಾದರೂ ಕಾರ್ಮಿಕರಿಗೆ ಕೊಡಬೇಕೆಂಬುದೇ ಅದರ ಅರ್ಥ. ಆದರೆ ಕನಿಷ್ಠ ವೇತನದ ಈ ತತ್ವವನ್ನು ಜಾರಿ ಮಾಡಲು ಸಹ ಭಾರತ ಸರ್ಕಾರದ ವಿಫಲವಾಗಿದೆ. ಜೀವನಾವಶ್ಯಕ ಕೂಲಿಯನ್ನು ಕೊಡದೆ ವ್ಯವಹಾರ ನಡೆಸಲು ಯಾವ ಉತ್ಪಾದನಾ ಅಥವಾ ವ್ಯಾಪಾರದ ಘಟಕಕ್ಕೂ ಹಕ್ಕಿರುವುದಿಲ್ಲ ಎಂದು ಭಾರತದ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದೆ. ಈ ತೀರ್ಪು ಸಹ ಅರಣ್ಯರೋದನವಾಗಿ ಉಳಿದಿದೆ. ಕಾರ್ಮಿಕ ವರ್ಗದ ಸಂಘಟಿತ ಹೋರಾಟದಿಂದ ಮಾತ್ರ ಈ ಪ್ರಶ್ನೆಯನ್ನು ಬಗೆಹರಿಸಲು ಸಾಧ್ಯ.

ಕನಿಷ್ಠ ಕೂಲಿ ಲೆಕ್ಕ ಹಾಕುವುದು ಹೇಗೆ?

ಕನಿಷ್ಠ ವೇತನದ ಹೋರಾಟಕ್ಕೆ ಕಾರ್ಮಿಕರನ್ನು ತಯಾರುಮಾಡಲು ಸಹಾಯವಾಗಲೆಂದು ಜೀವನಾವಶ್ಯಕ ವೇತನವನ್ನು ಲೆಕ್ಕಹಾಕುವ ವಿಧಾನವನ್ನು ಒಂದು ಉದಾಹರಣೆಯೊಂದಿಗೆ ಇಲ್ಲಿ ಕೊಡಬಯಸುತ್ತೇನೆ. ಧಾರಾವಾಡದ ಒಂದು ಕಾರ್ಖಾನೆಯ ಕಾರ್ಮಿಕರಿಗೆ ಕೇಳಲಾದ ವೇತನ ಹೆಚ್ಚಳವನ್ನು ಔದ್ಯಮಿಕ ನ್ಯಾಯಾಧಿಕರಣದಲ್ಲಿ ಸಮರ್ಥಿಸಲು ನಾನು ತಯಾರಿಸಿದ ಲೆಕ್ಕಾಚಾರ ಇದು. 1987 ರಲ್ಲಿ ಇದನ್ನು ತಯಾರು ಮಾಡಿರುವುದರಿಂದ ಇದರಲ್ಲಿ ಅಂದಿನ ಹುಬ್ಬಳ್ಳಿ- ಧಾರಾವಾಡದ ಪೇಟೆ ಧಾರಣೆಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಆ ಪ್ರದೇಶದ ಜನರ ಆಹಾರ ಸಂಪ್ರದಾಯಗಳನ್ನು ಅನುಸರಿಸಲಾಗಿದೆ. ಈ ಲೆಕ್ಕಾಚಾರವನ್ನು ರಾಜ್ಯದ ಇತರ ಕಡೆಗಳಿಗೆ ಅಳವಡಿಸುವುದಾದರೆ ಆಯಾ ಪ್ರದೇಶದ ಜನಬಳಕೆಯ ವಸ್ತುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯವರು ಬಿಳಿ ಜೋಳದ ಬದಲು ಅಕ್ಕಿಯನ್ನು, ಬೆಂಗಳೂರು ಸೀಮೆಯವರು ರಾಗಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಹುದು. ಹಾಗೆಯೇ ಇತ್ತೀಚಿನ ಬೆಲೆಗಳ ಆಧಾರದಲ್ಲಿ ಪಟ್ಟಿಯನ್ನು ಸರಿಪಡಿಸಬಹುದು.

ಒಬ್ಬ ಸಾಮಾನ್ಯ ಕೆಲಸಗಾರನಿಗೆ ಕನಿಷ್ಟ 2,800 ಕ್ಯಾಲರಿ ಆಹಾರ ಅಗತ್ಯ. ಇದರಲ್ಲಿ ಧವಸಧಾನ್ಯಗಳು 475 ಗ್ರಾಂ, ಬೇಳೆಕಾಳು 80 ಗ್ರಾಂ. ಹಸಿರು ತೊಪ್ಪಲು- ಪಲ್ಲೆ 125 ಗ್ರಾಂ, ಇತರ ಕಾಯಿಪಲ್ಲೆಗಳು 75 ಗ್ರಾಂ, ಗೆಡ್ಡೆಗೆಣಸುಗಳು 100 ಗ್ರಾಂ, ಹಣ್ಣುಗಳು 30 ಗ್ರಾಂ ಹಾಲು, 200 ಗ್ರಾಂ ಎಣ್ಣೆ, ತುಪ್ಪ 40 ಗ್ರಾಂ ಮತ್ತು ಸಕ್ಕರೆ/ ಬೆಲ್ಲ 40 ಗ್ರಾಂ.

ಇದು ಸಸ್ಯಾಹಾರಿಗೆ. ಮಾಂಸಹಾರಿಗೆ ಮಾಂಸ ಹಾಗೂ ಮೀನು 30 ಗ್ರಾಂ ಮತ್ತು ಮೊಟ್ಟೆ 30 ಗ್ರಾಂ. ಇವರ ಬದಲು ಆತನಿಗೆ ಬೇಳೆಯಕಾಳುಗಳು 65 ಗ್ರಾಂ ಸಾಕಾಗಬಹುಮ ಹಾಲು 100 ಗ್ರಾಂ ಸಾಕಾಗಬಹುದು.

ಇವರ ಪ್ರಕಾರ ಒಬ್ಬ ಸಾಮಾನ್ಯ ಕೆಲಸಗಾರನಿಗೆ ಒಂದು ದಿನದ ಆಹಾರಕ್ಕೆ ಕನಿಷ್ಟ ಖರ್ಚು:

ಕನಿಷ್ಟ ಖರ್ಚು	ಗ್ರಾಂ	ರೂ.
ಅಕ್ಕಿ	200	0.90
ಬಿಳಿಜೋಳ	150	0.35
ಗೋದಿ	125	0.45
	475	1.70
ತೊಗರಿಬೇಳೆ	40	
ಹೆಸರುಕಾಳು ಇತ್ಯಾದಿ	40	
ಹಸಿರು ಪಲ್ಲೆ		0.62
ಇತರ ಕಾಯಿಪಲ್ಲೆ		0.27
ಗೆಡ್ಡೆ ಗೆಣಸುಗಳು		0.35
ಹಣ್ಣುಗಳು,		
ಹಾಲು		0.90
ಒಳ್ಳೆ ಎಣ್ಣೆ	25	1.35
ತುಪ್ಪ	10	
ಕೊಬ್ಬರಿ ಎಣ್ಣೆ	5	
ಸಕ್ಕರೆ	30	0.20
ಬೆಲ್ಲ	10	0.05
ಒಟ್ಟು ರೂ.		7.12

ಮಾಂಸಹಾರಿಗೆ ಒಟ್ಟು ರೂ. 8.00 ಆಗುತ್ತದೆ. ಸರಾಸರಿ ಲೆಕ್ಕ ತೆಗೆದುಕೊಂಡರೆ ಪ್ರತಿ ದಿನಕ್ಕೆ ಆಹಾರಕ್ಕೆ ತಲಾ ಖರ್ಚು ರೂ. 7.56 ಅಂದರೆ ತಿಂಗಳಿಗೆ ತಲಾ ಖರ್ಚು ರೂ. 226.80

ಇದೇ ರೀತಿ ಬಟ್ಟೆಗಳು, ಒಟ್ಟು ಒಂದು ಗಂಡಸು, ಹೆಂಗಸರು ಹಾಗೂ ಇಬ್ಬರು ಮಕ್ಕಳ ಕುಟುಂಬಕ್ಕೆ ಕನಿಷ್ಠ 66 ಮೀ, (72ಗಜ) ಬಟ್ಟೆ ಬೇಕು. ಗಂಡಸಿಗೆ 2 ಪ್ಯಾಂಟ್ (5ಮೀ) 2 ಶರ್ಟ್ (5ಮೀ) 2. ಪಂಚೆ (6. ಮೀ) ಹೆಂಗಸಿಗೆ 2 ಸೀರೆ(12ಮೀ) ಇತರ ಬಟ್ಟೆ (10ಮೀ) ಇಬ್ಬರು ಮಕ್ಕಳಿಗೆ 4 ಹಾಫ್ ಪ್ಯಾಂಟ್ (6ಮೀ) 4 ಶರ್ಟ್ (5ಮೀ) ಇತರ ಬಟ್ಟೆಗಳು (11ಮೀ) ಇದರ ವಾರ್ಷಿಕ ಖರ್ಚು.

ಗಂಡಸಿಗೆ	ರೂ. ಪೈ.
ಪ್ಯಾಂಟ್	200.00
ಶರ್ಟ್‌ಗಳು	130.00
ಪಂಚೆಗಳು	70.00
ಇತರ ಬಟ್ಟೆ	48.00
ಹೆಂಗಸಿಗೆ	
ಸೀರೆಗಳು	160-00
ಇತರ	80.00
ಮಕ್ಕಳಿಗೆ	
ಹಾಫ್ ಪ್ಯಾಂಟ್‌ಗಳು	240.00
ಶರ್ಟ್‌ಗಳು	130.00
ಇತರ	88.00
ಒಟ್ಟು	1146.00

ತಿಂಗಳಿಗೆ ಸರಾಸರಿ 95.00

ಈಗ ಅಗತ್ಯ ಆಧಾರಿತ ಕನಿಷ್ಠ ತಿಂಗಳ ವೇತನವನ್ನು ಹೀಗೆ ಲೆಕ್ಕ ಹಾಕಬಹುದು.

ಸಾಮಾನ್ಯ ಕುಟುಂಬ

ಹೆಂಡತಿ : 0.8 ಯುನಿಟ್‌ಗಳು
2 ಮಕ್ಕಳು: 1.2 ಯುನಿಟ್
ಒಟ್ಟು 3.0 ಯುನಿಟ್
ಆಹಾರಕ್ಕೆ 3 ಯುನಿಟಿಗೆ 680. 40
ಬಟ್ಟೆ-ಬರೆ 95.50
ಮನೆ ಬಾಡಿಗೆ 50.00
ಇತರೆ ಖರ್ಚು 25% 206. 48
ಒಟ್ಟು ರೂ. 10.32.38

ರೂ. 1032.38ನ್ನು ದಿನಗೂಲಿಯನ್ನಾಗಿ ಲೆಕ್ಕ ಹಾಕಿದರೆ ರೂ. 39.70 ಆಗುತ್ತದೆ. ಅಂದರೆ ಹೆಚ್ಚು ಕಮ್ಮಿ ರೂ. 40

1987 ರಲ್ಲಿ ಈ ಲೆಕ್ಕಚಾರ ಮಾಡುವಾಗ ಗ್ರಾಹಕರ ಬೆಲೆ ಸೂಚ್ಯಂಕದ 752 ರ ಮೇಲಿನ ಪ್ರತಿಯೊಂದು ಪಾಯಿಂಟಿಗೆ ರೂ 1.37 ತುಟ್ಟಿ ಭತ್ಯೆ ನೀಡಬೇಕಾಗಿತ್ತು. ಇದನ್ನು ದಿನಕೂಲಿಗೆ ಅಳವಡಿಸಿದಾಗ ಪಾಯಿಂಟಿಗೆ ಕನಿಷ್ಟ 5 ಪೈಸೆಗೆ ಸಿಗಬೇಕಾಗುತ್ತದೆ. 1989 ರ ಸೂಚ್ಯಾಂಕವನ್ನು ಆಧರಿಸಿ ಲೆಕ್ಕ ಹಾಕಿದರೆ 848 ಪಾಯಿಂಟುಗಳಿಗೆ ಮಾಸಿಕ ವೇತನ ರೂ. 12/ 77 ಆಗುತ್ತದೆ. ಹಾಗೆಯೇ ದಿನಗೂಲಿ ರೂ. 49.


ಈ ವಿವರಗಳನ್ನು ತಮ್ಮ ತಮ್ಮ ಪ್ರದೇಶದ ಈಗಿನ ಬೆಲೆಗಳ ಆಧಾರಗಳಲ್ಲಿ ಲೆಕ್ಕ ಹಾಕಿ ಕಾರ್ಮಿಕರಿಗೆ ವಿವರಣೆ ನೀಡಿದರೆ ನಾವು ಕೇಳುತ್ತಿರುವ ಜೀವನಾವಶ್ಯಕ ಕನಿಷ್ಟ ವೇತನ ಅದು ಹೇಗೆ ನ್ಯಾಯವಾಗಿದೆ ಎಂಬುದನ್ನು ಮನವರಿಕೆ ಮಾಡಲು ಸಾಧ್ಯವಾಗುವುದಲ್ಲದೆ ಕನಿಷ್ಟ ವೇತನಕ್ಕಾಗಿ ನಡೆಯಲಿರುವ ಚಳುವಳಿಯನ್ನು ಸಂಘಟಿಸಲು ಸಹಾಯವಾಗುವುದು.

"ಈಗ ಆಗಿದೆ ಆರಂಭ"

ದೇಶಾದ್ಯಂತ 10 ಲಕ್ಷ ಜನಗಳ ಸಮರಧೀರ ಪ್ರತಿಭಟನೆ

ರೈಲ್ವೆ ಬಜೆಟ್ ಹಾಗೂ ಸಾರ್ವತ್ರಿಕ ಬಜೆಟ್‌ನ ಮೂಲಕ ಇನ್ನಷ್ಟು ಸ್ಫುಟಗೊಂಡಿರುವ ನರಸಿಂಹರಾವ್ ಸರ್ಕಾರದ ಐ.ಎಂ.ಎಫ್ ವಿಶ್ವ ಬ್ಯಾಂಕ್ ಚೌಕಟ್ಟನ್ನು ಚಾಚೂ ತಪ್ಪದೆ ಪಾಲಿಸಿ ಜನ ಸಾಮಾನ್ಯರ ಭವಿಷ್ಯವನ್ನು ದೇಶದ ಸ್ವಾತಂತ್ರ್ಯವನ್ನು ದೇಶೀ ವಿದೇಶೀ ಸಿರಿವಂತರ ಲಾಭಕ್ಕಾಗಿ ಒತ್ತೆಯಿಡುತ್ತಿರುವ ಆರ್ಥಿಕ ನೀತಿಗಳ ವಿರುದ್ಧ ಎಡ ಪಕ್ಷಗಳ ಕರೆಯಂತೆ ದೇಶಾದ್ಯಂತ ಹತ್ತು ಲಕ್ಷಕ್ಕೂ ಹೆಚ್ಚು ಜನರು ಮಾರ್ಚ್ 4 ರಂದು ಸಮರಧೀರ ಪ್ರತಿಭಟನೆ ವ್ಯಕ್ತಪಡಿಸಿದರು.

8 ಮಾರ್ಚ್ 1992



ನ. 29ರ ಸಾರ್ವತ್ರಿಕ ಮುಷ್ಕರ

ದುಡಿಯುವ ಜನ ಇಟ್ಟ ಐತಿಹಾಸಿಕ ಹೆಜ್ಜೆ

ಭಾರತದ ಕಾರ್ಮಿಕ ವರ್ಗ ತನ್ನ ಒಂದು ದಿನದ ಬೃಹತ್ ಕಾರ್ಯಾಚರಣೆಯ ಮೂಲಕ ಕೇಂದ್ರದ ಆಳರಸರಿಗೆ ಎಚ್ಚರಿಕೆ ನೀಡಿದೆ. ಸೆಪ್ಟೆಂಬರ್ 16 ಹಾಗೂ 17 ರಂದು ದೆಹಲಿಯಲ್ಲಿ ಸೇರಿದ್ದ ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ 40 ಕ್ಕೂ ಹೆಚ್ಚು ಕೈಗಾರಿಕಾವಾರು ಒಕ್ಕೂಟಗಳು ನೀಡಿದ ಕರೆಗೆ ಓಗೊಟ್ಟು ನವಂಬರ್ 29 ರಂದು 1.2 ಕೋಟಿ ಕಾರ್ಮಿಕರು 35 ಲಕ್ಷ ರಾಜ್ಯ ಸರಕಾರಿ, ಕೇಂದ್ರ ಸರಕಾರಿ ನೌಕರರು ಈ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿ ದೇಶದ ಕಾರ್ಮಿಕ ಆಂದೋಲನಕ್ಕೆ ಮಾತ್ರವಲ್ಲ, ಇಡೀ ಪ್ರಜಾಪ್ರಭುತ್ವ ಆಂದೋಲನಕ್ಕೆ ಹೊಸ ದಿಕ್ಕು ನೀಡುವತ್ತ ಅತ್ಯಂತ ಯಶಸ್ವಿ ಹೆಜ್ಜೆ ಇಟ್ಟಿದ್ದಾರೆ. ದೇಶದ ದುಡಿಯುವ ಜನಗಳನ್ನು, ಪ್ರಜಾಪ್ರಭುತ್ವ ಶಕ್ತಿಗಳನ್ನು ಎಲ್ಲೆಡೆಯಿಂದ ಆವರಿಸಿರುವ ಹತಾಶೆಯ ಅಂಧಕಾರದಲ್ಲಿ ಹೊಸ ಬೆಳಕು ಮೂಡಿದೆ.


ಉಕ್ಕು ಕಲ್ಲಿದ್ದಲು ಬಂದರು, ಹಡಗು ನಿರ್ಮಾಣ, ಇತರ ಸಾರ್ವಜನಿಕ ಹಾಗೂ ಖಾಸಗೀ ಉದ್ದಿಮೆಗಳು, ವಿಮಾನ, ರೈಲು, ಬ್ಯಾಂಕ್, ವಿಮಾ ಕ್ಷೇತ್ರಗಳಲ್ಲಿ ಕೆಲಸ ಸಂಪೂರ್ಣ ನಿಂತು ಹೋಯಿತು ಎಂದು ಸರಕಾರವೇ ಪರೋಕ್ಷವಾಗಿ ಒಪ್ಪಿಕೊಂಡಿದೆ. ಎಡಶಕ್ತಿಗಳು ಪ್ರಭಾವಶಾಲಿಯಾಗಿರುವ ಪಶ್ಚಿಮಬಂಗಾಳ, ಕೇರಳ, ತ್ರಿಪುರಾಗಳಷ್ಟೇ ಅಲ್ಲ, ಬಿಹಾರ ಮಹಾರಾಷ್ಟ್ರ ತಮಿಳುನಾಡು ಮತ್ತಿತರ ಕಡೆಗಳಲ್ಲೂ ಮುಷ್ಕರಕ್ಕೆ ಭಾರೀ ಬೆಂಬಲ ಕಂಡುಬಂತು. ದೇಶದ ಎಲ್ಲಾ ಪ್ರಮುಖ ಕೈಗಾರಿಕಾ ಕೇಂದ್ರಗಳು, ನಗರಗಳು ಪಟ್ಟಣಗಳಲ್ಲಿ ಉತ್ಪಾದನಾ ಚಕ್ರ ಸಂಪೂರ್ಣವಾಗಿ ನಿಂತು ಹೋಯಿತು. ಇಂಟಕ್, ಬಿ.ಎಂ.ಎಸ್. ಮುಷ್ಕರದಲ್ಲಿ ಬಾಗವಹಿಸುತ್ತಿಲ್ಲ ಎಂದು ಮತ್ತೆ ಮತ್ತೆ ಹೇಳಿಕೊಂಡರೂ ಕೇಂದ್ರ ಸರಕಾರದ ಧೋರಣೆಗಳ ಬಗ್ಗೆ ಅಸಂತೃಪ್ತಿ ಹೆಚ್ಚುತ್ತಿರುವ ದೇಶದ ಆಳುವ ಪಕ್ಷ ಹಾಗೂ ಪ್ರಮುಖ ವಿರೋಧ ಪಕ್ಷವೆಂದು ಹೇಳಿಕೊಳ್ಳುವ ಬಿಜೆಪಿ ಕೂಡಾ ದೇಶದ ದುಡಿಯುವ ಜನಗಳಿಗೆ ವಂಚನೆ ಮಾಡಲು ಹೊರಟಿವೆ ಎಂಬುದನ್ನು ಹೆಚ್ಚೆಚ್ಚಾಗಿ ಅರಿತುಕೊಳ್ಳಲಾರಂಭಿಸಿದ ಈ ಸಂಘಗಳ ಪ್ರಭಾವದಲ್ಲಿರುವ ಕಾರ್ಮಿಕರೂ ಈ ಐತಿಹಾಸಿಕ ಕಾರ್ಯಾಚರಣೆಯಲ್ಲಿ ಬಾಗವಹಿಸಿದ್ದಾರೆ ಎಂಬುದು ಗಮನಾರ್ಹವಾದ ಸಂಗತಿ.

ಡಿಸೆಂಬರ್ 1, 1991

ಕೈಗಾರಿಕಾ ಧೋರಣೆ ವಿರುದ್ಧ ಎಡರಂಗ- ರಾಷ್ಟ್ರೀಯರಂಗ ಸಭಾತ್ಯಾಗ

ಆಗಸ್ಟ್ 26, ಕೈಗಾರಿಕಾ ನೀತಿಯ ಮೇಲಿನ ದೀರ್ಘ ಚರ್ಚೆಗೆ ಪ್ರಧಾನಿಗಳ ಅತ್ಯಂತ ಅತೃಪ್ತಿಕರ ಉತ್ತರದ ನಂತರ "ದೇಶವನ್ನು ಮಾರಹೊರಟಿರುವ ಧೋರಣೆಯಿದು" ಎಂದು ಘೋಷಿಸಿದ ಸಿಪಿಐ(ಎಂ) ನ ಲೋಕಸಭಾ ಮುಖಂಡ ಕಾಂ. ಸೋಮನಾಥ ಚಟರ್ಜಿಯವರ ನೇತೃತ್ವದಲ್ಲಿ ಎಡರಂಗ-ರಾಷ್ಟ್ರೀಯರಂಗದ ಸದಸ್ಯರು ಪ್ರತಿಭಟನಾ ಸಭಾತ್ಯಾಗ ಮಾಡಿದರು. ಇನ್ನೂ ಕೆಲವು ವಿರೋಧ ಪಕ್ಷಗಳ ಸದಸ್ಯರೂ ಹಿಂಬಾಲಿಸಿದರು. ದೇಶವನ್ನು ಮಾರಲು ಯಾವ ಸಂಕೋಚವಿಲ್ಲದೆ ಸಿದ್ಧರಾಗಿ ಕುಳಿತಿದ್ದ ಕಾಂಗ್ರೆಸ್ (ಐ) ಹಾಗೂ ಅದರ ಮಿತ್ರ ಪಕ್ಷಗಳ ಜೊತೆ ತಾನೇ ದೇಶದ ಏಕೈಕ ವಿರೋಧ ಪಕ್ಷವೆಂದು ನಂಬಿಸಲು ಗಂಟಲು ಹರಿದುಕೊಂಡು ಪ್ರಯತ್ನಿಸುತ್ತಿರುವ ಬಿಜೆಪಿ ಸದಸ್ಯರೂ ಮೌನವಾಗಿ ಕೂತಿದ್ದರು. ಕೈಗಾರಿಕಾ ನೀತಿ ಕಂಡು ಮಂತ್ರಮುಗ್ಧರಾಗಿದ್ದಾರೋ ಎಂಬಂತೆ ಮತ್ತೊಮ್ಮೆ ಅವರು ತಮ್ಮ ನಿಜರೂಪವನ್ನು ಜನರ ಮುಂದೆ ತೋರಿಸಿದರು.

ಸೆಪ್ಟೆಂಬರ್ 1, 1991



ರಾಜ್ಯಾದ್ಯಂತ ಸಂಚರಿಸಿದ ಏಳು ಜಾಥಾಗಳು

ವಿ.ಜೆ.ಕೆ. ನಾಯರ್

ನ. 8ರಿಂದ 15 ರವರೆಗೆ ರಾಜ್ಯದ ಮೂಲೆ ಮೂಲೆಗಳಲ್ಲಿ ನೂರಕ್ಕೂ ಹೆಚ್ಚು ತಾಲೂಕುಗಳಲ್ಲಿ ಮೂನ್ನೂರಕ್ಕು ಹೆಚ್ಚು ಸಭೆಗಳ ಮೂಲಕ, ಇನ್ನೂ ಹಲವು ದಾರಿಬದಿಗಳ ಸಭೆಗಳ ಮೂಲಕ ವ್ಯಾಪಕ ಜನಸಂಪರ್ಕ ಬೆಳೆಸಿದ ಜಾಥಾ ಕಾರ್ಯಕ್ರಮ ಕರ್ನಾಟಕದ ಸಂದರ್ಭದಲ್ಲಿ ಒಂದು ವಿಶಿಷ್ಠ ಕಾರ್ಯಕ್ರಮ. ನರಸಿಂಹರಾವ್ ಸರಕಾರದ ಆರ್ಥಿಕ ನೀತಿಗಳ ಜನ-ವಿರೋಧಿ, ದೇಶ- ವಿರೋಧಿ ಆಯಾಮಗಳನ್ನು, ಬಿಜೆಪಿ ನೇತೃತ್ವದ ಕೋಮುವಾದಿಗಳ ಜನ-ವಿರೋಧಿ ವಿಚ್ಛಿದ್ರಕಾರಿ ನಿಲುವನ್ನು ರೈತರಿಗೆ, ಕಾರ್ಮಿಕರಿಗೆ, ಕೂಲಿಕಾರರಿಗೆ ಮನವರಿಕೆ ಮಾಡಿಸಲು ಪ್ರಯತ್ನಿಸಿದ ಈ ಜಾಥಾಗಳು ರಾಜ್ಯದ ವಿವಿಧ ಪ್ರದೇಶಗಳ ಪರಿಸ್ಥಿತಿಗಳನ್ನು ಕಣ್ಣಾರೆ ಕಂಡವು. ಜನಗಳ ಹಿತಾಸಕ್ತಿ ಸಾಧಿಸುವಲ್ಲಿ ಎಡ, ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳ ಐಕ್ಯತೆಯ ಅಡಿಗಲ್ಲು ಹಾಕಿದ ಕಾರ್ಯಕ್ರಮ ಇದು.

ನವೆಂಬರ್ 22, 1992

ರಾಜ್ಯದ ಎಲ್ಲೆಡೆ ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ

ದುಡಿಯುವ ಜನಗಳ ಜೀವ ಹಿಂಡುವ ನೀತಿಗಳ ವಿರುದ್ಧ ವ್ಯಾಪಕ ಚಳುವಳಿಗೆ ನಾಂದಿ

ಫೆಬ್ರವರಿ 10, ರಾಜಧಾನಿ ಬೆಂಗಳೂರು, ಪಕ್ಕದ ಕೆ.ಜಿ.ಎಫ್, ಮಂಗಳೂರು, ದೂರದ ಬೆಳಗಾವಿ, ಬಿಜಾಪುರ ಹೀಗೆ ರಾಜ್ಯದ ಪ್ರತಿ ಜಿಲ್ಲೆಯ ಕೇಂದ್ರದಲ್ಲಿ ತಾಲೂಕುಗಳಲ್ಲಿ ಹಲವೆಡೆ ಗ್ರಾಮಗಳಲ್ಲಿ ಧರಣಿ, ಮೆರವಣಿಗೆ, ಪ್ರತಿಭಟನೆಗಳ ಮೂಲಕ ತನ್ನ ಚುನಾವಣಾ ಭರವಸೆಯನ್ನು ಸಂಪೂರ್ಣ ಮರೆತು ಜನರಿಗೆ ವಂಚನೆ ಮಾಡಿದ ಕಾಂಗ್ರೆಸ್ ವಿರುದ್ಧ ಐ.ಎಂ.ಎಫ್ ನೆದುರು ಹಲ್ಲುಗಿಂಜುತ್ತಾ ಅವರ ಸಿರಿವಂತರ ಪರವಾದ ತತ್ವಗಳನ್ನು ಮಂಡಿಸಿ ಬೆಲೆಯಿಳಿಸುವ ಬದಲು ವಚನ ಭ್ರಷ್ಟರಾಗಿ ಬೆಲೆಗಳನ್ನು ಅಕ್ಕಿ ಗೋಧಿ, ಸಕ್ಕರೆ, ಪೆಟ್ರೋಲ್, ಡೀಸೆಲ್‌ಗಳ ಬೆಲೆಯನ್ನೇ ತಾನೇ ಹೆಚ್ಚಿಸಿ ಇನ್ನಷ್ಟು ಇಂತಹ ಕ್ರಮಗಳ ಬೆದರಿಕೆ ಹಾಕುತ್ತಾ ಜನ ಸಾಮಾನ್ಯರ ಹೊಟ್ಟೆಗೆ ಹೊಡೆಯುತ್ತಿರುವ ಅಲ್ಪಮತದ ಸರಕಾರದ ವಿರುದ್ಧ ವ್ಯಾಪಕ ಪ್ರತಿಭಟನೆ.

ಫೆಬ್ರವರಿ 16, 1992

ಮತ್ತೊಂದು ಐತಿಹಾಸಿಕ ಹೆಜ್ಜೆ

ಜೂನ್ 16 : ಐಕ್ಯ ಕಾರ್ಮಿಕ ಆಂದೋಲನದ ಮತ್ತೊಂದು ಮೈಲಿಗಲ್ಲು

ದೇಶದೆಲ್ಲೆಡೆ, ಗುವಾಹಾಟಿಯಿಂದ ಹಿಡಿದು ತಿರುವನಂತಪುರಂ ವರೆಗೆ ಒಂದುವರೆ ಕೋಟಿಯಷ್ಟು ಸಂಘಟಿತ ಕಾರ್ಮಿಕರು ಹಾಗೂ ಇತರ ದುಡಿಯುವ ಜನ ಏಳುತಿಂಗಳಲ್ಲಿ ಎರಡನೇ ಬಾರಿ ಕೇಂದ್ರ ಸರಕಾರದ ದೇಶ ವಿರೋಧಿ, ಜನ ವಿರೋಧಿ ಸ್ವರೂಪವನ್ನು ಬಯಲಿಗೆಳೆದರು. ಹತ್ತು ಕೇಂದ್ರ ಕಾರ್ಮಿಕ ಸಂಘಗಳು ಹಾಗೂ 50 ಕ್ಕೂ ಹೆಚ್ಚು ಕೈಗಾರಿಕಾವಾರು ಒಕ್ಕೂಟಗಳು ಹಾಗೂ ಸಂಘಟನೆಗಳು ಐ.ಎಂ.ಎಫ್ ಆರ್ಥಿಕ ಹಾಗೂ ಕೈಗಾರಿಕಾ ನೀತಿಗಳನ್ನು ರದ್ದುಪಡಿಸಬೇಕೆಂದು ಆಗ್ರಹಿಸಿ ನೀಡಿದ ಕರೆಗೆ ಜೂನ್ 16 ರಂದು ಬೃಹತ್ ಪ್ರಮಾಣದ ಮುಷ್ಕರದಲ್ಲಿ ಭಾಗವಹಿಸಿದರು. ನವಂಬರ್ 29ರ ಕಾರ್ಯಾಚರಣೆಗಿಂತ ಹೆಚ್ಚು ವ್ಯಾಪಕವಾದ ಕಾರ್ಯಾಚರಣೆಯಿದು ಎಂದು ಮುಷ್ಕರಕ್ಕೆ ಕರೆನೀಡಿದ ಸ್ಪಾಂಸರಿಂಗ್ ಕಮಿಟಿ ವಕ್ತಾರರು ತಿಳಿಸಿದ್ದಾರೆ. ಈ ಮುಷ್ಕರವು ದೇಶದ ಕಾರ್ಮಿಕರ ಆಂದೋಲನದಲ್ಲಿ ಐಕ್ಯತೆ ಬೆಸೆಯುವತ್ತ ಇನ್ನೊಂದು ಮೈಲಿಗಲ್ಲು.

ಜೂನ್ 21, 1992

ಸಂಸತ್ತಿನೆದುರು ಮೊಳಗಿದೆ ಕಾರ್ಮಿಕರ ರಣಕಹಳೆ

ನವಂಬರ್ 25, 1992 ರಾಷ್ಟ್ರದ ರಾಜಧಾನಿಯ ನೆಲ ಲಕ್ಷ ಲಕ್ಷ ಕಾರ್ಮಿಕರ ದೃಢ ನಿರ್ಧಾರದ ಹೆಜ್ಜೆ ಸಪ್ಪಳದಿಂದ ನಡುಗಿತು. ಸಾವಿರಾರು ಕೆಂಬಾವುಟಗಳಿಂದ, ಕೆಂಪು ಬ್ಯಾನರುಗಳಿಂದ ತುಂಬಿ ತುಳುಕುತ್ತಿದ್ದ ವಿಶಾಲ ಬೋಟ್‌ಕ್ಲಬ್ ಮೈದಾನದಲ್ಲಿ ಭಾರತ ಸರಕಾರ ಐ.ಎಂ.ಎಫ್-ವಿಶ್ವಬ್ಯಾಂಕ್‌ನ ಅವಮಾನಕಾರೀ ಶರತ್ತುಗಳಿಗೆ ತಲೆಬಾಗಿ ಅನುಸ ... ಗಳ ಸಾರ್ವತ್ರಿಕ ಮುಷ್ಕರ, ಹೋರಾಟಗಳನ್ನು ನಡೆಸುವ ಹಾಗೂ ಅಂತಿಮವಾಗಿ ಬೃಹತ್ 'ಭಾರತ್ ಬಂದ್' ಸಂಘಟಿಸುವ ದುಡಿಯುವ ಜನರ ರಣಕಹಳೆ ಮೊಳಗಿತು. ದೇಶ ನಿಮ್ಮದಲ್ಲ, ನಮ್ಮದು, ಕೋಟಿ ಕೋಟಿ ದುಡಿಯುವ ಜನಗಳದ್ದು, ನಿಮ್ಮ ಸಂಕುಚಿತ ಹಿತಾಸಕ್ತಿಗಳಿಗಾಗಿ ದೇಶವನ್ನು ಮಾರಲು ನಿಮಗೆ ನಾಚಿಕೆಯೆನಿಸಲಿಕ್ಕಿಲ್ಲ. ಆದರೆ ನಾವು ಬಿಡುವುದಿಲ್ಲ ಎಂದು ಸಾರಿದರು.



ಎಡರಂಗ-ಎಡಪ್ರಜಾಪ್ರಭುತ್ವ ರಂಗದ ವಿಜಯದ ಹಿಂದೆ

ಸಂಸದೀಯ ಹೋರಾಟದಲ್ಲಿ ಸಿಪಿಐ(ಎಂ) ಭಾಗವಹಿಸುವ ಈ ನಿರ್ದಿಷ್ಟ ರೂಪ, ರಾಜ್ಯ ಮಟ್ಟದಲ್ಲಿ ಸರ್ಕಾರಗಳ ರಚನೆ ಅರಿಯದ ಜನ ಯೋಚಿಸುವಷ್ಟು ಶಾಂತಿಯುತವಾದದ್ದೇನಲ್ಲ. ಅದಕ್ಕಾಗಿ ಸಾವಿರಾರು ಜೀವಗಳು ಬಲಿತೆತ್ತಿವೆ. ತೀವ್ರ ರಾಜಕೀಯ ಸಂಘರ್ಷ, ಆಳುವ ಕಾಂಗ್ರೆಸ್ ಪಕ್ಷದ ದಾಳಿಗಳನ್ನು ಹಿಮ್ಮೆಟ್ಟಿಸಲು ಒಂದಾದ ಮೇಲೊಂದು ವಿಧಾನ ಸಭೆಯ ಹೊರಗೆ ಚಳುವಳಿಗಳನ್ನು ಹೂಡಬೇಕಾಯಿತು. 71-77 ರ ನಡುವೆ ಅರೆಫ್ಯಾಸಿಸ್ಟ್ ಭಯೋತ್ಪಾದಕ ಆಡಳಿತೆಯ ಸಮಯದಲ್ಲಿ ಪ. ಬಂಗಾಳದಲ್ಲಿ 1,200 ಸಿ.ಪಿ.ಐ(ಎಂ) ಕಾರ್ಯಕರ್ತರು ಕೇರಳದಲ್ಲಿಯೂ 300 ಜನ ಸಂಗಾತಿಗಳು ಸಿಪಿಐ ಮುಖ್ಯಮಂತ್ರಿ ಅಚ್ಯುತಮೆನನ್ನರ ಆಳ್ವಿಕೆಯಲ್ಲಿ ಕೊಲೆಯಾಗಿದ್ದಾರೆ. ಮಾತ್ರವಲ್ಲ 1971 ರ ನಂತರ ಎಡರಂಗ ಸರ್ಕಾರ ಪ. ಬಂಗಾಳದಲ್ಲಿ ಆಡಳಿತ ನಡೆಸಲಾರಂಭಿಸಿದ ಮೇಲೂ 500 ಜನ ನಮ್ಮ ಕಾರ್ಯಕರ್ತರು ನಮ್ಮ ವರ್ಗ ಶತ್ರುಗಳಿಂದ ಕೊಲೆಯಾಗಿದ್ದಾರೆ.

-- ಬಸವಪುನ್ನಯ್ಯ

ರಾಜ್ಯ ಸರಕಾರಗಳು ಮತ್ತು ಪ್ರಭುತ್ವ ಯಂತ್ರ

ಇಡೀ ಪ್ರಭುತ್ವ ಯಂತ್ರ, ಅಧಿಕಾರಶಾಹಿ, ನ್ಯಾಯಾಂಗ ಹಾಗೂ ಪೋಲೀಸ್ ಇಲಾಖೆಗಳ ಈಗಿನ ರಚನೆ ರಾಜ್ಯಗಳ ಮಟ್ಟದಲ್ಲಿ ಕೂಡಾ ಒಂದು ನಿರ್ದಿಷ್ಟ ವರ್ಗಧೋರಣೆಯುಳ್ಳ ಸ್ಥಿತಿವಂತರು ಆಸ್ತಿವಂತರ ಕಡೆಗೆ ಪಕ್ಷಪಾತವುಳ್ಳಯಂತ್ರ. ಈಗಿನ ಸಂವಿಧಾನದಡಿಯಲ್ಲಿ ಕಾರ್ಯ ನಿರ್ವಹಿಸಬೇಕಾದ ರಾಜ್ಯ ಸರ್ಕಾರಗಳು ತಮ್ಮ ಜನಪ್ರಿಯ ನೀತಿಯನ್ನು ಕಾರ್ಯಗತಗೊಳಿಸಲು ಬೇಕಾದ ಸಮರ್ಥ ಸಾಧನವಾಗುವಂತೆ ಈ ಪ್ರಭುತ್ವ ಯಂತ್ರವನ್ನು ಪೂರ್ಣವಾಗಿ ಪುನಃರೂಪಿಸುವ ಸ್ವಾತಂತ್ರ್ಯ ಹೊಂದಿಲ್ಲ.

ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗಾಯಿಸುವುದು, ತೀರಾ ಅದಕ್ಷರನ್ನು, ಭ್ರಷ್ಟರನ್ನು ಶಿಕ್ಷಿಸುವುದು, ನಿಷ್ಠ, ಒಳ್ಳೆಯ ಅಧಿಕಾರಿಗಳ ಮೇಲೆ ಅವಲಂಬಿಸುವುದು ಈ ಯಂತ್ರದ ಕೇಡನ್ನು ಕಡಿಮೆ ಮಾಡಬಹುದೇ ಹೊರತು ಪೂರ್ಣವಾಗಿ ನಿವಾರಿಸಲು ಸಾಧ್ಯವಿಲ್ಲ. ಈ ಮಿತಿಯನ್ನು ಅರ್ಥಮಾಡಿಕೊಳ್ಳಬೇಕು, ಮಾತ್ರವಲ್ಲ ಜನರಿಗೂ ಈ ಬಗ್ಗೆ ಅರಿವು ಮೂಡಿಸಬೇಕು.

ಬಸವಪುನ್ನಯ್ಯ

ಈ ಫಲಿತಾಂಶಗಲು ವಿರೋಧ ಪಕ್ಷಗಳಿಗೂ ಒಂದು ಪಾಠ ಕಲಿಸುತ್ತದೆ. ವೈಯುಕ್ತಿಕ ಆಕಾಂಕ್ಷೆಗಳನ್ನು ಬದಿಗೊತ್ತಿ ಸೈದ್ಧಾಂತಿಕ ಆಧಾರದ ಮೇಲೆ ಜೊತೆಗೂಡಿ ಸ್ಪರ್ಧೆಗೆ ನಿಂತಲೆ ಪರ್ಯಾಯ ಪಕ್ಷವೊಂದನ್ನು ಆದರಿಸಲು ಭಾರತದ ಮತದಾರ ಸಿದ್ಧನಿರುವನೆಂದು ಇದರಿಂದ ಸುಸ್ಪಷ್ಟವಾಗುತ್ತದೆ.

- ಪ್ರಜಾವಾಣಿ

ಮಾರ್ಚ್ 29, 1987

ತ್ರಿಪುರ ಸರಕಾರದ ಮಹತ್ಸಾಧನೆ

ನೃಪೇನ್ ಚಕ್ರವರ್ತಿಯವರೊಡನೆ ಒಂದು ಸಂದರ್ಶನ

(ಗಣಶಕ್ತಿ ತಾ : 18-1-1987ರ ಸಂಚಿಕೆಯಲ್ಲಿ ನಡೆಸಲಾದ ಸಂದರ್ಶನ)

ಗಣಶಕ್ತಿ

ನಿಮ್ಮ ಅಭಿಪ್ರಾಯದಲ್ಲಿ ತ್ರಿಪುರಾದ ಎಡರಂಗದ ಅತ್ಯಂತ ದೊಡ್ಡ ಸಾಧನೆ ಯಾವುದು?

ನೃಪೇನ್ ಚಕ್ರವರ್ತಿ

ಬುಡಕಟ್ಟು ಜನರು ಮತ್ತು ಇತರರ ನಡುವಿನ ಜನಾಂಗೀಯ ಐಕ್ಯತೆಯೇ ನಮ್ಮ ಅತ್ಯಂತ ದೊಡ್ಡ ಸಾಧನೆ. ನಮ್ಮ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇಕಡಾ ಎಪ್ಪತ್ತರಷ್ಟು ಜನ ಬುಡಕಟ್ಟು ಜನಾಂಗಕ್ಕೆ ಸೇರದೇ ಇರುವವರು. ಈ ಜನ ಬುಡಕಟ್ಟು ಜನರನ್ನು ಸಂರಕ್ಷಿಸಲು ಮುಂದೇ ಬರದೇ ಇದ್ದಿದ್ದಲ್ಲಿ ಬುಡಕಟ್ಟು ಜನರ ರಕ್ಷಣೆ ಅಸಾಧ್ಯವಾಗುತ್ತಿತ್ತು. ಸ್ವಾಯುತ್ತ ಅಧಿಕಾರವುಳ್ಳ ಜಿಲ್ಲಾ ಕೌನ್ಸಿಲುಗಳೂ ಈ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಿವೆ. ನಮ್ಮ ರಾಜ್ಯದ ಮೂರನೇ ಎರಡರಷ್ಟು ಭಾಗವು ಸ್ವಾಯುತ್ತ ಜಿಲ್ಲಾ ಕೌಂಸಿಲುಗಳ ವ್ಯಾಪಿಯಲ್ಲಿ ಬರುತ್ತವೆ. ಮತ್ತು ರಾಜ್ಯದ ಮೂರನೇ ಒಂದಂಶ ಜನ ಇಲ್ಲಿ ನೆಲೆಸಿದ್ದಾರೆ. ಇದರಲ್ಲಿ ಬುಡಕಟ್ಟು ಜನಾಂಗಕ್ಕೆ ಸೇರದಿರುವವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಬೇರೆ ರಾಜ್ಯಗಳಲ್ಲಿ ಇಂತಹ ಪರಿಸ್ಥಿತಿ ಏನಾದರೂ ಇದ್ದಿದ್ದರೆ ಬಹುಶಃ ಅಲ್ಲಿ ಜನಾಂಗೀಯ ಹಿಂಸೆ ನಡೆದು ಸಾಕಷ್ಟು ರಕ್ತಪಾತ ಸಂಭವಿಸುತ್ತಿತ್ತು. ತ್ರಿಪುರಾದಲ್ಲಿ ಐದು ಲಕ್ಷಜನ ಬುಡಕಟ್ಟು ಜನಾಂಗದವರಿದ್ದಾರೆ. ಅವರಿಗೆ ತಮ್ಮ ಬುಡಕಟ್ಟು ಭಾಷೆಯಲ್ಲೇ ಶಿಕ್ಷಣ ಪಡೆಯುವ ಹಕ್ಕೂ ಇದೆ. ಈ ಸ್ಥಿತಿ ಬೇರೆ ಯಾವ ರಾಜ್ಯದಲ್ಲಾದರೂ ಇದೆಯೇ? ಡಾರ್ಜಿಲಿಂಗ್‌ಗೆ ಸಂಬಂಧಿಸಿದಂತೆ ಪಶ್ಚಿಮಬಂಗಾಳದ ಎಡರಂಗವೂ ಇದೇ ಬೇಡಿಕೆಯನ್ನು ಮುಂದೊಡ್ಡಿದೆ. ರಾಜೀವ್‌ಗಾಂಧಿ ಸರಕಾರ ಇದನ್ನು ಇನ್ನೂ ಒಪ್ಪಿಕೊಂಡಿಲ್ಲ. ಮಧ್ಯ ಪ್ರದೇಶ ರಾಜ್ಯವನ್ನೇ ತೆಗೆದುಕೊಳ್ಳಿ. ಅಲ್ಲಿನ ಒಂದು ಕೋಟಿ ಇಪ್ಪತ್ತು ಲಕ್ಷ ಬುಡಕಟ್ಟು ಜನರು ಜೀತದಾಳುಗಳಂತೆ ಬದುಕಿದ್ದಾರೆ. ಅವರಿಗೆ ತಮ್ಮ ಮೇಲಿನ ಹಕ್ಕೂ ನಿರಾಕರಿಸಲ್ಪಟ್ಟಿದೆ. ತ್ರಿಪುರಾದಲ್ಲಿ ನಾವು ಬುಡಕಟ್ಟು ಜನರ ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಗತಿಯ ಕಡೆಗೆ ಸಾಕಷ್ಟು ಗಮನ ಹರಿಸಿದ್ದೇವೆ. ಒಂದು ಸಾವಿರಕ್ಕೂ ಹೆಚ್ಚಿನ ಶಾಲೆಗಳಲ್ಲಿ ಬುಡಕಟ್ಟು ಜನರ ಭಾಷೆಯಾದ 'ಕೋಕ್ ಬರಾಕ್' ನಲ್ಲೇ ಶಿಕ್ಷಣ ನೀಡುವ ಕೆಲಸವನ್ನು ಪ್ರಾರಂಭಿಸಲಾಗಿದೆ. ಕೇಂದ್ರ ಸರ್ಕಾರ ನಮಗೆ ಇನ್ನೂ ಹೆಚ್ಚಿನ ಹಣ ಕೊಟ್ಟರೆ ಸ್ವಾಯುತ್ತ ಜಿಲ್ಲಾ ಕೌನ್ಸಿಲುಗಳನ್ನು ನಾವು ಇನ್ನೂ ಅಭಿವೃದ್ಧಿ ಪಡಿಸಲು ಸಾಧ್ಯ.

ಎರಡನೇಯದಾಗಿ, ನಾವು ಜನತೆಗೆ ಅವರ ಪ್ರಜಾಪ್ರಭುತ್ವ ಹಕ್ಕುಗಳನ್ನು ನೀಡಿದ್ದೇವೆ. ಅವಶ್ಯಕ ಸೇವಾ ಕಾಯ್ದೆ ESMA ದಂತಹ ದಮನಕಾರಿ ಕಾನೂನುಗಳನ್ನು ನಾವು ಇಲ್ಲಿ ಬಳಸುವುದೇ ಇಲ್ಲ. ಈ ದೃಷ್ಟಿಯಲ್ಲಿ ಪ.ಬಂಗಾಳ ಮತ್ತು ತ್ರಿಪುರಾ-ಇವರೆಡೇ ಬೇರೆ ರಾಜ್ಯಗಳಿಗಿಂತ ಹೊರತಾಗಿವೆ.

ಮೂರನೇಯದಾಗಿ ನಾವು ಆಡಳಿತೆಯನ್ನು ಸಂಪೂರ್ಣವಾಗಿ ವಿಕೇಂದ್ರೀಕರಣಗೊಳಿಸಿದ್ದೇವೆ. ಎಡರಂಗ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಹಲವಾರು ವರ್ಷಗಳ ವರೆಗೆ ಪಂಚಾಯತ್ ಚುನಾವಣೆಗಳು ನಡೆದೇ ಇರಲಿಲ್ಲ.

ಪಂಚಾಯತ್‌ಗಳಿಗಾಗಿ ಮೀಸಲಾಗಿದ್ದ ಹಣವನ್ನು ಭ್ರಷ್ಟ ಅಧಿಕಾರಿಗಳೂ ಮಧ್ಯವರ್ತಿಗಳೂ ನುಂಗಿ ಹಾಕುತ್ತಿದ್ದರು. ಈಗ ಪಂಚಾಯತ್‌ಗಳನ್ನು ಗುಪ್ತ ಮತದಾನದ ಮೂಲಕ ಆರಿಸಲಾಗುತ್ತಿದೆ. ಪಂಚಾಯತ್‌ಗಳಿಗೆ ಲಕ್ಷಾಂತರ ರೂಪಾಯಿ ಹಣ ದೊರೆಯುತ್ತಿದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನೆಲ್ಲ ಪಂಚಾಯತ್‌ಗಳಿಗೇ ವಹಿಸಿಕೊಡಲಾಗಿದೆ. ರಾಜ್ಯ ಗ್ರಾಮೀಣ ಉದ್ಯೋಗ



ಕಾರ್ಯಕ್ರಮಗಳಂತಹ ಯೋಜನೆಗಳಲ್ಲಿ ಜಂಟಿಯಾಗಿ ಪಾಲುಗೊಳ್ಳುತ್ತಿವೆ.

ನಾಲ್ಕನೆಯದಾಗಿ, ಸುಮಾರು ಶೇ. 80ರಷ್ಟು ಬುಡಕಟ್ಟು ಜನ ಮತ್ತು ಶೇ. 60 ರಷ್ಟು ಪರಿಶಿಷ್ಟ ಜಾತಿಯ ಜನರನ್ನು ವಿವಿಧ ಸಹಕಾರಿ ಸಂಸ್ಥೆಗಳ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗಿದೆ. ಇದರ ಮೇಲೆ ಮಧ್ಯವರ್ತಿಗಳಿಗಿರುವ ಹಿಡಿತವನ್ನು ತಪ್ಪಿಸುವುದೇ ನಮ್ಮ ಉದ್ದೇಶ. ಸೆಣಬನ್ನು ಈಗ ಲಾಭದಾಯಕ ಬೆಲೆಗೆ ಮಾರಲಾಗುತ್ತಿದೆ. ಕಾಂಗ್ರೆಸ್ ಆಡಳಿತವಿದ್ದಾಗ ಜಂಪೋರಿ ಬೆಟ್ಟಗಳಲ್ಲಿ ನೂರು ಕಿತ್ತಳೆ ಹಣ್ಣನ್ನು ಕೇವಲ ಆರು ರೂಪಾಯಿಗಳಿಗೆ ಕೊಂಡುಕೊಳ್ಳಬಹುದಾಗಿತ್ತು. ಈಗ ನೂರು ಕಿತ್ತಳೇ ಹಣ್ಣುಗಳ ಬೆಲೆಯನ್ನು ರೂ. 35 ಎಂದು ನಿಗದಿ ಪಡಿಸಲಾಗಿದೆ. ಈ ಪ್ರದೇಶದ ಹತ್ತು ಜಾಮಿಯಾ ಕುಟುಂಬಗಳು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಬೆಲೆಯ ಕಿತ್ತಳೆ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದಾರೆ. ಇದೆಲ್ಲ ಎಷ್ಟು ಜನಕ್ಕೆ ಗೊತ್ತು? ಇನ್ನೊಂದು ವಿಷಯ ಸರ್ಕಾರ ಖಾಸಗೀ ಕಂಟ್ರಾಕ್ಟರುಗಳ ಮೇಲೆ ಅವಲಂಬಿಸಿಕೊಂಡಿಲ್ಲ. ಸರ್ಕಾರದ ವತಿಯಿಂದ ನಡೆಸಲ್ಪಡುತ್ತಿರುವ ವಿವಿಧ ಸಂಸ್ಥೆಗಳಲ್ಲಿ ನಿರುದ್ಯೋಗಿಗಳಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ಕೆಲಸ ನೀಡಲಾಗುತ್ತಿದೆ. ಈ ಕೆಲಸಕ್ಕೆ ಸೇರುವ ಬುಡಕಟ್ಟು ಜನಾಂಗದ ಯುವಕರು ಭದ್ರತಾ ಠೇವಣಿ ಇರಿಸಬೇಕಾಗಿಲ್ಲ. ಸಂಕ್ಷಿಪ್ತವಾಗಿ, ಈ ಸಹಕಾರಿ ಸಂಸ್ಥೆಗಳು ಜನತೆಯ ರಕ್ಷಣೆಗಾಗಿರುವ ಸಾಧನಗಳಾಗಿವೆ.

ಮಾರ್ಚ್ 8, 1987

ಪ.ಬಂಗಾಳ : ಎಡರಂಗಕ್ಕೆ ಪತ್ರಿಕೆಗಳಿಂದ ಪ್ರಶಂಸೆ


ಜಾತ್ಯಾತೀತ ನೀತಿಗೆ ಮತ್ತು ಕೋಮು ಗಲಭೆಯನ್ನು ತಪ್ಪಿಸಲು ಸಿ.ಪಿ.ಐ.(ಎಂ) ನೇತೃತ್ವದ ಎಡರಂಗ ಸರ್ಕಾರ ತೋರಿಸಿರುವ ಬದ್ಧತೆಗಾಗಿ ಪತ್ರಿಕೆಗಳು ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿವೆ. ಸೆಪ್ಟೆಂಬರ್ ಆದಿಭಾಗದಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ಕೋಮು ಗಲಭೆಗಳು ಸ್ಫೋಟಗೊಳ್ಳುವ ಸಾಧ್ಯತೆಯನ್ನರಿತ ಎಡರಂಗ ಸರ್ಕಾರ ಬಿಗಿ ಕ್ರಮಗಳನ್ನು ಅನುಸರಿಸಿ ಅತ್ಯಂತ ಸಮಯೋಚಿತವಾಗಿ ವರ್ತಿಸಿ ಆಗಬಹುದಾದ ಭಾರಿ ಪ್ರಮಾಣದ ಅನಾಹುತಗಳನ್ನು ತಪ್ಪಿಸಿತು.

ಎಡರಂಗ ಸರ್ಕಾರದ ಮೇಲೆ ಬಯ್ಗುಳದ ಮಳೆ ಸುರಿಸುವ ಅನೇಕ ಪತ್ರಿಕೆಗಳು ಕೂಡ ಈ ವಿಷಯದಲ್ಲಿ ಸರ್ಕಾರದ ಕ್ರಮವನ್ನು ಶ್ಲಾಘಿಸಿ ಬರೆದಿವೆ.

ಉರ್ದು ದಿನ ಪತ್ರಿಕೆ ಇಖ್ರಾ ಸೆ. 7 ರ ಸಂಚಿಕೆಯಲ್ಲಿ ಮುಖಪುಟದ ಪ್ರಮುಖ ಸುದ್ದಿಯನ್ನಾಗಿ ವಿಷಯವನ್ನು ಅಚ್ಚುಮಾಡಿತು. ಅದು ಸರ್ಕಾರದ ದಕ್ಷತೆಯನ್ನು, ಪೋಲೀಸ್ ಕಮಿಷನರ್ ಅವರನ್ನು ಪ್ರಶಂಸಿದೆ. ಮತ್ತೊಂದು ಉರ್ದು ದಿನ ಪತ್ರಿಕೆ 'ಅಖಬಾರೆ ಮಶ್ರಿಖ್' ಕೋಮು ಗಲಭೆಗೆ ಪ್ರಚೋದಿಸುವವರನ್ನು ನಿರ್ದಾಕ್ಷಿಣ್ಯವಾಗಿ ದಮನಮಾಡಲಾಗುವುದೆಂಬ ಮುಖ್ಯಮಂತ್ರಿಯವರ ಎಚ್ಚರಿಕೆಗೆ ತನ್ನ ಸಂತಸ ವ್ಯಕ್ತಪಡಿಸಿದೆ. 'ಆಜಾದ್ ಹಿಂದ್' ಎಂಬ ಮತ್ತೊಂದು ಉರ್ದು ದಿನಪತ್ರಿಕೆ ಮೊಹರಂ ಮೆರವಣಿಗೆಗೆ ಸೂಕ್ತ ಪೋಲೀಸ್ ರಕ್ಷಣೆ ನೀಡಿದ್ದರಿಂದಾಗಿಯೇ ನಡೆಯಬಹುದಾಗಿದ್ದ ಭಾರೀ ಕೋಮು ಗಲಭೆ ಸಂಭವಿಸಲಿಲ್ಲವೆಂದು ಬರೆದಿದೆ.

ಕಮ್ಯುನಿಸ್ಟ್ ವಿರೋಧಿ ಪ್ರಚಾರಕ್ಕೆ ಹೆಸರಾದ 'ಟೆಲಿಗ್ರಾಫ್' ಪತ್ರಿಕೆ ಎಡರಂಗ ಸರ್ಕಾರವನ್ನು, ಮುಖ್ಯಮಂತ್ರಿ ಜ್ಯೋತಿಬಸು ಅವರನ್ನು ಮುಕ್ತಕಂಠದಿಂದ ಪ್ರಶಂಸಿವೆ.

ಸ್ಟೇಟ್‌ಮನ್ ಪತ್ರಿಕೆಯಂತೂ ದೀರ್ಘವಾದ ಸಂಪಾದಕೀಯದ ಮೂಲಕ ಎಡರಂಗ ಸರ್ಕಾರದ ದಕ್ಷತೆಯನ್ನು ಹೊಗಳಿದೆ. ಸರ್ಕಾರದ ಜಾತ್ಯಾತೀತ ನೀತಿಯಿಂದಾಗಿಯೇ ಕಳೆದ ವರ್ಷ ಭಾರೀ ವಿವಾದ ಎಬ್ಬಿಸಿದ ರಾಮ ಜನ್ಮಭೂಮಿ ಪ್ರಶ್ನೆ ಕುರಿತಂತೆ ಉತ್ತರ ಪ್ರದೇಶ ಮತ್ತಿತರ ಅನೇಕ ರಾಜ್ಯಗಳಲ್ಲಿ ಗಲಭೆಗಳು ನಡೆದರೂ ಪ. ಬಂಗಾಳದಲ್ಲಿ ಕೋಮು ಸೌಹಾರ್ದತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಅಲ್ಲದೆ ಈಚೆಗೆ ಮೀರತ್ ಮತ್ತು ದೆಹಲಿಗಳಲ್ಲಿ ನಡೆದ ಗಲಭೆಗಳಿಗೆ ಪ. ಬಂಗಾಳದಲ್ಲಿ ಯಾವುದೇ ಪ್ರತಿಕ್ರಿಯೆ ಉಂಟಾಗಲಿಲ್ಲ ಎಂಬುದಾಗಿ ಅಭಿಪ್ರಾಪಟ್ಟಿದೆ.




ಅಕ್ಟೋಬರ್ 18, 1987

ಪ. ಬಂಗಾಳದಲ್ಲಿ ಸಿ.ಪಿ.ಐ(ಎಂ) ಅಧಿಕಾರ ಸ್ಥಾನದಲ್ಲಿವವರಿಗೂ 750 ರೂ. ಮಾತ್ರ

ನಮ್ಮ ಎಂ.ಎಲ್.ಎಗಳು, ಎಂ.ಪಿ.ಗಳು, ಮಂತ್ರಿಗಳು ಸರಕಾರದಿಂದ ಪಡೆಯುವ ವೇತನದಲ್ಲಿ ಬಹುಪಾಲು ಪಕ್ಷಕ್ಕೆ ಹೋಗುತ್ತಿದೆ ಎಂಬುದು ಪ್ರಸಿದ್ಧ ಸಂಗತಿ. ಉದಾಹರಣೆಗೆ ಸಂಸತ್ ಸದಸ್ಯರು ಪಡೆಯುವ 5,500 ರೂ. ಗಳ 4,750 ರೂ. ಪಕ್ಷದಲ್ಲಿ ಲೆವಿ ಎಂದು ಜಮಾಆಗುತ್ತದೆ. ಇದೇ ರೀತಿ ಮಂತ್ರಿಗಳ ವಿಷಯದಲ್ಲೂ ಅಂದರೆ ಅಧಿಕಾರ ಸ್ಥಾನದಲ್ಲಿರುವ ಪಕ್ಷದ ಯಾವ ಸದಸ್ಯರಿಗೂ ವಿಶೇಷ ಸೌಲಭ್ಯಗಳಿರುವುದಿಲ್ಲ. ಅವರ ಕನಿಷ್ಠ ಅವಶ್ಯಕತೆಗಳ ಪೂರೈಕೆಯಾಗುತ್ತದಷ್ಟೇ. ಅವರು ಪಕ್ಷದ ಪ್ರತಿನಿಧಿಗಳಾಗಿ ಸರಕಾರೀ ಜವಾಬ್ದಾರಿ ನಿರ್ವಹಿಸುತ್ತಾರೆ. ಜನತೆಯ ಪ್ರತಿನಿಧಿಗಳ, ಸರಕಾರೀ ಅಧಿಕಾರಸ್ಥರ ಆದಾಯ ಚಟುವಟಿಕೆಗಳ ಮೇಲೆ ಇಂತಹ ಹಿಡಿತ ಕೇವಲ ನಮ್ಮ ಪಕ್ಷದಲ್ಲಿ ಮಾತ್ರವೇ ಇದೆ. ಎನ್ನುತ್ತಾರೆ ಸಿ.ಪಿ.ಐ.(ಎಂ) ಪೋಲಿಟ್ ಬ್ಯೂರೋ ಸದಸ್ಯ ಕಾಂ. ಶೈಲೇಸ್ ದಾಸ್ ಗುಪ್ತಾ.

ನವಂಬರ್ 22, 1992

ಅರಸು ಎಡರಂಗಕ್ಕಿಂತ ಪ್ರಗತಿಪರರೇ?



ಇ.ಎಂ.ಎಸ್ ಪ್ರಶ್ನೋತ್ತರ

ಪ್ರಶ್ನೆ : ಕರ್ನಾಟಕದಲ್ಲಿ ದೇವರಾಜ್ ಅರಸು ಮುಖ್ಯಮಂತ್ರಿಯಾಗಿದ್ದಾಗಿ, ಜಮೀನನ್ನು ಗೇಣಿಗೆ ಬಿಡುವುದನ್ನು ಕಾನೂನಿನ ಪ್ರಕಾರ ನಿರ್ಬಂಧಿಸಲಾಯಿತು. ಈಗ ಗೇಣಿ ಪದ್ಧತಿ ಕಾನೂನು ಭಾಹಿರವಾಗಿದೆ. ಆದರೆ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಇದ್ದಾಗ್ಯೂ, ಗೇಣಿ ಪದ್ಧತಿ ಮುಂದುವರೆದಿದೆ. ಗೇಣಿದಾರಭೂಮಾಲಿಕನಿಗೆ ಗೇಣಿ ಕೊಡಬೇಕಾಗಿದೆ. ಕೆಲವರು ಎಡರಂಗ ಟೀಕಿಸುವುದಕ್ಕೆ ಈ ವಾದವನ್ನು ಮುಂದೊಡ್ಡುತ್ತಾರೆ. ಈ ವಿಷಯದಲ್ಲಿ "ಪಶ್ಚಿಮ ಬಂಗಾಳದ ಎಡರಂಗ ಸರ್ಕಾರಕಿಂತ ಕರ್ನಾಟಕದ ಕಾಂಗ್ರೆಸ್ ಸರಕಾರವೇ ಹೆಚ್ಚು ಪ್ರಗತಿಪರ" ಎಂಬುದು ಅದರ ಅಂಬೋಣ. ಇದರ ಬಗ್ಗೆ ದಯವಿಟ್ಟು ಸ್ಪಷ್ಟೀಕರಿಸಿ.

– ಕೊಡಗಿನ ಒಬ್ಬ ಸಂಗಾತಿ

ಈ ಪ್ರಶ್ನೆಯಲ್ಲಿ ಭೂಸಂಬಂಧಗಳು ಬರಿಯ ಕಾನೂನಿಗೆ ಸಂಬಂಧಪಟ್ಟವೇನೋ ಎಂಬಂತೆ, ಇಡೀ ಸಮಸ್ಯೆಯನ್ನು ಕಾನೂನಿನ ಚೌಕಟ್ಟಿನಿಂದ ಮಾತ್ರ ನೋಡಲಾಗಿದೆ. ಆದರೆ ವಾಸ್ತವವಾಗಿ ಭೂಸಂಬಂಧಗಳು ಮಾತ್ರವಲ್ಲ, ಎಲ್ಲಾ ರೀತಿಯ ಸಾಮಾಜಿಕ ಸಂಬಂಧಗಳಿಗೆ ಸಂಬಂಧಪಟ್ಟ ಕಾನೂನುಗಳೂ ವಿವಿಧ ವರ್ಗಗಳ ನಡುವೆ ಇರುವ ಪ್ರಸಕ್ತ ಸಂಬಂಧಗಳನ್ನು ಮಾತ್ರ ಸಂಕೇತಿಸುತ್ತವೆ. ಭೂಸುಧಾರಣಾ ಕಾನೂನು ಮತ್ತು ಇತರ ಸಾಮಾಜಿಕ ಕಾನೂನುಗಳು ಸಾಮಾಜಿಕ ಬದಲಾವಣೆ ತರಲು ಪ್ರಮುಖ ಸಾಧನಗಳು ಎಂಬುದು ನಿಜ, ಆದರೆ ಈ ಕಾನೂನುಗಳು ಜಾರಿಗೊಳಿಸಬೇಕಾದರೆ ಸಾಮಾಜಿಕ ಕಾರ್ಯಾಚರಣೆ ಅಗತ್ಯ ಎಂಬುದು ಅಷ್ಟೇ ನಿಜ.

ಗೇಣಿ ಪದ್ಧತಿಯನ್ನು ಕಾನೂನಿನಿಂದ "ರದ್ದು" ಮಾಡಿದರೂ, ಮಾಜಿ ಗೇಣಿದಾರರು (ಈಗ ಕಾನೂನುಬದ್ಧವಾಗಿ ಭೂಮಿಯ ಒಡೆತನ ಪಡೆದವರೂ) ಆ ಭೂಮಿಯನ್ನು ಲಾಭದಾಯಕವಾಗಿ ಕೃಷಿ ಮಾಡುವ ಪರಿಸ್ಥಿತಿಯಲ್ಲಿದಿದ್ದರೆ ಭೂಮಿಯನ್ನು ಒತ್ತೆ ಇಡಬೇಕಾಗಿ ಬರಬಹುದು. ಕೊನೆಗೆ ಅದೇ ಭೂಮಿಯನ್ನು ಮಾರಬೇಕಾದ ಪರಿಸ್ಥಿತಿಯೂ ಬರಬಹುದು, ಅದಕ್ಕಾಗಿಯೇ ಸಮಾಜ ಸುಧಾರಕರು, ಭೂ ಸುಧಾರಣಾ ಕಾನೂನುಗಳ ಜತೆ ಸುಲಭ ಸಾಲವನ್ನು ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಕೃಷಿ ಉತ್ಪಾದನೆಗೆ ಬೇಕಾದ ಸಾಮಗ್ರಿಗಳನ್ನು ಸುಲಭ ಬೆಲೆಗಳಲ್ಲಿ ಒದಗಿಸುವುದು ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯವೆನ್ನುತ್ತಾರೆ.

ಭೂಮಾಲಿಕ-ಗೇಣಿದಾರರ ಸಂಬಂಧಗಳು, ರೈತರಿಗೆ ಮತ್ತಿತರ ಬಡವರಿಗೆ ಸುಲಭ ಸಾಲ, ಕೃಷಿ ಅಗತ್ಯ ಸಾಮಗ್ರಿಗಳಿಗೆ ಸುಲಭ ಬೆಲೆ, ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳು, ಸಾಲದಿಂದ ವಿಮುಕ್ತಿ- ಮುಂತಾದ ಸಮಸ್ಯೆಗಳಲ್ಲಿ ಕಾಂಗ್ರೆಸ್ ಸರ್ಕಾರಗಳ ವರ್ಗ ನೀತಿಗಳು, ಗೇಣಿದಾರರನ್ನು ಭೂಮಾಲಿಕನ ನೇರ ಶೋಷಣೆಯಿಂದ ವಿಮುಕ್ತಿಗೊಳಿಸಿದರೂ, ಅವರು ತಮ್ಮ ಕಸುಬು ಮುಂದುವರಿಸಲು ಅನುಕೂಲಕರವಾಗಿ ಇಲ್ಲ. ಇದು ಕಾಂಗ್ರೆಸ್‌ನ ವರ್ಗ ನೀತಿಗಳ ಬಗ್ಗೆ ನಮ್ಮ ಪ್ರಮುಖ ಟೀಕೆ. ರೈತರು ಮತ್ತು ಕೃಷಿಕೂಲಿಕಾರರನ್ನು ವರ್ಗದ ಆಧಾರದ ಮೇಲೆ ಭೂಮಾಲಿಕನ ಮತ್ತು ಆಳುವ ಪಕ್ಷದ ವರ್ಗ ನೀತಿಗಳನ್ನು ಎದುರಿಸಲು ಸಾಧ್ಯ.

ಹಳ್ಳಿಯ ಬಡವರನ್ನು ಸಂಘಟಿಸುವಲ್ಲಿ, ಭೂಲಿ ಮಾಲಿಕರ ಶೋಷಣೆಯನ್ನು ಕೊನೆಗಾಣಿಸುವುದು ಪ್ರಪ್ರಥಮ ಕೆಲಸವೆಂಬುದೇನೋ ನಿಜ, ಆದ್ದರಿಂದಲೇ 50 ವರ್ಷದ ಹಿಂದೆ ಅಖಿಲ ಭಾರತ ಕಿಸಾನ್ ಸಭಾ ರಚನೆಯಾದಾಗ ಪಾಳೆಯಗಾರಿ ಜಮೀನುದಾರಿ ಪದ್ಧತಿಯನ್ನು ರದ್ದುಗೊಳಿಸುವುದು ಅದರ ಮುಖ್ಯ ಕಾರ್ಯಕ್ರಮವಾಗಿತ್ತು. ಈ ಮುಖ್ಯ ಕಾರ್ಯಕ್ರಮದ ಜತೆಗೆ ಹಳ್ಳಿಯ ಸಾಲ, ಬೆಲೆಗಳು, ಕೃಷಿ ಸಾಮಗ್ರಿಗಳ ಬೆಲೆಗಳು ಇತ್ಯಾದಿಗಳ ಬಗೆಗೂ ಪೂರಕ ಬೇಡಿಕೆಗಳನ್ನಿಟ್ಟಿತ್ತು.

ಕಿಸಾನ್ ಸಭಾಕ್ಕೆ ಪಾಳೆಗಾರಿ ಜಮೀನುದಾರಿ ಪದ್ಧತಿಯ ವಿರುದ್ಧ ಹೋರಾಟದಲ್ಲಿ ಅನೇಕ ವೀರ ಹೋರಾಟಗಳ ಹೆಮ್ಮೆಯ ಪರಂಪರೆ ಇದೆ, ಸ್ವತಂತ್ರ ಭಾರತದಲ್ಲಿ ಭೂ ಸುಧಾರಣೆಗೆ ಹಲವು ಕಾನೂನುಗಳನ್ನು ರಚಿಸಲು ಕಾಂಗ್ರೆಸ್ ಆಡಳಿತ ತೊಡಗಿದ್ದಕ್ಕೆ ಮುಖ್ಯ ಕಾರಣ ಈ ಹೋರಾಟಗಳೇ. ಆದರೆ ಕಿಸಾನ್ ಸಭಾದ ಚಟುವಟಿಕೆ ಇದಕ್ಕಷ್ಟೇ ಸೀಮಿತವಾಗಿರಲಿಲ್ಲ, ಸಹಕಾರಿ ಸಂಘಗಳು- ಪಂಚಾಯತ್‌ಗಳು ಮುಂತಾದ ಸಂಸ್ಥೆಗಳನ್ನು ತಕ್ಕ ಪ್ರಜಾಸತ್ತಾತ್ಮಕ ಬಳಕೆಗೆ ತಂದು ದುಡಿಯುವ ಜನರ ಸೇವೆ ಮಾಡುವುದಕ್ಕೆ ಅಖಿಲ ಭಾರತ ಕಿಸಾನ್ ಸಭಾ ಹೆಣಗಿದೆ. ಕಿಸಾನ್ ಸಭಾದ ಇಂತಹ ಬಹು ರೂಪಿ ಚಟುವಟಿಕೆಗಳಿಂದಾಗೀಯೇ, ಪಶ್ಚಿಮಬಂಗಾಳ ಮತ್ತು ಕೇರಳದ ಎಡರಂಗ ಸರ್ಕಾರಗಳು ಪ್ರಗತಿ ಪರ ಭೂ ಸುಧಾರಣಾ ಕಾನೂನುಗಳನ್ನು ಜಾರಿಗೆ ತರಲು ಸಾಧ್ಯವಾಗಿದೆ. ಈ ಕಾನೂನುಗಳ ಮೂಲಕ ರೈತರಿಗೆ ಸಿಕ್ಕಿದ (ಒಕ್ಕಲೆಬ್ಬಿಸುವುದರಿಂದ ಪರಿಹಾರ, ಗೇಣಿಯ ದರದಲ್ಲಿ ಕಡಿತ, ಹೆಚ್ಚುವರಿ ಜಮೀನುಗಳ ವಿತರಣೆ ಮುಂತಾದ) ತತ್‌ಕ್ಷಣದ ಪರಿಹಾರಗಳು ರೈತರಲ್ಲಿ ಆತ್ಮವಿಶ್ವಾಸ ತಂದವು, ಇನ್ನೂ ಹೆಚ್ಚಿನ ಸಾಮರ್ಥ್ಯದ ಸಂಘಟನೆ ಕಟ್ಟುವುದರಿಂದ ಮತ್ತು ಹೋರಾಟಗಳಿಂದ ತಮ್ಮ ಜೀವನ ಮಟ್ಟ ಸುಧಾರಿಸಲು ಸಾಧ್ಯ ಎಂಬ ಭಾವನೆ ರೈತರಲ್ಲಿ ಮೂಡಿತು.

ಇದಕ್ಕೆ ಸಮಾನಾಂತರವಾಗಿ.... ಕೈಗಾರಿಕಾ ಕಾರ್ಮಿಕರು, ಮಧ್ಯಮವರ್ಗದ ಉದ್ಯೋಗಿಗಳು, ಕಸುಬುದಾರರು, ಸ್ವಉದ್ಯೋಗಿ ಉತ್ಪಾದಕರು- ಮುಂತಾದ ದುಡಿಯುವ ಜನರ ಸಂಘಟನೆ, ಹೋರಾಟಗಳು ಇವೆ. ಪ್ರತಿಯೊಂದು ದುಡಿಯುವ ಜನ ವಿಭಾಗ ತನ್ನದೇ ಆದ ಬೇಡಿಕೆಗಳಿಗೆ ಹೋರಾಡುವುದು ಮಾತ್ರವಲ್ಲದೇ ಉಳಿದವರ ಜತೆ ಸಹಕರಿಸುತ್ತದೆ. ಈ ಎಲ್ಲಾ ಜನವಿಭಾಗಗಳು ಹೋರಾಟಗಳಿಂದ ಕೆಲವು ತತ್‌ಕ್ಷಣದ ಪರಿಹಾರ ಗಳಿಸುತ್ತವೆ. ಆದರೆ ಹೋರಾಟಗಳು ಅವರ ಪ್ರಜ್ಞೆ ಮತ್ತು ಸಂಘಟನೆಯನ್ನು ಬಲಪಡಿಸುತ್ತದೆ.

ಬಂಡವಾಳಶಾಹಿ ಸಮಾಜದಲ್ಲಿ, ಬೆಳೆಯುತ್ತಿರುವ ವರ್ಗ ಹೋರಾಟಗಳ ಬಗ್ಗೆ 'ಕಮ್ಯುನಿಸ್ಟ್ ಮೆನಿಫೆಸ್ಟೋ'ದಲ್ಲಿ ಮಾರ್ಕ್ಸ್ ಮತ್ತು ಎಂಗಲ್ಸ್ ಹೀಗೆನ್ನುತ್ತಾರೆ

"ಆಗೊಮ್ಮೆ ಈಗೊಮ್ಮೆ ಕಾರ್ಮಿಕರು ಗೆಲ್ಲಬಹುದು. ಆದರೆ ಆ ಗೆಲುವು ತಾತ್ಕಾಲಿಕ. ಅವರ ಹೋರಾಟಗಳ ನಿಜವಾದ ಫಲ, ತತ್‌ಕ್ಷಣದ ಸಮಸ್ಯೆಗಳ ಪರಿಹಾರವಲ್ಲ, ನಿರುತರ ಬೆಳೆಯುತ್ತಿರುವ ಕಾರ್ಮಿಕರ ಸಂಘಟನೆ."

ಭಾರತೀಯ ರೈತರು ಒಂದು ವರ್ಗವಾಗಿ ಭಾರತದ ದುಡಿಯುವ ವರ್ಗದ ಭಾಗವಾಗಿ, ಜನತಾ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ದೊಡ್ಡ ಶಕ್ತಿಯಾಗಲು ಸಿದ್ಧತೆ ನಡೆಸಿದ್ದಾರೆ ಎಂಬುದು, ಅಖಿಲ ಭಾರತ ಕಿಸಾನ್ ಸಭಾದ 52 ವರ್ಷಗಳ ಕೆಲಸದ ಮುಖ್ಯ ಫಲ. ಪಶ್ಚಿಮಬಂಗಾಳ ಮತ್ತು ಕೇರಳಗಳಲ್ಲಿ ಎಡರಂಗ ಸರ್ಕಾರಗಳು ಕಾನೂನುಗಳನ್ನು ತಂದಿರುವುದು ಇದಕ್ಕೆ ಪೂರಕ ಅಂಶ.

ಏಪ್ರಿಲ್ 17, 1988

ಮಾರ್ಕ್ಸ್

ಮಲ್ಲಿಗೆ ಅರಳದ ದುಂಬಿ ಹಾರದ
ಈ ನಾಡಿನಲ್ಲಿ
ಢಮಾರ್.......ಢಮಾರ್.......ಶಬ್ದಗಳು
ಆಕಾಶ ನೀರವದ ನಡುವೆ
ತಾಯಿ ಬೇರು ಬಿಡುತ್ತವೆ.

ಚಿಕ್ಕಿಗಳು ಕಣ್ಣ ಕಳೆದುಕೊಂಡು
ಸೆರಗಿನ ಮರೆಯಿಂದ ಮುಸ ಮುಸ ಅಂತ ಅತ್ತು
ಉಕ್ಕಿದ್ದ ತೆರೆಗಳ ಎದೆಗೂಡಲಿಟ್ಟು ಕೊಳ್ಳುತ್ತವೆ.
ಮುರಳುಗಾಡ ನೆಕ್ಕುವ ಗುಡಿಸಿಲುಗಳು
ಉರಿವ ಸೂರ್ಯನೆದುರು ನಾಲಿಗೆಯ ನರಗಳಿಗೆ
ಮಂಜುಗಡ್ಡೆಯ ಸಂಬಂಧ ಬೆಳೆಸಿಕೊಳ್ಳುವಂತೆ
ತವಕಿಸುತ್ತವೆ.

ಕತ್ತಲಡರಿದ ಗಲ್ಲಿಗಳ ಕಲ್ಲು ಸಂದಿಗಳಲ್ಲಿ
ಶತಮಾನಗಳ ಸಂಕೇತ ಧ್ವನಿ
ಬದುಕಿನ ಪದರುಗಳ ಬಿಚ್ಚಿಕೊಳ್ಳುತ್ತಾ
ಎದೆಸೆತ್ತೆ ಹುಲ್ಲು ಗರಿಕೆಗಳ ಸಾಕ್ಷಿಯಾಗಿ ದಿಟ್ಟು
ಶಾಂತ ಸಾಗರದ ಧಾಟಿಗೆ ತಲೆದೂಗುತ್ತವೆ.

ಆಗ ಹುಟ್ಟುವ ಗಡ್ಡದಾರಿ ಮಾರ್ಕ್ಸ್‌ನ
ಮುಖದ ತುಂಬಾ ಬಲೆಯೆಣೆದ ಅಂಬಾಳಿ ಬಳ್ಳಿಗಳು
ಕರುಳಿಲ್ಲದವರನ್ನುನವಿರಾಗಿ ಬಿಗಿದು
ಪ್ರೀತಿಗಾಗಿ ತೆತ್ತ ಬೆಲೆಯ ಕೇಳುತ್ತವೆ.

ಯಂತ್ರದ ಸುತ್ತಾ ಏಳುವ ಬದುಕಿಲ್ಲದ
ನೋವುಗಳ ಶಬ್ದಕ್ಕೆ ಬಿಸಿಯುಸಿರಿಕ್ಕಿಸಿದ ಇವ
ಶಾಂತಿ ಸಮಾನತೆಗಳ ಮೂಲೆ ಮೂಲೆಗೂ ತುಂಬಿ
ಬದುಕಿನ ಅರ್ಥಕೋಶಗಳ
ಎಲ್ಲರ ಮುಂದೆಯೂ ಇಡುತ್ತಾನೆ.

--ತಿಮ್ಮನಹಳ್ಳಿ ವೇಣುಗೋಪಾಲ್

ಮೇ 18, 1989

ಪರಿಸರ ಬಿಕ್ಕಟ್ಟು ಹಾಗೂ ಪರಿಸರ ಚಳುವಳಿಗಳು

ಈ ಜಗತ್ತು, ಈ ಭೂಮಿ ಈ ಮಾನವ ಉದಿಸಿದಂದಿನಿಂದ ನಮ್ಮ ಪರಿಸರ ಬದಲಾಗುತ್ತಲೆ ಇದೆ. ಈ ಪರಿಸರ ಬದಲಾವಣೆ 'ಪರಿಸರ ಬಿಕ್ಕಟ್ಟು' ಆಗಿದೆ ಈಗ. ಅದರ ಫಲವೇ "ಪರಿಸರ ಚಳುವಳಿಗಳು" ಇವರ ವಾದದಲ್ಲಿ ಕಾಳೆಷ್ಟು, ಜೊಳ್ಳೆಷ್ಟು? ಎಷ್ಟು ಜನಪರ ಎಷ್ಟು ಜನವಿರೋಧಿ? ವಿಂಗಡಿಸಲು ಯತ್ನಿಸಿದ್ದಾರೆ ಶರತ್ ಚಂದ್ರ.

ನಾಲ್ಕು - ಐದು ವರ್ಷಗಳ ಹಿಂದೆ "ಪರಿಸರ"ದ ಬಗ್ಗೆ ಯಾರಾದರೂ ಕನ್ನಡದಲ್ಲಿ ಬರೆಯಬಕಾದರೆ ಬಹಶಃ ಆ ಪದದ ಬಗ್ಗೆ ಸ್ವಲ್ಪ ವಿವರಣೆ ಕೊಡಬೇಕಾಗಿತ್ತು. ಆದರೆ ಇಂದು ನಮ್ಮ ಪತ್ರಿಕೆಗಳಲ್ಲಿ, ಸರ್ಕಾರಿ ಮತ್ತು ಇತರ ಪ್ರಚಾರ ಮಾಧ್ಯಮಗಳಲ್ಲಿ ದಿನೇ ದಿನ ಪರಿಸರ ಸಮಸ್ಯೆ ಸಂಬಂಧಿತ ಸುದ್ದಿ, ವರದಿ, ವಿಶ್ಲೇಷಣೆ ಸಾಕಷ್ಟು ಗದ್ದಲ ಎಬ್ಬಿಸುತ್ತಿವೆ. ಭೂಪಾಲ್ ಅನಿಲ ದುರಂತ, ಚೆರ್ನೋಬಿಲ್, ಯುರೋಪಿನ ಆಮ್ಲ-ಮಳೆ, ಕೈಗಾ ಅಣು ಸ್ಥಾವರದ ಪರ-ವಿರುದ್ಧ ಚರ್ಚೆ ಇವೆಲ್ಲ ನಮ್ಮ ಪತ್ರಿಕೆಗಳಲ್ಲಿ ಸಾರ್ವಜನಿಕ ವೇದಿಕೆಗಳಲ್ಲಿ ಜನಮಾನಸವನ್ನು ಕದಡುತ್ತಿವೆ. "ಪರಿಸರ ಬಿಕ್ಕಟ್ಟ"ನ ನಿರಾಶಾದಾಯಕ ಚಿತ್ರವನ್ನು ಇವು ಕೊಡುತ್ತಿವೆ. ಪರಿಸರ ಸಮಸ್ಯೆ ಇಷ್ಟು ಗಂಭೀರವಾಗಿದೆಯೇ? ಇದ್ದರೆ ಅದಕ್ಕೆ ಕಾರಣಗಳೇನು? ಪರಿಹಾರಗಳೇನು?

ಪರಿಸರ ಬಿಕ್ಕಟ್ಟು ಎಂದರೇನು?

ಮೊದಲನೆಯದಾಗಿ ಪರಿಸರ ಸಮಸ್ಯೆ ಮಟ್ಟದಲ್ಲಿ "ಬಿಕ್ಕಟ್ಟು" ಎನ್ನಬಹುದಾದ ಮಟ್ಟ ಮುಟ್ಟಿದೆಯೆಂಬುದು ನಿಜ. ಈ ಬಿಕ್ಕಟ್ಟಿನ ಕೆಲವು ಸೂಚನೆಗಳಿಂದರೆ- ಮಾನವ ಮತ್ತು ಇತರ ಜೀವ ಜಗತ್ತಿಗೆ ಮಾರಕವಾಗಬಹುದಾದ ದಿನೇ ದಿನೇ ಹೆಚ್ಚುತ್ತಿರುವ ವಾಯು, ನೀರು ಮಾಲಿನ್ಯ, ಪ್ರಾಕೃತಿಕ ಸಂಪನ್ಮೂಲಗಳು ಬರಿದಾಗುತ್ತಿರುವುದುಮತ್ತು ಪ್ರಕೃತಿಯ ಮೇಲೆ ಬದಲಿಸಲಾಗದ ದುಷ್ಪರಿಣಾಮಗಳು. ಕೈಗಾರಿಕಾ ಚಟುವಟಿಕೆ, …

ಯಲ್ಲಿ ತೇಲಾಡುವ ಅಪಾಯಕಾರಿ ರಾಸಾಯನಿಕಗಳ ಪ್ರಮಾಣ ಬಹಳಷ್ಟು ಹೆಚ್ಚಿದೆ. ಪರಮಾಣು, ರಾಸಾಯನಿಕ ಮತ್ತಿತರ ಮಾರಕಾಸ್ತ್ರಗಳ ಅಭಿವೃದ್ಧಿ, ಮತ್ತುಪರೀಕ್ಷೆ ತಮ್ಮ "ಕಾಣಿಕೆ"ಯನ್ನು ವಾತಾವರಣದ ಮಾಲಿನ್ಯಕ್ಕೆ ಸಲ್ಲಿಸುತ್ತಿವೆ. ಅಮೇರಿಕಾ ಒಂದು ದೇಶದಲ್ಲೇ ಸುಮಾರು 20 ಕೋಟಿ ಟನ್ ಕಲ್ಮಶಗಳು ಗಾಳಿಗೆ ಒಂದು ವರ್ಷದಲ್ಲಿ ಬಿಡುಗಡೆಯಾಗುತ್ತವೆ. ಹೆಚ್ಚುತ್ತಿರುವ ಜನಸಂಖ್ಯೆಯಿಂದ ಮತ್ತು ಕೈಗಾರಿಕಾ ಮತ್ತಿತರ ಉಪಯೋಗಗಳಿಂದ ನೀರಿನ ಮಾಲಿನ್ಯ ಸಹ ಹೆಚ್ಚುತ್ತಿದ್ದು ಸಾಕಷ್ಟು ಪ್ರಮಾಣದಲ್ಲಿ ಶುದ್ಧ ನೀರಿನ ಅಭಾವದ ಸಮಸ್ಯೆ ತೀವ್ರವಾಗುತ್ತಿದೆ. ನೀರಿನ ಅಭಾವದ ಸಮಸ್ಯೆ ತೀವ್ರವಾಗುತ್ತಿದೆ. ನೀರಿನ ಮಾಲಿನ್ಯ ಮೀನು ಮತ್ತಿತರೆ ಜೀವ ಜಗತ್ತಿನ ನಾಶಕ್ಕೂ ಕಾರಣವಾಗುತ್ತಿದೆ. ಹೆಚ್ಚಿನ ದೇಶಗಳಲ್ಲಿನ ವಸತಿ ಸಮಸ್ಯೆ, ಬಡತನ ಇತ್ಯಾದಿ ವಾಯು, ಜಲಮಾಲಿನ್ಯದ ಪರಿಣಾಮವನ್ನು ಇನ್ನಷ್ಟು ಹೆಚ್ಚಿಸಿದೆ. ಒಟ್ಟಾರೆ ಮಾನವ ಆರ್ಥಿಕ ಚಟುವಟಿಕೆಗಳಿಂದುಂಟಾಗುವ ಕಾರ್ಬನ್ ಡೈ ಆಕ್ಸೈಡ್‌ನ ಪ್ರಮಾಣ ವಾತಾವರಣದಲ್ಲಿ ಹೆಚ್ಚುತ್ತಿದೆ. ಕಾರ್ಬನ್ ಡೈಆಕ್ಸೈಡನ್ನು ಆಮ್ಲಜನಕವಾಗಿ ಪರಿವರ್ತನೆ ಮಾಡಲು ಜಗತ್ತಿನ ಒಟ್ಟಾರೆ ಸಸ್ಯ ಜಗತ್ತಿಗೆ ಇರುವ ಸಾಮರ್ಥ್ಯವನ್ನು ಮೀರುವ ಹಂತ ತಲುಪಿದೆ. ಈ ಸಾಮರ್ಥ್ಯವನ್ನು ಮೀರಿದರೆ ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ ಏರಿದಂತೆ ಭೂಮಿಯ ಉಷ್ಣತೆ ಹೆಚ್ಚಿ, ಭೀಕರ ಪರಿಣಾಮಗಳು ತಲೆದೋರುವ ಸಾಧ್ಯತೆ ಇದೆ. ಇದೇ ರೀತಿ ಭೂಮಿಯನ್ನು ಹಾನಿಕಾರಕ ವಿಕಿರಣಗಳಿಂದ ತಡೆಗಟ್ಟಿ ಜೀವಯೋಗ್ಯ

ವಾತಾವರಣವನ್ನು ಕಾಪಾಡುವಲ್ಲಿ ಮುಖ್ಯ ಪಾತ್ರವಹಿಸುವ ಓಝೋನ್ ಹೊದಿಕೆಯಲ್ಲಿ "ತೂತು"ಗಳಾಗುವ ಅಪಾಯ ಸಹ ದೂರವಿಲ್ಲ. ಕಲ್ಲಿದ್ದಲು, ಪೆಟ್ರೋಲು, ಮರಮಟ್ಟು ಮುಂತಾದ ಇಂಧನಗಳು ಕಬ್ಬಿಣ ಉಪಯುಕ್ತ ಪ್ರಮುಖ ಖನಿಜಗಳು ಮುಂತಾದ ಸಂಪನ್ಮೂಲಗಳು ಬರಿದಾಗುವ ಸೂಚನೆ ಕಾಣುತ್ತಿದೆ. ಅರಣ್ಯನಾಶದಿಂದಾಗಿ ಮಳೆ ವಾತಾವರಣದಲ್ಲಿ ಏರುಪೇರುಗಳು ಹೆಚ್ಚು ಕಡಿಮೆ ಶಾಶ್ವತ ವಾಗಬಹುದು. ವಿವಿಧ ಕಾರಣಗಳಿಂದ ಭೂ ಸಾರದ ನಾಶದಿಂದಾಗಿ ಮರುಭೂಮೀಕರಣ, ಕೃಷಿಯೋಗ್ಯ ಭೂಮಿಯ ಅಭಾವ ಸಹ ತೀವ್ರ ಸಮಸ್ಯೆಯಾಗಿದೆ.

ಪರಿಸರ ಬಿಕ್ಕಟ್ಟು ಏಕೆ?

ಇದು ಜಗತ್ತಿನ ಪರಿಸರ ಸಮಸ್ಯೆಯ ಒಟ್ಟಾರೆ ಚಿತ್ರಣವಾದರೂ- ಪ್ರದೇಶ, ರಾಜಕೀಯ-ಸಾಮಾಜಿಕ ವ್ಯವಸ್ಥೆ ಇತ್ಯಾದಿಗಳ ಮೇಲೆ ಹೊಂದಿಕೊಂಡು ಸಮಸ್ಯೆಯ ತೀವ್ರತೆ ಬೇರೆ ಬೇರೆ ಪ್ರಮಾಣದಲ್ಲಿದೆ. ಇದಕ್ಕೆ ಪರಿಹಾರ ಹುಡುಕಲು ಈ ಬಿಕ್ಕಟ್ಟಿಗೆ ಕಾರಣಗಳೇನು ಎಂದು ತಿಳಿಯಲು ಪ್ರಯತ್ನಿಸಬೇಕು.

ಜಗತ್ತಿನ ಹೆಚ್ಚುತ್ತಿರುವ ಜನ ಸಂಖ್ಯೆಯ ವಸತಿ, ಆಹಾರ ಮತ್ತಿತರ ಅಗತ್ಯಗಳ ಪೂರೈಕೆಗೆ ಬೇಕಾದ ಆರ್ಥಿಕ ಚಟುವಟಿಕೆ ಹೆಚ್ಚಿದೆ. ಇದರ ನೇರ ಪರಿಣಾಮ- ಪ್ರಕೃತಿಯಲ್ಲಿ ಆಗುತ್ತಿರುವ ತೀವ್ರತರ ಬದಲಾವಣೆ. ಈಗಿನ ಬಿಕ್ಕಟ್ಟಿಗೆ ಒಂದು ಪೂರಕ ಕಾರಣ'- ಈ ಬದಲಾವಣೆ ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಆಗುತ್ತಿರುವ ಬದಲಾವಣೆಯ ಮಟ್ಟಮೀರಿದೆ ಎಂಬುದು. ಉದಾಹರಣೆಗೆ ಜಗತ್ತಿನ ವಾತಾವರಣದ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ 10,000 ಕೋಟಿ ಟನ್ನುಗಳಾದರೆ ಕೈಗಾರಿಕಾ ಮತ್ತಿತರ ಇಂಧನಗಳ ಸುಡುವಿಕೆಯಿಂದ ಮಾತ್ರವೇ 1,000 ಕೋಟಿ ಟನ್ನುಗಳಷ್ಟು ಕಾರ್ಬನ್ ಡೈಆಕ್ಸೈಡ್ ಬಿಡುಗಡೆಯಾಗುತ್ತಿದೆ. ಈಗ ನಡೆಯುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ರಾಂತಿಯಿಂದಾಗಿ ಪ್ರಕೃತಿಯನ್ನು ನಮ್ಮ ಅಗತ್ಯಗಳಿಗೆ ದುಡಿಸಿಕೊಳ್ಳುವ, ಉಪಯೋಗಿಸುವ, ನಿಯಂತ್ರಿಸುವ ಮನುಕುಲದ ಶಕ್ತಿ ಅಪಾರವಾಗಿ ಹೆಚ್ಚಿದೆ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ತನ್ನಷ್ಟಕ್ಕೆ ಪರಿಸರ ಬಿಕ್ಕಟ್ಟಿಗೆ ಕಾರಣವಾಗಲಾರದು. ನಿಜವಾಗಿಯೂ ಹೇಳಬೇಕೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರಮಾಲಿನ್ಯ ತಡೆಗ

ಟ್ಟುವ ಕ್ರಮಗಳನ್ನು ಹುಡುಕುವುದರಲ್ಲೂ ಅಷ್ಟೇ ಯಶಸ್ವಿಯಾಗ ಬಲ್ಲವು. ನಿಜವಾದ ಕಾರಣ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಂಡವಾಳ ಶೇಖರಣೆ ಮತ್ತು ಲಾಭ ಹೆಚ್ಚಿಸುವ ಏಕಮಾತ್ರ ಉದ್ದೇಶಕ್ಕೆ ಪ್ರಕೃತಿಯನ್ನು ಎರ್ರಾಬಿರ್ರಿಯಾಗಿ ಲೂಟಿ ಮಾಡುವ ಧೋರಣೆಯಿಂದ. ಪ್ರಕೃತಿಯನ್ನು ಬೇಕಾದ್ದನ್ನು ಬೇಕಾದಷ್ಟು ಕೊಡುವ ಕಾಮಧೇನು ಎಂದು ಬಗೆದು ಅದನ್ನೇ ಬಂಡವಾಳ ಮಾಡಿಕೊಳ್ಳುವ, ದುಷ್ಪರಿಣಾಮಗಳನ್ನು ಲೆಕ್ಕಿಸದೆ ಅದನ್ನು ಹೀರುವ ಧೋರಣೆಯಿಂದ. ಜಗತ್ತಿನ ಮೂರನೇ ಒಂದು ಭಾಗದ ಸಾಮ್ರಾಜ್ಯಶಾಹಿ ಮತ್ತು ಅದರ ಕರಾಳ ಛಾಯೆಯಲ್ಲಿ ನರಳುತ್ತಿರುವ ಮೂರನೆಯ ಜಗತ್ತಿನಲ್ಲಿ ಈ ಧೋರಣೆ ಜಾರಿಯಲ್ಲಿದೆ. ಇದೇ ಪರಿಸರ ಬಿಕ್ಕಟ್ಟಿನ ಮೂಲ ಕಾರಣ. ಈ ಬಿಕ್ಕಟ್ಟು ಇತ್ತೀಚೆಗೆ ತೀವ್ರವಾಗುತ್ತಿದ್ದು ಪ್ರಕೃತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಪುನಃ ಬದಲಾಯಿಸಲು ಸಾಧ್ಯವಾಗದ ರೀತಿಯಲ್ಲಿ ಬದಲಾವಣೆ ಹೊಂದುತ್ತಿರುವುದರಿಂದ (ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆಯಿಂದ) ಈ ಪ್ರಮಾಣದಲ್ಲಿ ಪ್ರಕೃತಿಯನ್ನು ಬದಲಾಯಿಸುವಾಗ ದುಷ್ಪರಿಣಾಮಗಳಾಗದಂತೆ ನೋಡಿಕೊಳ್ಳುವ ಕ್ರಮ (ಇವೂ ಸಹ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯಿಂದ ಸಾಧ್ಯವಿದೆ) ಗಳನ್ನು ತೆಗೆದುಕೊಳ್ಳುವ ಸಾಮಾಜಿಕ ಜವಾಬ್ದಾರಿ ಸಾಮ್ರಾಜ್ಯಶಾಹಿಗೆ, ಅದರ ಉಪಕರಣಗಳಾದ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಇರದಿರುವುದು ಉಚ್ಚಕುಲದ ಭೋಗಕ್ಕಾಗಿ ಮತ್ತು ಯಾವುದೇ ದೂರದೃಷ್ಟಿಯ ಸಾಮಾಜಿಕ ಯೋಜನೆಯಿಲ್ಲದ, ಪ್ರಾಕೃತಿಕ ಸಂಪತ್ತಿನ ಅರಾಜಕ ಬಳಕೆ ಪರಿಸರ ಬಿಕ್ಕಟ್ಟಿಗೆ ಎಡೆಗೊಡುತ್ತದೆ.

ಆದ್ದರಿಂದ ನಿಜವಾಗಿಯೂ ಪರಿಸರ ಬಿಕ್ಕಟ್ಟು ವಿಜ್ಞಾನ, ತಂತ್ರಜ್ಞಾನದ ಕ್ರಾಂತಿಯ ಅವಧಿಯಲ್ಲಿ ಬಂಡವಾಳಶಾಹಿ ವ್ಯವಸ್ಥೆ ಎದುರಿಸುತ್ತಿರುವ ಬಿಕ್ಕಟ್ಟಿನ ಹೊಸ ರೂಪ. ಇದಕ್ಕೆ ಪ್ರತಿಯಾಗಿ ಸಮಾಜವಾದಿ ದೇಶದಲ್ಲಿ ಪರಿಸರ ಸಮಸ್ಯೆಯನ್ನು ಗಣನೆಗೆ ತೆಗೆದುಕೊಂಡು ಪ್ರಕೃತಿಯ ಸಂರಕ್ಷಣೆ, ಅದರ ಮೇಲೆ ಆರ್ಥಿಕ ಚಟುವಟಿಕೆಗಳಿಂದಾಗುವ ದುಷ್ಪರಿಣಾಮಗಳ ತಡೆ ಮತ್ತು ಸಂಪನ್ಮೂಲಗಳ ಜಾಗರೂಕ ಬಳಕೆ ಎಲ್ಲಾ ಸಮಾಜಿಕ ಪ್ರಗತಿ ಯೋಜನೆಗಳ ಭಾಗವಾಗಿರುವುದು, ಸಮಾಜವಾದಿ ವ್ಯವಸ್ಥೆಯ ಉತ್ಕೃಷ್ಟತೆಯನ್ನು ತೋರಿಸುತ್ತದೆ.

ಜನವರಿ 25, 19[illegible]



ಪ್ಯಾಲೆಸ್ಟೇನ್ ಈ ಹೆಸರು ನಿಮಗೆ ಭೂಪಟಗಳಲ್ಲಿ ಕಾಣಲಿಕ್ಕಿಲ್ಲ. ಆದರೆ ನೂರಾರು ವರ್ಷಗಳಿಂದ ಈ ಹೆಸರಿನ ನಾಡೊಂದು ಇದೆ. ಏಷ್ಯಾ ಖಂಡದ ಪೂರ್ವದ ಅಂಚಿನಲ್ಲಿರುವ ಪ್ಯಾಲೆಸ್ಟೇನಿನ ಅರಬ್ ಜನತೆಯ ಅದೃಷ್ಟವನ್ನು ಬೇರೆಯವರೇ ಇದುವರೆಗೆ ತಮಗೆ ಬೇಕಾದಂತೆ ನಿರ್ಧರಿಸಿಕೊಂಡು ಬಂದಿದ್ದಾರೆ. ತಮ್ಮ ಬದುಕನ್ನು ತಾವೇ ನಿರ್ಧರಿಸುವ ಹಕ್ಕು ಅವರಿಗೆ ಎಂದೋ ದಕ್ಕಬೇಕಿತ್ತು. ಏಕೆ ದಕ್ಕಲಿಲ್ಲ? ಇದು ಪ್ಯಾಲೆಸ್ಟೇನ್ ಪ್ರಶ್ನೆ.

ಸೌದಿ ಅರೇಬಿಯಾ, ಯೆಮೆನ್, ಇರಾನ್, ಇರಾಕ್, ತುರ್ಕಿ, ಜೋರ್ಡಾನ್, ಸಿರಿಯಾ ಲೆಬನಾನ್, ಇಸ್ರೇಲ್ ಇತ್ತ ಈಜಿಪ್ಟ್ ಇದು ಮಧ್ಯ ಪ್ರಾಚ್ಯ. ವಿಶ್ವದ ಶಾಂತಿಗೆ ಬೆದರಿಕೆಯೊಡ್ಡಿರುವ ಘರ್ಷಣೆಗಳ ಇನ್ನೊಂದು ಪ್ರದೇಶ. ಪ್ಯಾಲೆಸ್ಟೇನ್ ಪ್ರಶ್ನೆ ಈ ಸಮಸ್ಯೆಯ ಒಂದು ಅಭಿನ್ನ ಅಂಗ. ಇದರ ಪೂರ್ವಾಪರಗಳೇನು?

ಬದುಕಿನ ಸ್ವಯಂ ನಿರ್ಧಾರದ ಹಕ್ಕಿಗಾಗಿ ಪ್ಯಾಲೆಸ್ಟನ್ ಹೋರಾಟ

ಪ್ಯಾಲೆಸ್ಟೇನ್ ಪ್ರಶ್ನೆ ಈ ಶತಮಾನದ ಆರಂಭದಿಂದಲೂ ಪ್ರಾಕೃತಿಕ ಸಂಪನ್ಮೂಲ ಭರಿತ ಮಧ್ಯಪ್ರಾಚ್ಯದಲ್ಲಿ ತಮ್ಮ ಪ್ರಾಬಲ್ಯ ಕಾದುಕೊಳ್ಳುವ ಸಾಮ್ರಾಜ್ಯಶಾಹೀ ನೀತಿಗಳೊಂದಿಗೆ ಹಾಸುಹೊಕ್ಕಾಗಿರುವ ಪ್ರಶ್ನೆ. ಪ್ಯಾಲೆಸ್ಟೇನ್ ಆಗ ಬಹುಪಾಲು ಅರಬ್ಬರು ಅಲ್ಪಸಂಖ್ಯೆಯ ಯೆಹೂದಿಯರು ಇದ್ದ ದೇಶ. ಒಟೊಮಾನ್ ಸಾಮ್ರಾಜ್ಯದ ಅಂಗವಾಗಿತ್ತು. ಇಲ್ಲಿನ ಯೆಹೂದಿಯರಲ್ಲಿ ಬಹುಪಾಲು ಸ್ಪೈಯಿನ್ ಮತ್ತಿತರ ಮಧ್ಯಯುರೋಪಿಯನ್ ದೇಶಗಳಿಂದ 15 ನೇ ಶತಮಾನದಲ್ಲಿ ಅಲ್ಲಿ ಕ್ರಿಶ್ಚಿಯನ್ ಉಗ್ರಗಾಮಿಗಳಿಂದ ತಪ್ಪಿಸಿಕೊಳ್ಳಲು ಓಡಿ ಬಂದಿದ್ದವರು.

ಸಾಮ್ರಾಜ್ಯಶಾಹೀ ಬೆಳವಣಿಗೆಯ ಮೊದಲ ಹಂತದಲ್ಲಿ ವಸಾಹತು ಶಾಹಿಗಳು ವಿಶ್ವವನ್ನು ತಮ್ಮತಮ್ಮಲ್ಲಿ ಹಂಚಿಕೊಳ್ಳುವ ಕಿತ್ತಾಟ ನಡೆಸಿದ್ದಾಗ ಈ ದೇಶವೂ ಅವರ ಹದ್ದಿನ ಕಣ್ಣಿಗೆ ಬಿದ್ದಿತ್ತು. ಮುಖ್ಯವಾಗಿ ಸಾಮ್ರಾಜ್ಯಶಾಹಿಗಳ ಮೊದಲ ಮಹಾ ಯುದ್ಧದಲ್ಲಿ ವಿಜಯಿಗಳಾಗುತ್ತಿದ್ದ ಬ್ರಿಟನ್ ಮತ್ತು ಫ್ರಾನ್ಸ್‌ನ ಕಣ್ಣಿಗೆ. ಅವರಲ್ಲಿಯೇ ತೀವ್ರ ಚರ್ಚೆಯ ನಂತರ ಗುಪ್ತ ಒಪ್ಪಂದವೊಂದು ನಡೆಯಿತು. ಇದರ ಪ್ರಕಾರ ಪ್ಯಾಲೆಸ್ಟೇನ್ ಸಾಮ್ರಾಜ್ಯಶಾಹೀ ದೇಶಗಳ ಅಂತರಾಷ್ಟ್ರೀಯ ಹತೋಟಿಗೆ ಬಂದಿತು. ಬ್ರಿಟಿಷ್ ಸೇನೆಗಳು ಅಲ್ಲೆ ಉಳಿದವು.

ಬ್ರಿಟಿಷ್ ವಸಾಹತುಗಳ ನೆರವಿನಿಂದ ಝಿಯೋನಿಸ್ಟರು ಮಧ್ಯ ಯುರೋಫ್, ಪೂರ್ವ ಯುರೋಪಿನಲ್ಲಿದ್ದ ಯೆಹೂದಿಯರನ್ನು ತಂದು ಪ್ಯಾಲೆಸ್ಟ್‌ನಲ್ಲಿ ನೆಲಸಲಾರಂಭಿಸಿದರು. ಇದಕ್ಕೆ ಪ್ರತಿಯಾಗಿ ಹೀಗೆ ನೆಲೆಗೊಂ ಯೆಹೂದೀ ವಲಸೆಗಾರರ ಬೆಂಬಲದಿಂದ ಬ್ರಿಟಿಷ್ ವಸಾಹತುಗಳು ತಮ್ಮ ಫ್ರೆಂಚ್ ಪ್ರತಿಸ್ಪರ್ಧಿಗಳ ಬಾಯಿ ಮುಚ್ಚಿಸಲು ಸಾಧ್ಯವಾಯಿತು. 1919 ರಲ್ಲಿ ಫ್ರಾನ್ಸ್ ಪ್ಯಾಲೆಸ್ಟೇನ್ ಮೇಲೆ ಬ್ರಿಟಿಷ್ ಆಡಳಿತವನ್ನು ಒಪ್ಪಿಕೊಂಡಿತು.

ಲೀಗ್ ಆಪ್ ನೇಷನ್ಸ್ ಈಗಿನ ವಿಶ್ವಸಂಸ್ಥೆಯ ಮೊದಲಿದ್ದ ಅಂತರ್‍ರಾಷ್ಟ್ರೀಯ ಸಂಸ್ಥೆ. ಆದರೆ ಆಗಿನ್ನೂ ವಸಾಹತುಶಾಹಿ ಪ್ರಬಲವಾಗಿದ್ದ, ಸಮಾಜವಾದೀ ಬಣ ಇನ್ನೂ ಉದಯಿಸಿರದ ಕಾಲ. ಆದ್ದರಿಂದ ಈ ಲೀಗ್ ಆಫ್ ನೇಷನ್ಸ್ ಸುಮಾರಾಗಿ ಸಾಮ್ರಾಜ್ಯಶಾಹೀ ದೇಶಗಳ ವೇದಿಕೆಯಂತೆಯೇ ಇತ್ತು. ಪೂರ್ಣ ಸ್ವಾತಂತ್ರ್ಯ ಕೊಡಲು ಇಚ್ಛೆಯಿಲ್ಲದ ವಸಾಹತುಗಳ ಆಡಳಿತ ಹಕ್ಕನ್ನು ಅಂದರೆ ನಿಯೋಗವನ್ನು (mandate) ಸಂಬಂಧಪಟ್ಟ ವಸಾಹತುಶಾಹಿ ಶಕ್ತಿಗೆ ಲೀಗ್ ಆಫ್ ನೇಷನ್ಸ್ ನೀಡುವ ಕ್ರಮದ ಪ್ರಕಾರ ಪ್ಯಾಲೆಸ್ಟೇನ್‌ನ ನಿಯೋಗಾಧಿಕಾರ ಬ್ರಿಟನ್‌ಗೆ ಸಿಕ್ಕಿತು. ಹೆಸರಿಗೆ ಇದೊಂದು ತಾತ್ಕಾಲಿಕ ವ್ಯವಸ್ಥೆಯಾಗಿತ್ತು. ಪ್ಯಾಲೆಸ್ಟೇನ್ ಸ್ವತಂತ್ರವಾಗಿರುವವರೆಗಿನ ವ್ಯವಸ್ಥೆ. ಆದರೆ ಬ್ರಿಟನ್ ಇನ್ನೂ ಕಾಲು ಶತಮಾನಕ್ಕೂ ಹೆಚ್ಚು ಸಮಯದವರೆಗೆ ಇದನ್ನು ಮುಂದೂಡವಲ್ಲಿ ಯಶಸ್ವಿಯಾಯಿತು.

"ಜನರಿಲ್ಲದ ನಾಡನ್ನು ನಾಡಿಲ್ಲದ ಜನರಿಗೆ ನೀಡುವ" ವಚನವನ್ನು ಬ್ರಿಟಿಶ್ ವಸಾಹತುಶಾಹಿ ಝಿಯೋನಿಸ್ಟ್ ಭಯೋತ್ಪಾದಕರಿಗೆ ನೀಡಿತ್ತು - 1917ರ ಬಾಲ್ಪೋರ್ ಘೋಷಣೆಯ ಮೂಲಕ. ಆದರೆ ಇದು ಶುದ್ಧ ಕುತಂತ್ರವಾಗಿತ್ತು. ಯಾಕೆಂದರೆ ಪ್ಯಾಲೆಸ್ಟೇನ್ ಜನರಿಲ್ಲದ ನಾಡಾಗಿರಲಿಲ್ಲ. ನೂರಾರು ವರ್ಷಗಳಿಂದ ಅರಬ್ ಮೂಲದ ಜನ ಬದುಕಿಕೊಂಡು ಬಂಧಿದ್ದ ನಾಡಾಗಿತ್ತು.

ಪಾಶ್ಚಿಮಾತ್ಯ ದೇಶಗಳಲ್ಲಿನ ಯೆಹೂದೀ ಬಂಡವಾಳಿಗರ ಬಂಡವಾಳದ ಬಲದಿಂದ 'ಯೆಹೂದೀನಾಡು' 'ಯೆಹೂದಿ ಶ್ರಮ' ಇತ್ಯಾದಿ ಸಂಕುಚಿತ ಘೋಷಣೆಗಳ ಮರೆಯಲ್ಲಿ ಅರಬ್ ರೈತರ ಜಮೀನನ್ನು ಕಿತ್ತುಕೊಳ್ಳುವುದು ಯೆಹೂದಿಗಳ ಉದ್ದಿಮೆಗಳಲ್ಲಿ ಅರಬರಿಗೆ ಕೆಲಸ ಸಿಗದಂತೆ ಮಾಡುವುದು, ಜತೆಗೆ ಅರಬ್ಬೀ ಪ್ಯಾಲೆಸ್ಟೇನಿಯನ್ನರ ಮೇಲೆ ಝಿಯೋನಿಸ್ಟರ ಭಯೋತ್ಪಾದಕತೆ. ಈ ಎಲ್ಲಾ ಕುಕೃತ್ಯಗಳಿಗೆ ಬ್ರಿಟಿಷ್ ವಸಾಹತುಶಾಹಿಗಳ ಬೆಂಬಲ. 1917 ರಿಂದ 1947ರ ನಡುವೆ ಪ್ಯಾಲೆಸ್ಟೇನ್‌ನಲ್ಲಿ ಯೆಹೂದೀ ವಲಸೆಗಾರರ ಸಂಖ್ಯೆ 5-7 ಸಾವಿರದಿಂದ 6 ಲಕ್ಷಕ್ಕೆ ಏರಿತು!

ಈ ಅತಿಕ್ರಮಣಗಳನ್ನು ಪ್ಯಾಲೆಸ್ಟೇನಿಯನ್ನರು ಬಲವಾಗಿ ವಿರೋಧಿಸಿದರು. ಬ್ರಿಟನ್ನಿನ ನಿಯೋಗಾಧಿಕಾರ ತಕ್ಷಣ ರದ್ದಾಗಬೇಕೆಂದು ಒತ್ತಾಯಿಸಿದರು. 1920 ರಿಂದ 1939 ರ ನಡುವೆ ಬ್ರಿಟಿಷರ ಝಿಯೋನಿಸ್ಟರ ವಿರುದ್ಧ ಐದು ದೇಶವ್ಯಾಪೀ ಬಂಡಾಯಗಳು ನಡೆದವು. ಯೆಹೂದೀ ವಲಸೆ ತಕ್ಷಣ ನಿಲ್ಲಬೇಕೆಂದು ಹೋರಾಟ ನಡೆಯಿತು. 1936ರಲ್ಲಿ ಆರು ತಿಂಗಳ ಸಾರ್ವತ್ರಿಕ ಮುಷ್ಕರ, ನಂತರ ಸತತ ಮೂರು ವರ್ಷಗಳವರೆಗೆ ನಡೆದ ದಂಗೆಗಳು ಬ್ರಿಟಿಷರನ್ನು ನಡುಗಿಸಿದವು. ಬ್ರಿಟಿಷರು ತಮ್ಮ ಪ್ರಭಾವ ಉಳಿಸಿಕೊಳ್ಳಲು ಬದಲೀ ವ್ಯವಸ್ಥೆಯ ಬಗ್ಗೆ ಯೋಚಿಸಲಾರಂಭಿಸಿದರು. ದ್ವಂದ್ವ ನೀತಿಯನ್ನು ಅನುಸರಿಸಲಾರಂಭಿಸಿದರು. ಝಿಯೋನಿಸ್ಟರ 'ಯೆಹೂದಿ ನಾಡಿ'ನ ನೀತಿಯನ್ನು ತಾವು ವಿರೋಧಿಸುತ್ತಿದ್ದೇವೆಂಬ, ಪ್ಯಾಲೆಸ್ಟೇನ್ನಿಯನ್ನರ ಒತ್ತಾಯ ಈಡೇರಿಸುತ್ತೇವೆಂಬ ಭ್ರಮೆ ಹುಟ್ಟಿಸಲು ಪ್ರಯತ್ನಿಸಿದರು. ಇನ್ನೊಂದೆಡೆ ತಮ್ಮ ಪ್ರಾಬಲ್ಯ ಉಳಿಸಿಕೊಳ್ಳಲು ಝಿಯೋನಿಸ್ಟ್ ಶಕ್ತಿಗಳನ್ನು ಪೋಷಿಸುವ ಕ್ರಮ ಮುಂದುವರೆಸಿದರು.(ಇಲ್ಲಿ ಝಿಯೋನಿಸ್ಟರು ಮತ್ತು ಪ್ಯಾಲೆಸ್ಟೇನಿನ ಯೆಹೂದಿಯರ ನಡುವಿನ ವ್ಯತ್ಯಾಸ ಮರೆಯಬಾರದು. ವಾಸ್ತವವಾಗಿ ಈಗಲೂ ಇಸ್ರೇಲಿನ ಝಿಯೋನಿಸ್ಟರ ಆಳ್ವಿಕೆಯಲ್ಲಿ ಸ್ಥಳೀಯ ಯೆಹೂದಿಯರು ದ್ವಿತೀಯ ದರ್ಜೆ ನಾಗರೀಕರಂತಿದ್ದಾರೆ.)

ಎರಡನೇ ಮಹಾಯುದ್ಧ ಮುಗಿಯುತ್ತಿದ್ದಂತೆ ಪ್ಯಾಲೆಸ್ಟೇನಿನಲ್ಲಿ "ಯೆಹೂದೀ ತಾಯ್ನಾಡಿ"ನ ಸ್ಥಾಪನೆಗೆ ಅಂತರ್‍ರಾಷ್ಟ್ರೀಯ ಝಿಯೊನಿಸ್ಟ್ ಶಕ್ತಿಗಳು ತೀವ್ರ ಒತ್ತಡ ತರಲಾರಂಭಿಸಿದರು. ಈ ನಡುವೆ ಸಾಮ್ರಾಜ್ಯಶಾಹೀ ಜಗತ್ತಿನಲ್ಲಿ ಬ್ರಿಟಿಷರು ಹಿನ್ನೆಲೆಗೆ ಸರಿದು ಅಮೆರಿಕನ್ನರು ರಾರಾಜಿಸಿಸಲಾರಂಭಿಸಿದಂತೆ ಮಧ್ಯಪ್ರಾಚ್ಯದಲ್ಲಿಯೂ ಝಿಯೋನಿಸ್ಟರು ಮತ್ತು ಅಮೇರಿಕನ್ ಆಳುವ ವಲಯದ ಕೂಟ ಮೂಡಿಬಂತು. ಅರಬರನ್ನು ಅವರ ತಾಯ್ನಾಡಿನಿಂದ ಓಡಿಸಿ ತಮ್ಮ ಉದ್ದೇಶ ಸಾಧಿಸಲು ಝಿಯೋನಿಸ್ಟರು ನಡೆಸಿದ ಪೈಶಾಚಿಕ ಕೃತ್ಯಗಳಿಂದಾಗಿ ಭೀಷಣ ಪರಿಸ್ಥಿತಿ ಸೃಷ್ಟಿಯಾಯಿತು. ಬ್ರಿಟನ್ ಇದನ್ನು ನಿರ್ವಹಿಸುವುದು ತನಗೆ ಸಾಧ್ಯವಿಲ್ಲವೆಂದು ಪ್ಯಾಲೆಸ್ಟೇನ್ ಪ್ರಶ್ನೆಯನ್ನು ಅದಾಗಲೇ ಸ್ಥಾಪನೆಗೊಂಡಿದ್ದ ವಿಶ್ವಸಂಸ್ಥೆಗೆ ವರ್ಗಾಯಿಸಿತು. ಭವಿಷ್ಯದ ಪ್ಯಾಲೆಸ್ಟೇನಿನ ಮೇಲೆ ತನ್ನ ಹತೋಟಿಯನ್ನು ಕಾದುಕೊಳ್ಳುವುದೂ ಕೂಡಾ ಬ್ರಿಟನ್ನಿನ ಈ ಕ್ರಮದ ಹಿಂದಿನ ಒಂದು ಉದ್ದೇಶ.

ಮೇ 15, 1947 ರಲ್ಲಿ ಈ ವಿಷಯಕ್ಕಾಗಿ ಕರೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮೊದಲ ವಿಶೇಷ ಸಭೆ ನಡೆದು ಒಂದು ವಿಶೇಷ ಸಮಿತಿಯನ್ನು ರಚಿಸುವ ನಿರ್ಣಯ ಕೈಗೊಂಡಿತು. ಈ ಸಮಿತಿ ಎರಡು ಪರ್ಯಾಯ ಪರಿಹಾರಗಳನ್ನು ಮಂಡಿಸಿತು. ಎರಡು ಸ್ವತಂತ್ರ ರಾಷ್ಟ್ರೀಯ ಪ್ರಭುತ್ವಗಳು (ಒಂದು ಅರಬ್ ಮತ್ತು ಇನ್ನೊಂದು ಯೆಹೂದೀ) ಅಥವಾ ಒಂದು ಏಕೀಕೃತ ಒಕ್ಕೂಟ ಪ್ರಭುತ್ವ. ಸೋವಿಯೆಟ್ ಒಕ್ಕೂಟ ಮತ್ತು ಇತರ ಪ್ರಗತಿಪರ ಶಕ್ತಿಗಳು ಏಕೈಕ ಅರಬ್-ಯೆಹೂದಿ ಪ್ರಭುತ್ವದ ಬಗ್ಗೆ ಒಲವು ತೋರಿದ್ದರು. ಆದರೆ ಝಿಯೋನಿಸ್ಟರ ದುಷ್ಕೃತ್ಯಗಳಿಂದ ಪ್ಯಾಲೆಸ್ಟೇನ್ ಅರಬ್ ಮತ್ತು ಯೆಹೂದಿ ಕೋಮುಗಳ ನಡುವಿನ ಸಶಸ್ತ್ರ ಘರ್ಷಣೆಗಳ ರಣರಂಗವಾಗಿತ್ತು. ಈ ಹಿನ್ನೆಲೆಯಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ 29 ನವೆಂಬರ್ 1947 ರಂದು ನಿರ್ಣಯ ಸಂಖ್ಯೆ 181(2) ನ್ನು ಅಂಗೀಕರಿಸಿತು.

"ಪ್ಯಾಲೆಸ್ಟೇನ್‌ನ ದುರಂತ ಕೇವಲ ಸ್ಥಳೀಯ ದುರಂತವಲ್ಲ. ಇದು ವಿಶ್ವದ ದುರಂತ ಯಾಕೆಂದರೆ ಇದು ವಿಶ್ವಶಾಂತಿಗೆ ಕಂಟಕಪ್ರಾಯವಾಗಿರುವ ಒಂದು ಅನ್ಯಾಯ" ಎಂದ ಈ ನಿರ್ಣಯ 'ಸಲಹೆ ಮಾಡಿದ ಪರಿಹಾರ ಹೀಗಿದೆ'.

ಪ್ಯಾಲೆಸ್ಟೇನ್ ಮೇಲೆ ಬ್ರಿಟಿಷ್ ನಿಯೋಗಾಧಿಕಾರ ಕೊನೆಗೊಳ್ಳಬೇಕು. ಪ್ಯಾಲೆಸ್ಟೇನ್‌ನನ್ನು ಎರಡು ಪ್ರಭುತ್ವಗಳಾಗಿ ವಿಭಜನೆ ಮಾಡಬೇಕು. ಆದರೆ ಅವುಗಳ ನಡುವಿನ ಆರ್ಥಿಕ ಏಕತೆ ಮುಂದುವರೆಸಬೇಕು. ಜೆರುಸಲೇಂ ಹಾಗೂ ಅದರ ಸುತ್ತಮುತ್ತಲ ಪ್ರದೇಶ ಅಂತರ್‍ರಾಷ್ಟ್ರೀಯ ಆಳ್ವಿಕೆಯ ಒಂದು ಸ್ವತಂತ್ರ ಪ್ರಾದೇಶಿಕ ಘಟಕವಾಗಬೇಕು. ಯೆಹೂದೀ ಪ್ರಭುತ್ವ ಪ್ಯಾಲೆಸ್ಟೇನ್‌ನ ಶೇ. 56 ರಷ್ಟು ಪ್ರದೇಶದಲ್ಲಿ ಸ್ಥಾಪನೆಗೊಳ್ಳುವುದು. ಇದರಲ್ಲಿ 43% ಪ್ರದೇಶವಿದ್ದು ಇದರ ಜನಸಂಖ್ಯೆ 7.25 ಲಕ್ಷ ಅರಬ್ಬರು ಹಾಗೂ ಸಾವಿರ ಯೆಹೂದಿಗಳಿರುತ್ತಾರೆ. ಉಳಿದ ಜೆರುಸಲೇಂ ಪ್ರಾಂತ 1.00 ಲಕ್ಷ ಯೆಹೂದ್ಯರಿರುತ್ತಾರೆ.

ಈ ನಿರ್ಣಯ ಪ್ಯಾಲೆಸ್ಟೇನ್ ಸಮಸ್ಯೆಯ ಪರಿಹಾರದ ಒಂದು ಆಧಾರವಾಗಬಹುದಿತ್ತು. ಆದರೆ ಪ್ಯಾಲೆಸ್ಟೇನೀ ಅರಬ್ ಪ್ರಭುತ್ವ ರಚನೆಯಾಗದಂತೆ ತಡೆದು ಹೆಚ್ಚೆಚ್ಚು ಪ್ರದೇಶಗಳನ್ನು ಸೇರಿಸಿಕೊಂಡು ಕೇವಲ, ಯೆಹೂದಿ ಪ್ರಭುತ್ವ ವಿಸ್ತರಿಸಬೇಕೆಂಬ ಗುರಿ ಹೊಂದಿದ್ದ ಝಿಯೋನಿಸ್ಟರಿಗೆ ಇದು ಸಾಧ್ಯವಾಗಲಿಲ್ಲ. ಪ್ಯಾಲೆಸ್ಟೇನಿ ಅರಬ್ಬರ ಮೇಲೆ ಕ್ರೂರ ಅತ್ಯಾಚಾರಗಳು ವಿಪರೀತ ಹೆಚ್ಚಿದವು. ಉದಾ: ಜೆರುಸಲೇಂನ ಹತ್ತಿರದ ಹಳ್ಳಿಯೊಂದರಲ್ಲಿ ಒಂದೇ ದಿನದಲ್ಲಿ 250 ಅರಬ್‌ರನ್ನು ಮಹಿಳೆಯರು, ಮಕ್ಕಳೆನ್ನದೆ ಝಿಯೋನಿಸ್ಟರು ಕೊಚ್ಚಿ ಹಾಕಿದರು.

ಈ ಕೃತ್ಯ ಎಸಗಿದ ಯೆಹೂದೀ ಭಯೋತ್ಪಾದಕರ ಗುಂಪಿನ ಮುಖಂಡರು ನಂತರ ಇಸ್ರೇಲಿನ ಪ್ರಧಾನಮಂತ್ರಿಗಳಾದ ಮೆನಚೆಂ ಬೆಗಿನ್ ಮತ್ತು ಶಮಿರ್ ಎಂಬುದನ್ನು ಗಮನಿಸಬೇಕು.

1946 ರ ಮೇ 15 ರಂದು ಝಿಯೋನಿಸ್ಟರು ಇಸ್ರೇಲೀ ರಾಷ್ಟ್ರದ ಏಕಪಕ್ಷೀಯ ಘೋಷಣೆ ಮಾಡಿದರು. ಇದನ್ನು ವಿರೋಧಿಸಿ ಪ್ಯಾಲೆಸ್ಟೇನ್‌ನ ವಿಭಜನೆ ಒಪ್ಪದ ಹಲವು ಅರಬ್ ಪ್ರಭುತ್ವಗಳು ಇಸ್ರೇಲ್ ಮೇಲೆ ಯುದ್ಧ ಘೋಷಿಸಿದರು. ಝಿಯೋನಿಸ್ಟರ ಭಯೋತ್ಪಾದಕತೆ ಹಾಗೂ ಇಸ್ರೇಲೀ ಮಿಲಿಟರಿಯ ದಮನದಿಂದಾಗಿ ಒಮ್ಮೆಲೇ 9 ಲಕ್ಷ ಪ್ಯಾಲೆಸ್ಟೇನಿಗಳು ನಿರಾಶ್ರಿತರಾಗಿ ನೆರೆಯ ಅರಬ್ ದೇಶಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಸಮಸ್ಯೆ ಇನ್ನಷ್ಟು ಕ್ಲಿಷ್ಟಗೊಂಡಿತು.

ಪ್ಯಾಲೆಸ್ಟೇನ್‌ನಲ್ಲಿ ಅರಬ್ ರಾಷ್ಟ್ರ ಸ್ಥಾಪಿಸಬೇಕೆಂಬ ವಿಶ್ವಸಂಸ್ಥೆಯ ನಿರ್ಣಯ ಇಸ್ರೇಲ್ ಹಾಗೂ ಸಾಮ್ರಾಜ್ಯಶಾಹಿಗಳ ಕುತಂತ್ರಗಳಿಂದಾಗಿ ಜಾರಿಗೆ ಬರಲಿಲ್ಲ. ಪ್ಯಾಲೆಸ್ಟೇನ್ ನಿರಾಶ್ರಿತರು ಹಾಗೂ ಪ್ಯಾಲೆಸ್ಟೇನ್ ಪ್ರಶ್ನೆಯ ಇತರ ಅಂಶಗಳನ್ನು ಕುರಿತು ವಿಶ್ವಸಂಸ್ಥೆ ಆಗಾಗ ಅಂಗೀಕರಿಸಿದ ಇತರ ನಿರ್ಣಯಗಳ ಗತಿಯೂ ಇದೇ ಆಗಿತ್ತು. ಈ ನಡುವೆ ಇಸ್ರೇಲೀ ಪ್ರಭುತ್ವದ ಆಕ್ರಾಮಕ ಕ್ರಮಗಳು, ಪ್ಯಾಲೆಸ್ಟೇನೀ ಅರಬ್ಬರ ಮೇಲಿನ ಕ್ರೂರ ದಮನ ಮುಂದುವರೆಯಿತು. ಪ್ಯಾಲೆಸ್ಟೇನಿಯರ ದುರಂತವನ್ನು ಇನ್ನಷ್ಟು ಅಸಹನೀಯಗೊಳಿಸಿದ, ಅರಬ್ ದೇಶಗಳ ಮೇಲೆ 1967 ರ ಇಸ್ರೇಲೀ ಆಕ್ರಮಣ ವಿಶ್ವಾದ್ಯಂತ ಖಂಡನೆಗೊಳಗಾಯಿತು. ಇದರ ಫಲವಾಗಿ ವಿಶ್ವಸಂಸ್ಥೆಯ ಭದ್ರತಾ ಸಮಿತಿ *22 ನವೆಂಬರ್ 1967 ರಂದು ನಿರ್ಣಯ ಸಂಖ್ಯೆ 242 ನ್ನು ಅಂಗೀಕರಿಸಿ 1967 ರ ಘರ್ಷಣೆ*ಯಲ್ಲಿ ಆಕ್ರಮಿಸಿದ ಪ್ರದೇಶಗಳಿಂದ ಇಸ್ರೇಲ್ ವಾಪಸು ಹೋಗಬೇಕು ಹಾಗೂ ಮಧ್ಯ ಪ್ರಾಚ್ಯದಲ್ಲಿ ಒಂದು ನ್ಯಾಯಪೂರ್ಣ ಹಾಗೂ ಶಾಶ್ವತ ಶಾಂತಿ ಸ್ಥಾಪಿಸಬೇಕೆಂದು ಕರೆ ನೀಡಿತು.

ಆದರೆ ಇಸ್ರೇಲಿನ ಆಳುವ ವಲಯಗಳ ಯುದ್ಧಕೋರತನ ಹಾಗೂ ಅದಕ್ಕೆ ಅಮೇರಿಕಾದ ಬೆಂಬಲಗಳಿಂದಾಗಿ ಸಮಸ್ಯೆ ಇತ್ಯರ್ಥ ಕಾಣದೆ ಮತ್ತೆ 1973 ರಲ್ಲಿ ಮಿಲಿಟರಿ ಕಾರ್ಯಾಚರಣೆಗಳು ನಡೆಯುವಂತಾಯಿತು. ಮತ್ತೆ ವಿಶ್ವಸಂಸ್ಥೆ ಶಾಂತಿ ಪ್ರಯತ್ನ ನಡೆಸಿತು. *22 ಅಕ್ಟೋಬರ್ 1973* ರಂದು ಭದ್ರತಾ ಸಮಿತಿ ನಿರ್ಣಯ ಸಂಖ್ಯೆ *338* ನ್ನು ಅವಿರೋಧವಾಗಿ ಅಂಗೀಕರಿಸಿ ತಕ್ಷಣ ಶಾಂತಿ ಮಾತುಕತೆ ನಡೆಸಬೇಕೆಂದು ಕರೆ ನೀಡಿತು. ಈ ಪ್ರಕಾರ ಅಮೇರಿಕ ಮತ್ತು ಸೋವಿಯೆತ್ ಒಕ್ಕೂಟದ ಜಂಟೀ ಅಧ್ಯಕ್ಷತೆಯಲ್ಲಿ ಜಿನೋವಾದಲ್ಲಿ ಒಂದು ಶಾಂತಿ ಸಮ್ಮೇಳನ ಆರಂಭವಾಯಿತು. ಇನ್ನೇನು ಇತ್ಯರ್ಥ ಸನಿವಾಗುತ್ತಿದೆ ಎಂಬ ಆಸೆ ಮೂಡುತ್ತಿರುವಾಗಲೇ ಅಮೇರಿಕಾ ಹಾಗೂ ಇಸ್ರೇಲ್ ತಮ್ಮ ಪ್ರತ್ಯೇಕ ಕಾರ್ಯಾಚರಣೆಗಳಿಂದಾಗಿ ಈ ಆಸೆಯನ್ನು ಹೊಸಕಿ ಹಾಕಿದವು. ಈಜಿಪ್ಟ್‌ನ ಅಧ್ಯಕ್ಷ ಸಾದತ್ ಕೂಡ ಇವರೊಂದಿಗೆ ಕೈಮಿಲಾಯಿಸಿ ಪ್ಯಾಲೆಸ್ಟೇನೀ ಅರಬರಿಗೆ ವಿಶ್ವಾಸಘಾತ ಮಾಡಿದರು. ಈಜಿಪ್ಟ್ ಹಾಗೂ ಇಸ್ರೇಲ್ ನಡುವೆ ಮಾರ್ಚ್ 1979 ರಲ್ಲಿ ನಡೆದ ಕ್ಯಾಂಪ್ ಡೇವಿಡ್ ಒಪ್ಪಂದ ವಿಶ್ವ ಸಂಸ್ಥೆಯ ಪ್ಯಾಲೆಸ್ಟೇನ್ ಪ್ರಶ್ನೆ ಕುರಿತಾದ ಹಲವು ನಿರ್ಣಯಗಳ ಉಲ್ಲಂಘನೆಯಾಗಿತ್ತು. ಇದು ಇಸ್ರೇಲೀ ಆಳಸರ ವಿಸ್ತರಣಾಕಾಂಕ್ಷೆಯನ್ನು ಇನ್ನಷ್ಟು ಹೆಚ್ಚಿಸಿತು. ಈ ಒಪ್ಪಂದದ ನಂತರ ಇಸ್ರೇಲಿಗಳು ತಾವು ಆಕ್ರಮಿಸಿದ್ದ ಅರಬ್ ಪ್ರದೇಶಗಳಲ್ಲಿ ಮುಖ್ಯವಾಗಿ ಪ್ಯಾಲೇಸ್ಟೇನೀ ಅರಬ್ ಪ್ರಭುತ್ವದ ಭಾಗವಾಗಬೇಕಾಗಿದ್ದ ಜೋರ್ಡಾನ್ ನದಿಯ ಪಶ್ಚಿಮ ಭಾಗ, ಘಾಝಾ ಪಟ್ಟಿ ಮತ್ತು ಜೆರುಸಲೇಂನ ಪೂರ್ವ ಭಾಗದಲ್ಲಿ ಯೆಹೂದಿಯರನ್ನು ತಂದು ನೆಲೆಸುವ ಕೆಲಸ ಭರದಿಂದ ಆರಂಭಿಸಿದರು. ಕ್ರಮೇಣ ಪ್ಯಾಲೆಸ್ಟೇನ್ ನೆಲ್ಲಾ ಅತಿಕ್ರಮಿಸಿ ಪ್ಯಾಲೆಸ್ಟೇನೀ ಅರಬ್ ಪ್ರಭುತ್ವವೊಂದು ಸ್ಥಾಪನೆಗೊಳ್ಳದಂತೆ ತಡೆಯುವ ಲೆಕ್ಕಾಚಾರ ಅವರದು. ಈ ಅತಿಕ್ರಮದೊಂದಿಗೆ ಆಕ್ರಮಿತ ಪ್ರದೇಶಗಳಲ್ಲಿ ಅರಬ್ಬರ ಮೇಲೆ ಫ್ಯಾಸಿಸ್ಟ್ ದಮನ, ಮಸೀದಿಗಳ ಮೇಲೆ ಪ್ರಾರ್ಥನಾ ಸಮಯದಲ್ಲೇ ಗೋಳಿಬಾರು, ಪಿ.ಎಲ್.ಒ. ಚಟುವಟಿಕೆಗಳಿಗೆ ನೆರವಾಗುತ್ತಾರೆಂಬ ಕಾರಣದ ಮೇಲೆ ಲೆಬನಾನ್ ಮತ್ತಿತರ ನೆರೆಯ ಅರಬ್ ದೇಶಗಳ ಮೇಲೆ ಆಕ್ರಮಣ, ನಿರಾಶ್ರಿತ ಶಿಬಿರಗಳಲ್ಲಿನ ಪ್ಯಾಲೆಸ್ಟೇನಿಗಳ ಮೇಲೂ ಅಮಾನುಷ ಧಾಳಿ.

ಆದರೆ ಎಷ್ಟೇ ದಮನ, ದಬ್ಬಾಳಿಕೆ, ಕ್ರೌರ್ಯ ಕೂಡಾ ನ್ಯಾಯಬದ್ಧ ಗುರಿ ಸಾಧನೆಗಾಗಿ ಹೋರಾಡುವ ಜನತೆಯ ಹೋರಾಟವನ್ನು ಬಗ್ಗುಬಡಿಯಲಾರದು ಎಂಬುದನ್ನು ಇತಿಹಾಸ ತೋರಿಸಿಕೊಟ್ಟಿದೆ. ಪ್ಯಾಲೆಸ್ಟೇನ್‌ನ ಜನತೆ ಬದುಕುವ ಹಕ್ಕಿಗಾಗಿ ಹೋರಾಡುತ್ತಿದ್ದಾರೆ. ಡಿಸೆಂಬರ್ 8, 1987 ರಿಂದ ಇಸ್ರೇಲೀ ಆಕ್ರಮಿತ ಪ್ಯಾಲೆಸ್ಟೇನ್ ಪ್ರದೇಶಗಳಲ್ಲಿ ಆರಂಭವಾಗುವ ಇಂತಿಫಾದಾ ಅಥವಾ ಅಭೂತಪೂರ್ವ ರಾಷ್ಟ್ರೀಯ ಬಂಡಾಯದ ಫಲವಾಗಿ ಈಗಾಗಲೇ ಪ್ಯಾಲೆಸ್ಟೇನ್ ರಾಷ್ಟ್ರದ ಘೋಷಣೆಯಾಗಿದೆ. ಪ್ರತಿದಿನ ಪ್ಯಾಲೆಸ್ಟೇನ್ ಯುವಕರು, ಮಕ್ಕಳು, ಮಹಿಳೆಯರು ಪ್ಯಾಲೆಸ್ಟೇನ್‌ನ ಬೀದಿ-ಬೀದಿಯಲ್ಲಿ ಇಸ್ರೇಲಿ ಸೈನಿಕರ ಅತ್ಯಾಧುನಿಕ ಅಮೇರಿಕನ್ ಅಸ್ತ್ರಗಳನ್ನು ಕವಣೆ ಕಲ್ಲುಗಳಿಂದ ಎದುರಿಸುತ್ತಿದ್ದಾರೆ.

ಪ್ಯಾಲೆಸ್ಟೇನ್ ರಾಷ್ಟ್ರೀಯ ಮಂಡಳಿಯ 19 ನೇ ಅಧಿವೇಶನ ಮಂಜೂರು ಮಾಡಿರುವ ರಾಜಕೀಯ ಹೇಳಿಕೆಯ ಮುಖ್ಯ ಅಂಶಗಳು

1. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯ ಸಂಖ್ಯೆ 242 ಮತ್ತು 338 ರ ಆಧಾರದ ಮೇಲೆ ಮಧ್ಯಪ್ರಾಚ್ಯ ಕುರಿತಾದ ಅಂತರ್‍ರಾಷ್ಟ್ರೀಯ ಸಮ್ಮೇಳನ ಕರೆಯಬೇಕು. ಸ್ವಯಂ ನಿರ್ಧಾರದ ಹಕ್ಕು ಕೂಡಾ ಸೇರಿದಂತೆ ಪ್ಯಾಲೆಸ್ಟೇನಿಯನ್ ಜನತೆಯ ಹಕ್ಕುಗಳ ಭರವಸೆ ನೀಡಬೇಕು.
2. 1967ರಲ್ಲಿ ಇಸ್ರೇಲ್ ಆಕ್ರಮಿಸಿದ ಎಲ್ಲಾ ಪ್ಯಾಲೆಸ್ಟೇನಿಯನ್ ಹಾಗೂ ಅರಬ್ ದೇಶಗಳಿಂದ, ಅರಬ್ ಜೆರುಸಲೇಂನಿಂದ ಇಸ್ರೇಲಿಗಳ ವಾಪಸಾತಿ.
3. 1967 ಇಸ್ರೇಲ್ ಆಕ್ರಮಿಸಿದ ಪ್ರದೇಶಗಳಲ್ಲಿ ಎಲ್ಲಾ ಅತಿಕ್ರಮಣಕಾರಿ ಹಾಗೂ ಯೆಹೂದಿಗಳನ್ನು ತಂದು ನೆಲೆಗೊಳಿಸುವ ಕ್ರಮಗಳನ್ನು ರದ್ದುಗೊಳಿಸಬೇಕು.
4. ಈ ಪ್ರದೇಶಗಳನ್ನು ವಿಶ್ವಸಂಸ್ಥೆಯ ತಾತ್ಕಾಲಿಕ ಹತೋಟಿಗೆ ಒಪ್ಪಿಸಬೇಕು.
5. ಸಂಬಂಧಪಟ್ಟ ವಿಶ್ವಸಂಸ್ಥೆಯ ನಿರ್ಣಯಗಳ ಪ್ರಕಾರ ನಿರಾಶ್ರಿತರ ಸಮಸ್ಯೆಯ ಪರಿಹಾರ.
6. ಪ್ಯಾಲೆಸ್ಟೇನ್‌ನ ಪವಿತ್ರ ಸ್ಥಳಗಳಲ್ಲಿ ಧಾರ್ಮಿಕ ಹಾಗೂ ಆರಾಧನಾ ಸ್ವಾತಂತ್ರ್ಯದ ಭರವಸೆ.
7. ಈ ಪ್ರದೇಶದಲ್ಲಿ ಪ್ಯಾಲೆಸ್ಟೇನ್ ರಾಷ್ಟ್ರವೂ ಸೇರಿದಂತೆ ಎಲ್ಲಾ ದೇಶಗಳಿಗೆ ಶಾಂತಿ ಹಾಗೂ ಭದ್ರತೆಯ ಭರವಸೆ ನೀಡಲು ಭದ್ರತಾ ಸಮಿತಿ ಕ್ರಮಗಳು.

ಈ ಕೃತ್ಯ ಎಸಗಿದ ಯೆಹೂದೀ ಭಯೋತ್ಪಾದಕರ ಗುಂಪಿನ ಮುಖಂಡರು ನಂತರ ಇಸ್ರೇಲಿನ ಪ್ರಧಾನಮಂತ್ರಿಗಳಾದ ಮೆನಚೆಂ ಬೆಗಿನ್ ಮತ್ತು ಶಮಿರ್ ಎಂಬುದನ್ನು ಗಮನಿಸಬೇಕು.

ಉರ್ದು ಭಾಷೆಗೆ ರಕ್ಷಣೆ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ

ರಾಷ್ಟ್ರೀಯ ಆಂದೋಲನಕ್ಕೆ 'ಇಂಕ್‌ಲಾಬ್' ಎಂಬ ಶ್ರೀಮಂತ ಪದದ ಅಮೂಲ್ಯ ಕೊಡುಗೆ ನೀಡಿದ ಉರ್ದು ಭಾಷೆಯ ಸ್ಥಿತಿ ಈಗ ಏನು? ಏಕೆ ಹೀಗೆ? ನಮ್ಮ ಪ್ರಜಾಪ್ರಭುತ್ವ ಚಳುವಳಿಯ ಮೇಲೆ ಇದರ ಪರಿಣಾಮವೇನು? ಹರಿಕಿಶನ್ ಸಿಂಗ್ ಸುರ್ಜಿತ್ ವಿಶ್ಲೇಷಿಸಿದ್ದಾರೆ.

ಭಾರತ ಸರ್ಕಾರ ಭಾಷಾ ಸಮಸ್ಯೆಯ ಕಡೆಗೆ ಯಾವ ಗಮನ ಕೊಡುತ್ತಿಲ್ಲ. ಪ್ರಜಾಪ್ರಭುತ್ವದ ಬೆಳವಣಿಗೆಯಲ್ಲಿ ಅದರ ಪಾತ್ರದ ಮಹತ್ವವೇ ಸರ್ಕಾರಕ್ಕೆ ತಿಳಿದಂತಿಲ್ಲ. ಭಾರತೀಯ ಭಾಷೆಗಳಿಗೆ ಇನ್ನೂ ಸಮಾನ ಸ್ಥಾನ-ಮಾನ ದೊರೆತಿಲ್ಲ. ಆದರೂ ರಾಜ್ಯಗಳ ಮರುವಿಂಗಡಣೆಯಿಂದ ಈ ಭಾಷೆಗಳ ಬೆಳವಣಿಗೆಗೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಂದ ಸ್ವಲ್ಪವಾದರೂ ಬೆಂಬಲ ಸಿಕ್ಕುವಂತಾಯಿತು. ಆದರೆ ಉರ್ದು ಭಾಷೆಗೆ ಇದೂ ದಕ್ಕಿಲ್ಲ. ಉರ್ದು ಭಾಷೆಯನ್ನಾಡುವ ಜನಗಳ ಸಂಖ್ಯೆ ಗಮನಿಸಿದರೆ ದೇಶದ ಒಂದು ಪ್ರಮುಖ ಭಾಷೆಯಾದ ಉರ್ದು ತಾನು ಹುಟ್ಟಿದ ನಾಡಿನಲ್ಲೇ ಅನಾಥವಾಗಿದೆ. ಈ ಭಾಷಯ ವಿರುದ್ಧ ಒಂದು ಆಳವಾದ ಪೂರ್ವಾಗ್ರಹವೇ ಈ ದುಸ್ಥಿತಿಗೆ ಕಾರಣ.

ಸ್ವಾತಂತ್ರ್ಯದ ಮೊದಲು ಉರ್ದು ಭಾರತದ ಸಂಪರ್ಕ ಭಾಷೆಯಾಗಿತ್ತು. ಉತ್ತರ ಭಾರತದಲ್ಲಿ ಜನ ಅದನ್ನು ಸ್ವೇಚ್ಛೆಯಿಂದ ಸಂತೋಷದಿಂದ ಕಲಿಯುತ್ತಿದ್ದರು. ಅದೊಂದು ಪರಕೀಯ ಭಾಷೆಯೆಂಬ ಭಾವನೆಯೇ ಇರಲಿಲ್ಲ. ಸ್ವಾತಂತ್ರ್ಯಾ ನಂತರವೇ ಉರ್ದು ವಿರುದ್ಧ ಪೂರ್ವಾಗ್ರಹ ಸೃಷ್ಟಿಸಲು ನಿರಂತರ ಪ್ರಯತ್ನ ನಡೆಸಲಾಯಿತು.

ಅದು ಭಾರತದಲ್ಲೇ ಹುಟ್ಟಿದ, ಬೆಳೆದ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ, ಗುಲಾಮಿಕೆಯ ವಿರುದ್ಧ ಜನರ ದೇಶ ಪ್ರೇಮಿ ಭಾವನೆಗಳನ್ನು ಬಡಿದೆಬ್ಬಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ಪ್ರಮುಖ ಪಾತ್ರವಹಿಸಿದ ಚಾರಿತ್ರಿಕ ವಾಸ್ತವತೆಯನ್ನೇ ಅಳಿಸಿ ಹಾಕುವ ಪ್ರಯತ್ನ ನಡೆದಿದೆ. ಉರ್ದು ಪಾಕಿಸ್ತಾನದ ಭಾಷೆ. ಉರ್ದುವಿಗೆ ಪ್ರೋತ್ಸಾಹ ನೀಡುವುದೆಂದರೆ ಪಾಕಿಸ್ತಾನಕ್ಕೆ ಬೆಂಬಲ ನೀಡಿದಂತೆ ಎಂಬ ತಪ್ಪು ತಿಳುವಳಿಕೆ ಹರಡಿಸಲು ಪ್ರಯತ್ನಿಸಲಾಗಿದೆ. ಭಾಷೆಗೆ- ಜಾತಿಮತಗಳ ಸೀಮೆ ಒಡೆದು ಸಂಸ್ಕೃತಿ ಮತ್ತು ನಾಗರೀಕತೆ ಸೃಷ್ಟಿಸುವ ಅಪಾರ ಶಕ್ತಿಯಿದೆ ಎಂಬುದು ಈ ಕುರುಡರಿಗೆ ತಿಳಿದಿಲ್ಲ. ಬಾಂಗ್ಲಾದೇಶ ಪಾಕಿಸ್ತಾನದಿಂದ ಬೇರೆಯಾಗಲು ಪಾಕಿಸ್ತಾನದ ಭಾಷಾ ಪಕ್ಷಪಾತ ಒಂದು ಮುಖ್ಯ ಕಾರಣ.

ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ನಮ್ಮ ಮೇಲೆ ಹೇರಿದ ಇಂಗ್ಲೀಷ್ ಭಾಷೆಯನ್ನು ವಿಪರೀತ ಶುಲ್ಕ ತೆತ್ತರೂ ಸಂತೋಷದಿಂದ ತಮ್ಮ ಮಕ್ಕಳಿಗೆ ಕಲಿಸುವ ಜನಗಳೆ ಉರ್ದುವನ್ನು ಸಹಿಸಲು ಕೂಡಾ ಸಿದ್ಧರಿಲ್ಲ ಎನ್ನುವುದು ಸ್ವಾತಂತ್ರ್ಯದ ನಾಲ್ಕು ದಶಕಗಳ ನಂತರವೂ ಕಂಡು ಬರುವ ಒಂದು ವಿಪರ್ಯಾಸ.

ಉರ್ದು ವಿರುದ್ಧ ಪಕ್ಷಪಾತ ಧೋರಣೆಯಿಂದಾಗಿ ಸ್ವಾತಂತ್ರ್ಯನಂತರದ ಹೊಸ ಪೀಳಿಗೆಗೆ ಉರ್ದು ಭಾಷೆ ಸ್ವಾತಂತ್ರ್ಯ ಚಳುವಳಿಯಲ್ಲಿ ವಹಿಸಿದ ಉನ್ನತ ಪಾತ್ರದ ಬಗ್ಗೆ ತಿಳಿದೇ ಇಲ್ಲ. ರಾಮ್‌ಪ್ರಸಾದ್ ಬಿಸ್ಮಿಲ್, ಆಶ್‌ಫಖುಲ್ಲಾ, ಮೌಲಾನಾ ಅಜರುಲ್ಲಾ ಖಾನ್, ಮೌಲಾನಾ ಹುಸೇನ್ ಅಹ್ಮದ್ ಮದ್ನಿ, ಮೌಲಾನಾ ಅಬುಲ್ ಕಲಮ್ ಆಝಾದ್, ಕೃಷ್ಣನ್ ಛಂದರ್, ಸಜ್ಜದ್ ಜಾಹೀರ್, ಫೈಜ್, ರಾಜೆಂದರ್ ಸಿಂಗ್ ಬೇಡಿ, ಸಾಹಿರ್ ಲುಧಿಯಾನವಿ ಹೀಗೆ ಸ್ವಾತಂತ್ರ್ಯ ಹೋರಾಟಗಾರರಲ್ಲಿ ತಮ್ಮ ಕವನ, ಲೇಖನ, ಭಾಷಣಗಳ ಮೂಲಕ ಸ್ಪೂರ್ತಿ ತುಂಬಿದ ಉರ್ದು ಲೇಖಕರ, ಕವನಗಳ, ಕ್ರಾಂತಿಕಾರಿಗಳ ಒಂದು ದೊಡ್ಡ ಪಟ್ಟಿಯನ್ನೇ ಕೊಡಬಹುದು.

ಉರ್ದುವಿನ ವಿರುದ್ಧ ಯಾವುದೇ ಪೂರ್ವಗ್ರಹ, ಪಕ್ಷಪಾತವಿಲ್ಲದ ದಿನಗಳವು ಜನಗಳಿಗೆ ವಿಚಾರಗಳನ್ನು ಅಭಿಪ್ರಾಯಗಳನ್ನು ಅಭಿವ್ಯಕ್ತಗೊಳಿಸುವ ಒಂದು ಪರಿಣಾಮಕಾರಿ ಸಾಧನವಾಗಿತ್ತು ಆ ಭಾಷೆ. ಆದ್ದರಿಂದಲೇ ವಾಯುವ್ಯ ಭಾರತದಲ್ಲಿ ಹಲವಾರು ಉರ್ದು ಪತ್ರಿಕೆಗಳು ಪ್ರಕಟಗೊಳ್ಳಲಾರಂಭಿಸದವು. ಅಕ್ಟೋಬರ್ ಕ್ರಾಂತಿಯಿಂದ ಸ್ಪೂರ್ತಿ ಪಡೆದು ಅಝುರ್‌ದೈಝಾನ್‌ನ ಬಾಕುವಿನಿಂದ ಉರ್ದು ಪತ್ರಿಕೆಯೊಂದು ಪ್ರಕಟವಾಗಲಾರಂಬಿಸಿತು. ನಂತರ 20 ರ ದಶಕದಲ್ಲಿ ಲಾಹೋರಿನಿಂದ 'ಇಂಕ್‌ಲಾಬ್' ಪತ್ರಿಕೆ ಬರಲಾರಂಭಿಸಿತು. ಅಕಾಲಿ ಆಂದೋಲನದ ಪತ್ರಿಕೆ 'ಅಕಾಲಿ' ಯ ಉರ್ದು ಆವೃತ್ತಿ ಪಂಜಾಬೀ ಆವೃತ್ತಿಗಿಂತ ಹೆಚ್ಚು ಪ್ರಸಾರ ಪಡೆದಿತ್ತು. ಕೆಲವು ಹಿಂದೂ ಮುಖಂಡರು ಕೂಡಾ ತಮ್ಮ ಉಬಾದಗಳನ್ನು ಪ್ರಚಾರ ಪಡಿಸಲು ಉರ್ದು ಬಾಷೆಯಲ್ಲೇ ಪತ್ರಿಕೆಗಳನ್ನು ಪ್ರಕಟಿಸಿದ್ದರು. ಉದಾ: ಮಿಲಾಪ್, ಪ್ರತಾಪ್, ವಂದೇಮಾತರಂ. ಇವುಗಳಲ್ಲಿ ಬಹಳಷ್ಟು ಪತ್ರಿಕೆಗಳ ಹಿಂದೀ ಭಾಷಾ ಆವೃತ್ತಿಗಳು ಸ್ವಾತಂತ್ರ್ಯದ ನಂತರವೇ ಆರಂಭವಾದವು.

1930 ರ ದಶಕದಲ್ಲಿ ಕಾಂಗ್ರೆಸ್‌ನ ಬಂಡವಾಳಶಾಹಿ ಭೂ ಮಾಲಕ ಮುಖಂಡತ್ವದ ಬಗ್ಗೆ ಭ್ರಮ ನಿರಸನ ಹೊಂದಿದ ಯುವಜನ 1936 ರಲ್ಲಿ ಸ್ಥಾಪಿಸಿದ ಪ್ರಗತಿಪರ ಲೇಖಕರ ಸಂಘ ಸಾಹಿತ್ಯದ ಮೂಲಕ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ವಿಚಾರಧಾರೆ ಹರಡಿದರು: ಸಾಮಾಜಿಕ-ಸಾಂಸ್ಕೃತಿಕ ಮತ್ತು ಸೈದ್ಧಾಂತಿಕ ವಲಯದಲ್ಲಿ ಲೇಖನಿಗಳೊದಿಗೆ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದರು, ಅವರ ಸಮರ ಘೋಷ 'ಇಂಕ್‌ಲಾಬ್' ನಮ್ಮ ರಾಷ್ಟ್ರೀಯ ಆಂದೋಲನಕ್ಕೆ ಉರ್ದುವಿನ ಒಂದು ಮಹಾನ್ ಕೊಡುಗೆ.

ಈ ಎಲ್ಲಾ ಚಾರಿತ್ರಿಕ ದಾಖಲೆಗಳಿದ್ದರೂ, ಈಗ ಉರ್ದುವಿನ ಸ್ಥಿತಿ ಏನು? ಸ್ವಾತಂತ್ರ್ಯ ಬಂದ ಕೂಡಲೇ ಉತ್ತರ ಪ್ರದೇಶ, ರಾಜಸ್ತಾನ ಮತ್ತು ಮಧ್ಯಪ್ರದೇಶಗಳಲ್ಲಿ ಉರ್ದು ಕಲಿಕೆಯನ್ನು ರದ್ದುಪಡಿಸಲಾಯಿತು. ಸಾವಿರಾರು ಉರ್ದು ಶಿಕ್ಷಕರು ನಿರುದ್ಯೋಗಿಗಳಾದರು. ಲಕ್ಷಾಂತರ ಮಂದಿ ಒಮ್ಮೆಲೇ ಅನರಕ್ಷಸ್ಥರಿಂದ ನಿರಕ್ಷರಿಗಳಾಗಿ ಬಿಟ್ಟರು. ಇದರ ವಿರುದ್ಧ ಅಂಜುಮಾನ್ ತಾರೀಖ್ -ಎ-ಉರ್ದು 12 ಲಕ್ಷ ಸಹಿ ಸಂಗ್ರಹಿಸಿದರೂ ಪಕ್ಷಪಾತ ನೀತಿ ಮುಂದುವರೆಯಿತು. ತ್ರಿಭಾಷಾ ಗ್ರಾತದ ನೆಪವೊಡ್ಡಿ ಉರ್ದು ಕಲಿಕೆಗೆ ಸೌಲಭ್ಯ ನಿರಾಕರಿಸಲಾಯಿತು. ಉರ್ದು ಭಾಷಿಕರು ಕೋಟ್ಯಂತರ ಸಂಖ್ಯೆಯಲ್ಲಿರುವ ಉತ್ತರಪ್ರದೇಶ, ಬಿಹಾರಗಳಲ್ಲೂ ಉರ್ದುವಿಗೆ ಎರಡನೇ ಭಾಷೆಯ ಸ್ಥಾನಮಾನ ಪಡೆಯಲು ಸಾಧ್ಯವಾಗಿಲ್ಲ.

ಈ ಪಕ್ಷಪಾತ ಉರ್ದು ಭಾಷಿಕರಲ್ಲಿ ಪರಕೀರ ಭಾವನೆ ಸೃಷ್ಟಿಸಿದರೆ ಅದಕ್ಕೆ ಖಂಡಿತಾ ಉರ್ದುವಿನ ಪ್ರಜಾಸತ್ತಾತ್ಮಕ ಮತ್ತು ಸಂವಿಧಾನತ್ಮಕ ಹಕ್ಕುಗಳನ್ನು ಪ್ರತಿಪಾದಿಸಿದಾಗಲೆಲ್ಲಾ ಹುಯಿಲೆಬ್ಬಿಸುವ ಹಿಂದೀ ಭಾಷಾಂಧರೇ ಕಾರಣ. ಈ ಭಾಷಾಂಧರಿಂದಾಗಿಯೇ ಹಿಂದೀ ಭಾಷೆ ಇನ್ನೂ ದೇಶದ ಸಂಪರ್ಕ ಭಾಷೆಯಾಗಿ ಸ್ವೀಕರಿಸಲ್ಪಟ್ಟಿಲ್ಲ ಎಂಬುದು ಕೂಡಾ ಒಂದು ವಾಸ್ತವ ಸಂಗತಿ.

ಯಾವ ಭಾಷೆಯನ್ನೂ ಒಂದು ಮತ ಸಂಪ್ರದಾಯದೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ. ಆದರೆ ಈಗ ಕೆಲವು ಚಾರಿತ್ರಿಕ ಕಾರಣಗಳಿಂದಾಗಿ ಉರ್ದುವನ್ನು ಒಂದು ನಿರ್ದಿಷ್ಟ ಧಾರ್ಮಿಕ ಅಲ್ಪಸಂಖ್ಯಾತ ಗುಂಪಿನೊದಿಗೆ ಗುರುತಿಸುವ ಪ್ರಯತ್ನ ನಡೆಯುತ್ತಿದೆ. ಈ ಸ್ಥಿತಿಗೆ ಉರ್ದು ಭಾಷೆಯಂತೂ ಹೊಣೆಯಲ್ಲ. ಈಗಲೂ ಉರ್ದು ಭಾಷೆಗೆ ಅದೇ ಸಾಮೂಹಿಕ ಸ್ಪಂದನ ದೊರೆಯುತ್ತಿದೆ. ಹಿಂದೀ ಚಿತ್ರಗಳೆಂದು ಸರ್ಟಿಫಿಕೆಟ್ ಪಡೆದರೂ ಉರ್ದು ಭಾಷೆಯಲ್ಲಿರುವ ಚಿತ್ರಗಳು ಈಗಲೂ ಜನಪ್ರಿಯವಾಗಿಲ್ಲವೇ? ಘೌಝುಲ್ ಮತ್ತು ಕವ್ವಾಲಿಗಳು ಈಗಲೂ ಶ್ರೋತೃಗಳ ಹೃದಯವನ್ನು ಮಿಡಿಯುತ್ತಿಲ್ಲವೇ? ಉರ್ದು ಒಂದು ವಿದೇಶಿ ಭಾಷೆಯೆನ್ನುವುದಾದರೆ ಇದು ಹೇಗೆತಾನೇ ಸಾಧ್ಯ? ಯಾವುದೇ ವಿದೇಶೀ ಭಾಷೆಗೆ ಇಂತಹ ಆಕರ್ಷಣೆ ಸಾಧ್ಯವೆ?

ಒಂದು ಅಂಶವನ್ನು ಸ್ಪಟವಾಗಿ ತಿಳಿಯಬೇಕು. ಉರ್ದುವಿನ ವಿರುದ್ಧ ಈ ಪಕ್ಷಪಾತ ಧೋರಣೆನಿಲ್ಲದಿದ್ದರೆ ಅದರಿಂದ ದೇಶಕ್ಕೇ,ದೇಶ ಪ್ರಜಾಪ್ರಭುತ್ವ ಆಂದೋಲಕ್ಕೇ ಕೇಡು ದುರದೃಷ್ಟವಶಾತ್ ಕೆಲವು ಪ್ರಗತಿಪರ, ಪ್ರಜಾಪ್ರಭುತ್ವವಾದ ಶಕ್ತಿಗಳು ಕೂಡಾ ಈ ಅಪಾಯವನ್ನು ಅರಿತಿಲ್ಲ.

ಸಿಪಿಐ(ಎಂ) ನಿರಂತರವಾಗಿ ಉರ್ದುವಿಗೆ ಸರಿಯಾದ ಸ್ಥಾನ ಮಾನ ನೀಡಬೇಕು. ನ್ಯಾಯಬದ್ಧ ಹಕ್ಕುಗಳು ಅದಕ್ಕೆ ದೊರೆಯಬೇಕು ಎಂದು ಹೋರಾಡುತ್ತಾ ಬಂದಿದೆ. ಬಿಹಾರ ಮತ್ತು ಉತ್ತರಪ್ರದೇಶಗಳಲ್ಲಿ ಅದಕ್ಕೆ ಎರಡನೇ ಅಧಿಕೃತ ಭಾಷೆಯ ಸ್ಥಾನಮಾನ ದೊರೆಯಬೇಕೆಂದು ಒತ್ತಾಯಿಸುತ್ತಾ ಬಂದಿದೆ. ತಾನು ಅಧಿಕಾರದಲ್ಲಿರುವ ಪಶ್ಚಿಮಬಂಗಾಳದಲ್ಲಿ ಉರ್ದುಭಾಷಿಕರು ಗಣನೀಯ ಸಂಖ್ಯೆಯಲ್ಲಿರುವ ಪ್ರದೇಶದಲ್ಲೆಲ್ಲಾ ಉರ್ದುವನ್ನು ದ್ವಿತೀಯ ಅಧಿಕೃತ ಭಾಷೆಯನ್ನಾಗಿ ಮಾಡಿದೆ. ಉರ್ದುವಿನ ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ಪ್ರಮುಖ ಕ್ರಮಕೈಗೊಂಡಿದೆ.

ವಾಸ್ತವವಾಗಿ ಉರ್ದುವಿನ ವಿರುದ್ಧ ಪಕ್ಷಪಾತ ನಿಲುವಿಗೂ ಅಲ್ಪ ಸಂಖ್ಯಾತರ ಬಗ್ಗೆ ನಿಲುವಿಗೂ ಪರಸ್ಪರ ಸಂಬಂಧವಿದೆ. ಅವರ ನ್ಯಾಯಬದ್ಧ ದೂರುಗಳನ್ನು ಪರಿಹರಿಸದೆ ಅವರನ್ನು ದೇಶದ ಮುಖ್ಯ ಪ್ರವಾಹದಿಂದ ಆಚೆಗೆ ತಳ್ಳಲು ಕೋಮು ಶಕ್ತಿಗಳು ಕಾದುನಿಂತಿವೆ. ಅಲ್ಪ ಸಂಖ್ಯಾತ ಜನಸಮೂಹಗಳನ್ನು ಪ್ರಜಾಪ್ರಭುತ್ವ ಚಳುವಳಿಯಿಂದ ದೂರ ಸೆಳೆಯಲು ಸನ್ನದ್ಧವಾಗಿವೆ.

ಈ ಸನ್ನಿವೇಶದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಹು ಸಂಖ್ಯಾತ ಮತ್ತು ಅಲ್ಪಸಂಖ್ಯಾತ ಜನಸಮೂಹಗಳನ್ನು ಈ ಶಕ್ತಿಗಳ ಪ್ರಭಾವದಿಂದ ರಕ್ಷಿಸಲು ಹೋರಾಟ ನಡೆಬೇಕು. ಅಲ್ಪಸಂಖ್ಯಾತ ಭಾವನೆಗಳಿಗೆ ಬೆಲೆಕೊಟ್ಟು ಅವರ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸಿದಾಗ ಮಾತ್ರವೇ ಇದು ಸಾಧ್ಯ.

ಉರ್ದುವಿನ ಹೆಮ್ಮೆಯ ಪರಂಪರೆಯ ಅರಿವಿರದ ಯುವ ಜನಾಂಗಕ್ಕೆ ಉರ್ದುವಿನ ಚಾರಿತ್ರಿಕ ಪಾತ್ರದ ಬಗ್ಗೆ, ಈಗ ಉರ್ದುವಿನ ಮಹತ್ವದ ಬಗ್ಗೆ ತಿಳಿಸಿ ಪ್ರತಿಗಾಮಿಗಳ ಆಟವನ್ನು ವಿಫಲಗೊಳಿಸುವುದು ಈಗಿನ ತುರ್ತು ಅಗತ್ಯ.

ಜನವರಿ 1, 1992

ಆ ಡಾಕ್ಟರ್ ಬೆದರಿಸದಿದ್ದಿದ್ದರೆ...............?

ಇತಿಹಾಸದ ಪುಟಗಳಿಂದ

1940-41ರ ಘಟ್ಟದಲ್ಲಿ ಭೀಕರ ಜಾಗತಿಕ ಯುದ್ಧ ನಡೆಯುತ್ತಿದ್ದ ಸಮಯ ಬ್ರಿಟಿಷ್ ಮಿಲಿಟರಿಯವರು ವ್ಯಾಪಕವಾಗಿ ಕಮ್ಯುನಿಸ್ಟರನ್ನು ಬೇಟಿಯಾಡುತ್ತಿದ್ದ ಸಂದರ್ಭ. ಒಂದು ಪ್ರಯಾಣದಲ್ಲಿ ಅವರು ಬ್ರಿಟಿಷ್ ಪೋಲೀಸರ ವಶವಾದರು. ಪಂಜಾಬಿನ ಒಂದು ಸ್ಟೇಶನ್‌ನಿಂದ, ಎಲ್ಲಿಗೆ ಎಂಬ ಸೂಚನೆಯನ್ನು ಕೊಡದೇ ದೆಹಲಿಯ ಕೆಂಪು ಕೋಟೆಯೊಳಗೊಯ್ದರು. ಅಲ್ಲಿ ಕಮ್ಯುನಿಸ್ಟರಿಗೋಸ್ಕರ ಹಲವು ರೀತಿಯಲ್ಲಿರುವ ಯಾತನಾ ಶಿಬಿರಗಳಿದ್ದವು.

ಅವರನ್ನು ಒಂದು ಬಾವಿಯ ಆಕಾರದಲ್ಲಿ ಸಣ್ಣ ತಗ್ಗಿನಂತಹ ಸ್ಥಳದಲ್ಲಿ ಬಂಧಿಸಿಡಲಾಯಿತು. ಆ ಸ್ಥಳದಲ್ಲಿ ಒಬ್ಬ ಮನುಷ್ಯ ಇಳಿದು ನಿಲ್ಲಬಹುದೇ ವಿನಹಃ ಕುಳಿತುಕೊಳ್ಳಲಾಗದು. ಬೆಳಕು ಬರಲಾರದು, ಕೆಟ್ಟವಾಸನೆ. ಕೇವಲ ನಾಲ್ಕೈದು ನಿಮಿಷ ಪೀಡಿಸಲು ಇಲ್ಲಿ ನಿಲ್ಲಿಸಿರಬಹುದೆಂದು ಅವರು ಭಾವಿಸಿದ್ದರು. ಆದರೆ ದಿನಗಳುರುಳಿದವು.

ಒಂದು ಬಕೆಟ್ ತರಹದ ಉಪಕರಣವನ್ನು ಹಗ್ಗದಿಂದ ಇಳಿಬಿಟ್ಟು ಊಟ ಕೊಡಲಾಗುತ್ತಿತ್ತು. ಮಲ ಮೂತ್ರ ವಿಸರ್ಜನೆಯೆಲ್ಲಾ ಅದರಲ್ಲಿಯೇಯ ಬೆಳಗಿನ ಒಂದು ಸಣ್ಣ ಕಿರಣವೂ ಒಳಕ್ಕೆ ಸುಳಿಯಲಾರದು. ಹಗಲು ರಾತ್ರಿಗಳ ವ್ಯತ್ಯಾಸ ತಿಳಿಯಲಾರದು. ವಾರ, ದಿನಾಂಕದ ಬಗ್ಗೆಯೂ ತಿಳಿಯಲಾರದಂತಹ ಸ್ಥಿತಿ, ಈ ವ್ಯಕ್ತಿಯನ್ನು ಶಾರೀರಿಕ ಹಿಂಸೆಯಿಂದ ಮನಃಪರಿವರ್ತನೆಯಾಗದಿದ್ದಲ್ಲಿ ಕತ್ತಲೆ ವಾಸ ಮತ್ತು ಈ ಪೈಶಾಚಿಕ ಹಿಂಸೆಯಿಂದ ಬುದ್ಧಿ ಭ್ರಮಣೆಯಾದರೂ ಆಗಲಿ ಎಂದು ಬ್ರಿಟಿಷರು ಭಾವಿಸಿದ್ದರು. ಆದರೆ ಬ್ರಿಟಿಷ್ ಪೋಲೀಸರ ಲೆಕ್ಕಾಚಾರ ತಲೆಕೆಳಗಾಯಿತು. ಮೂರು ತಿಂಗಳು ಈ ಕತ್ತಲೆಯ ಶಿಕ್ಷೆಯಿಂದ ಶರೀರ ಬಲ ಹೀನವಾದರೂ ಮನಸ್ಸು ಮತ್ತಷ್ಟು ದೃಢವಾಗಿತ್ತು.

ಕತ್ತಲಿನ ಜೀವನದಲ್ಲಿ ಮೂರು ತಿಂಗಳಾದ ನಂತರ ಕೈದಿಗಳ ಶುಶ್ರೂಷೆಗೆ ವೈದ್ಯರೊಬ್ಬರನ್ನು ನಿಯೋಜಿಸಲಾಯಿತು. ಅವರು ಐರ್ಲೆಂಡ್ ದೇಶದವರು. ಅವರ ಹೆಸರು ಡಾ. ಕೊಲಿನ್‌ನ್ ಕಿಕ್. ಕೆಂಪು ಕೋಟೆಯಲ್ಲಿದ್ದ ಇವರನ್ನು ಕಮ್ಯುನಿಸ್ಟರನ್ನಿಟ್ಟಿದ್ದ ಯಾತನಾ ಕೂಪಕ್ಕೆ ಕರೆತರಲಾಗುತ್ತಿತ್ತು. ಡಾಕ್ಟರ್ ಎದುರಿಗೆ ಕರೆತರಲಾಗುತ್ತಿತ್ತು. ವೈದ್ಯರ ಹತ್ತಿರ ತಂದು ನಿಲ್ಲಿಸಿದಾಗ ಅವರಿಗೆ ವೈದ್ಯರೇ ಕಾಣಲಿಲ್ಲ. ಕತ್ತಲೆಯಿಂದ ಹೊರತಂದು ಕೂಡಲೇ ಅವರಿಗೆ ಸೂಕ್ತ ವೈದ್ಯಕೀಯ ಉಪಚಾರ ದೊರೆಯದಿದ್ದಲ್ಲಿ ಈ ವ್ಯಕ್ತಿ ಜೀವನ ಪರ್ಯಂತ ಅಂಧನಾಗುತ್ತಾನೆ ಎಂದು ವೈದ್ಯರು ಜೈಲಿನ ಅಧಿಕಾರಿಗೆ ತಿಳಿಸಿದರು.

ಜೈಲು ಅಧಿಕಾರಿಗಳ ಮನಸ್ಸು ಬದಲಾಗಲಿಲ್ಲ. ಅವರನ್ನು ಪುನಃ ಅದೇ ಕತ್ತಲೆಯ ಕೂಪಕ್ಕೆ ತಳ್ಳಿದರು. ಅವರನ್ನು ಕೂಡಲೇ ಬಿಡುಗಡೆ ಮಾಡದಿದ್ದಲ್ಲಿ ತಾವು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡುವುದಾಗಿ ಆ ವೈದ್ಯರು ತಿಳಿಸಿದರು. ಕೊನೆಯಲ್ಲಿ ವೈದ್ಯರ ಜವಾಬ್ದಾರಿಯ ಮೇಲೆ ಅವರಿಗೆ ಕತ್ತಲೆಯ ಕೂಪದಿಂದ ವಿಮೋಚನೆ ಸಿಕ್ಕಿತು. ಅಂದು ಆ ಡಾಕ್ಟರ್ ಬರದಿದ್ದಲ್ಲಿ ಏನಾಗುತ್ತಿತ್ತು? ಕಣ್ಣು ಹೋದರೂ ಜೀವವೇ ಹೋದರೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಜೊತೆಯಲ್ಲಿ ರಾಜಿಯಾಗಿ ಸ್ವಯಂ ವಿಮೋಚಿತನಾಗಲು ತಾನು ತಯಾರಿರಲಿಲ್ಲ. ಆ ರೀತಿ ರಾಜಿ ಮಾಡಿ ಬದುಕುವುದಕ್ಕಿಂತಲೂ ಸಾವೇ ಮೇಲೆಂದು ಅವರು ಭಾವಿಸಿದ್ದರು.

ಈ ಕತ್ತಲೆಯ ಬಾವಿಯಿಂದ ಹೊರಬಂದಾಗ ಎಲ್ಲವೂ ಶೂನ್ಯವಾಗಿತ್ತು. ಮನಸ್ಸು ಪೂರ್ಣ ಅಶಾಂತತೆಯಿಂದ ಕೂಡಿತ್ತು. ಅಂತಹ ಸಮಯದಲ್ಲಿ ದೃಢವಾಗಿ ನಿಲ್ಲಲು ನೆರವಾದದ್ದು ನಾನು ನಂಬಿದ ವೈಜ್ಞಾನಿಕ ಸಿದ್ಧಾಂತ ಎನ್ನುತ್ತಾರೆ ಆ ಧೀರ ವ್ಯಕ್ತಿ. ಅವರು ಯಾರೆಂದು ನಿಮಗೀಗಾಗಲೇ ಅರಿವಾಗಿರಬಹುದು. ಹೌದು ಹದಿನಾಲ್ಕನೇ ಮಹಾಧಿವೇಶನದಲ್ಲಿ ಭಾರತದ ಕ್ರಾಂತಿಯ ಮುಂಚೂಣಿಯಲ್ಲಿರುವ ಸಿಪಿಐ(ಎಂ)ನ ಸಾರಥ್ಯವಹಿಸಿರುವ ಕಾಂ. ಹರ್ಕಿಷನ್ ಸಿಂಗ್ ಸುರ್ಜಿತ್.

"ಇಂದು ಪಕ್ಷ ಎಷ್ಟೋ ಬೆಳೆದಿದೆ ಪರಿಸ್ಥಿತಿ ಎಷ್ಟೋ ಬದಲಾಗಿದೆ" ಎನ್ನುತ್ತಾರೆ ಕಾಂ. ಸುರ್ಜಿತ್.

ಕತ್ತಲೆಯ ಕೂಪದಿಂದ ಹೊರಬಂದರೂ ಸುರ್ಜಿತರನ್ನು ಬಿಡುಗಡೆ ಮಾಡಲು ಬ್ರಿಟಿಷರು ತಯಾರಿರಲಿಲ್ಲ. ದೆಹಲಿರುವ ಇನ್ನೊಂದು ಜೈಲಿಗೆ ಇವರನ್ನು ವರ್ಗಾಯಿಸಲಾಯಿತು. ಅಲ್ಲಿ ನಾಲ್ಕು ವರ್ಷ ಹಾಗೆಯೇ ಜೈಲಿನಲ್ಲಿ ಇಡಲಾಗಿತ್ತು.

ಇಲ್ಲಿಯ ಜೈಲಿನಲ್ಲಿ ತುಂಬಾ ಅವ್ಯವಸ್ಥೆ ಇತ್ತು. ಈ ಅವ್ಯವಸ್ಥೆಯನ್ನು ವಿರೋಧಿಸಿ, ಜೈಲಿನ ಇತರ ಕ್ರಾಂತಿಕಾರಿ ಸಹವಾಸಿಗಳನ್ನು ಸಂಘಟಿಸಿ, ಕಾಮ್ರೇಡ್ ಸುರ್ಜಿತರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಇದರ ಪರಿಣಾಮವಾಗಿ ಕೈದಿಗಳನ್ನು ಅವರವರ ರಾಜ್ಯಗಳಲ್ಲಿ ಇರುವ ಜೈಲುಗಳಿಗೆ ಕಳಿಸಲಾಯಿತು. ಬಿಟಿಆರ್, ಎಸ್.ಎ. ಡಾಂಗೆ, ಬಾಟ್ಲಿವಾಲಾ ಮುಂತಾದವರು ಸುರ್ಜಿತ್ ಜೊತೆಯಲ್ಲಿ ಜೈಲಿನಲ್ಲಿದ್ದರು.

ಪಂಜಾಬ್ ದೆಹಲಿಗಳಲ್ಲಿರುವ ಜೈಲುಗಳಲ್ಲಿ ಸುಮಾರು ಹತ್ತು ವರ್ಷಗಳ ನಿರಂತರ ಜೈಲು ಶಿಕ್ಷೆ ಅನುಭವಿಸಿ, ಎಂಟು ವರ್ಷದ ನಿರಂತರ ಭೂಗತ ಜೀವನ ನಡೆಸಿ ನಿರಂತರವಾಗಿ ಪೋಲೀಸರ ಬೇಟೆಗೊಳಗಾಗಿದ್ದ ಸುರ್ಜಿತರು ಅನೇಕ ಬಾರಿ ಕರಿನೀರು ಶಿಕ್ಷೆಗೆ ಗುರಿಪಡಿಸಲ್ಪಟ್ಟಿದ್ದರು. ಇದರಿಂದಾಗಿ ಕಾಂ. ಸುರ್ಜಿತ್‌ರ ಕ್ರಾಂತಿಕಾರಿ ಚಿಂತನೆ ದುರ್ಬಲವಾಗಲಿಲ್ಲ ಬದಲಾಗಿ ಇನ್ನಷ್ಟು ದೃಢವಾಯಿತು.

ಆವತ್ತಿನ ಪಾರ್ಟಿ ಕೆಲಸ ಕಾರ್ಯಗಳು ಇವತ್ತಿಗಿಂತ ಎಷ್ಟೋ ಭಿನ್ನವಾಗಿದ್ದದ್ದು ಎಂದು ಸುರ್ಜಿತ್ ವಿವರಿಸುತ್ತಾರೆ. ಪಾರ್ಟಿ ಅಧಿಕಾರಕ್ಕೆ ಬರಬಹುದೆಂದು ಕನಸಿನಲ್ಲಿಯೂ ಊಹಿಸಲಾಗದ ಘಟ್ಟವಾಗಿತ್ತು ಅದು ಎಂದು ಈಗ ನೆನಪಿಸಿಕೊಳ್ಳುತ್ತಾರೆ.

ಜನವರಿ 26, 1992



ಮೀಸಲಾತಿ ಏಕೆ?

ಮೀಸಲಾತಿ ಬೇಕು ಎಂದು ಕೇಳುವವರು ನಿಜವಾಗಿಯೂ ಕೇಳುತ್ತಿರುವುದೇನು?
ನಮಗೆ ಶಿಕ್ಷಣ ಬೇಕು. ಉದ್ಯೋಗ ಒದಗಿಸುವ ಶಿಕ್ಷಣ ಬೇಕು. ನಮಗೆ ಉದ್ಯೋಗ ಬೇಕು ಎಂದು.
ಮೀಸಲಾತಿ ಬೇಡ ಎಂದು ಹೇಳುವವರು, ಕೂಡ ನಿಜವಾಗಿ ಕೇಳುತ್ತಿರುವುದೇನು? ನಮಗೆ ಶಿಕ್ಷಣ ಸೌಲಭ್ಯಗಳು ಬೇಕು ನಮಗೆ ಉದ್ಯೋಗವಾಕಾಶ ಕಡಿಮೆಯಾಗುತ್ತಿವೆ, ನಮಗೆ ಉದ್ಯೋಗ ಬೇಕು ಎಂದೇ.
ಹಾಗಾದರೆ ಬೇಕು ನಮಗೆಲ್ಲರಿಗೂ ಶಿಕ್ಷಣ- ನಮಗೆಲ್ಲರಿಗೂ ಉದ್ಯೋಗಬೇಕು ಎಂಬ ಬೃಹತ್ ಪ್ರಜಾಸತ್ತಾತ್ಮಕ ಚಳುವಳಿಯಾಗಿ ಹೊರಹೊಮ್ಮಲು ಇರುವ ಅಡ್ಡಿ ಏನು?

ಮೀಸಲಾತಿ ಪರ-ವಿರೋಧ ಚಳುವಳಿಗಳು ಎಪ್ಪತರ ದಶಕದ ಮಧ್ಯಭಾಗದ ನಂತರವೇ ತೀವ್ರ ಸ್ವರೂಪ ಪಡೆಯಿತು ಎಂಬುದಕ್ಕೂ ಅದೇ ಸಮಯದಲ್ಲಿಯೇ ಅಂದೇ ಸ್ತರದ ಜಯಂತಿಗಳು ಸಂಘಗಳು ವ್ಯಾಪಕವಾಗಿ ಸ್ಥಾಪಿತವಾದವು ಎಂಬುದಕ್ಕೂ ಹತ್ತಿರದ ಸಂಬಂಧವಿದೆ.

ಸ್ವಾತಂತ್ರ್ಯ ನಂತರದ ಮೊದಲ ದಶಕಗಳಲ್ಲಿ ಹರಿಜನರಿಗೆ ನೀಡಿದ ಮೀಸಲಾತಿಗೆ ಸಾರ್ವತ್ರಿಕ ವಿರೋಧ ಬರಲಿಲ್ಲ. ಏಕೆಂದರೆ ಆಗ ಉದ್ದಿಮೆಗಳು, ಕಾರ್ಖಾನೆಗಳು ಸ್ಥಾಪನೆಗೊಳ್ಳುತ್ತಿದ್ದವು. ಉದ್ಯೋಗವಕಾಶಗಳು ವಿಸ್ತರಣೆಗೊಳ್ಳುತ್ತಿದ್ದವು. ಆದರೆ ಸ್ವತಂತ್ರ ಭಾರತದ ಆಳುವ ವರ್ಗಗಳ, ಕೇಂದ್ರ ಸರ್ಕಾರಗಳ ನೀತಿಗಳಿಂದಾಗಿ, ಅದು ಅನುಸರಿಸಿದ ಬಂಡವಾಳಶಾಹಿ ಮಾರ್ಗದಿಂದಾಗಿ ಉದ್ಯೋಗವಕಾಶಗಳು ಕಮ್ಮಿಯಾಗಲಾರಂಭಿಸಿದಾಗಲೇ ಉದ್ಯೋಗಕ್ಕಾಗಿ ತೀವ್ರ ಅಹಿತಕರ ಸ್ಪರ್ಧೆ ನಡೆಸಬೇಕಾದಾಗ ಹಗಲಿರುಳೂ ಅನವರತ ಶ್ರಮ ಪಡಬೇಕಾದ ಪರಿಸ್ಥಿತಿಯಲ್ಲಿ 'ಮೀಸಲಾತಿ' ಎಲ್ಲರ ಕಣ್ಣು ಚುಚ್ಚಲಾರಂಭಿಸಿತು. ಅದರ ವಿರುದ್ಧ ಮೇಲ್ವರ್ಗಗಳು ಕೊಟ್ಟ ಕರೆಗೆ ನಿರುದ್ಯೋಗದಿಂದ ಬಳಲಿಬೆಂಡಾದ ಸಾವಿರಾರು ಮೇಲ್ಜಾತಿಯ ಯುವಕರು ಸ್ಪಂದಿಸಿದರು. ಮೀಸಲಾತಿಯ ಪ್ರಶ್ನೆ ಹರಿಜನರ ಪರವಾದ ಪಕ್ಷಪಾತದ ಪ್ರಶ್ನೆ ಎಂದು ಸಾಮಾನ್ಯವಾಗಿ ನೋಡಲಾಗುತ್ತಿದೆ. ಆದರೆ ನಮ್ಮ ದೇಶದಲ್ಲಿ ಮೀಸಲಾತಿಯ ಪ್ರಶ್ನೆ ಮೊದಲು ಎದ್ದಾಗ ಅದಕ್ಕೆ ನೇತೃತ್ವಕ್ಕೆ ನೀಡಿದವರು ಬ್ರಾಹ್ಮಣರು ಎಂದು ಮೀಸಲಾತಿಯ ಇತಿಹಾಸ ನೋಡಿದಾಗ ತಿಳಿಯುತ್ತದೆ. ಮೀಸಲಾತಿ ಎಂದರೆ ಜೀವನ ನಡೆಸಲು ಸೆಣಸಾಟ ನಡೆಸಬೇಕಾದ ಪರಿಸರದಲ್ಲಿ ದುರ್ಬಲ ವಿಭಾಗಗಳಿಗೆ ರಕ್ಷಣೆಯ ನೀಡಿಕೆ. ಇದು ಯಾವುದೇ ಪ್ರಜಾಪ್ರಭುತ್ವ ಸಮಾಜದ ಕರ್ತವ್ಯ. ಆದ್ದರಿಂದಲೇ 'ಮೀಸಲಾತಿ' ಒಂದು ಪ್ರಜಾಸತ್ತಾತ್ಮಕ ಬೇಡಿಕೆ.

ಉದ್ಯೋಗಾವಕಾಶ ಕಡಿಮೆಯಾದಂತೆ ಒಂದೊಂದು ಜಾಹಿರಾತಿಗೂ ಸಾವಿರಾರೂ ಜನ ಅರ್ಜಿ ಹಾಕುವ ಪರಿಸ್ಥಿತಿಯಲ್ಲಿ ಕೆಲಸ ಪಡೆಯಲು ಲಂಚ, ವಶೀಲಿಗಳ ಮೊರೆ ಹೋಗುವುದು ಎಲ್ಲ ಕಡೆ ಕಾಣುವ ಪ್ರವೃತ್ತಿ. ಈ ವಶೀಲಿ ಎಂದರೇನು?

ವಶೀಲಿ ಮೀಮಾಂಸೆ ಮಾಡಿದಾಗ ನಮಗೆ ಕಾಣುವುದು ರಾಜಕೀಯ ಪ್ರಭಾವ ಮತ್ತು ಅಧಿಕಾರಿಶಾಹಿಯ ಪ್ರಭಾವ ಹಿಡಿತ. ಈ ಹಿಡಿತವನ್ನು ಭೂಮಾಲಕ ವರ್ಗದವರು ತಮ್ಮ ವರ್ಗದ ಅಧಿಪತ್ಯ ಮುಂದುವರಿಸುವ ಹಿನ್ನೆಲೆಯಲ್ಲಿ ಜಾತಿಯ ಪ್ರಭಾವವನ್ನು ಈ ಪಾಳೆಯಗಾರಿ ಸಮಾಜದ ಪಳೆಯುಳಿಕೆಯನ್ನು ಉಪಯೋಗಿಸುತ್ತಾರೆ. ಆದ್ದರಿಂದಲೇ ಮೇಲ್ಜಾತಿಗಳವರ ಪ್ರಮಾಣ ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಹಾಗೆಯೇ ಮುಂದುವರಿದಿದೆ. ಆದರೆ ದುರ್ಬಲ ವರ್ಗದವರಿಗೆ ಕೆಳ ಜಾತಿಗಳವರಿಗೆ ಈ ಮೇಲಿನ ಶಿಫಾರಸುಗಳು ಎಷ್ಟು ಸಾಧ್ಯ.

ಇವೆಲ್ಲಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಸಮಾಜ ಹಾಗೂ ಆರ್ಥಿಕತೆ ಊಳಿಗಮಾನ್ಯ ಪಳೆಯುಳಿಕೆಗಳ ಮೇಲೆಯೇ ಬಂಡವಾಳಶಾಹಿಯನ್ನು ಹೇರಿದ ವ್ಯವಸ್ಥೆ.

ಈ ವ್ಯವಸ್ಥೆಯಲ್ಲಿ ಹರಿಜನ ಗಿರಿಜನರ ಮೇಲೆ ಇತರ ದುರ್ಬಲ ಜನ ವಿಭಾಗಗಳ ಮೇಲೆ ಎರಡೆರಡು ಶೋಷಣೆಯ ಹೊರೆ ಹೇರಿ ಕುಳಿತಿದೆ. ಒಂದು ಎಲ್ಲ ಜನಸಾಮಾನ್ಯರೂ ಅನುಭವಿಸುತ್ತಿರುವ ಬಂಡವಾಳಶಾಹಿ ಶೋಷಣೆ. ಇದರೊಂದಿಗೆ ಸಾವಿರಾರು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಈಗಲೂ ಸಾಗುತ್ತಿರುವ ಪಾಳೆಯಗಾರೀ ಶೋಷಣೆ, ಪಾಳೆಯಗಾರಿ ಶೋಷಣೆ ಭೂಮಿಯ ಕೇಂದ್ರೀಕರಣದ ಕೆಲವೇ ಭೂಮಾಲಕರು ಎಲ್ಲ ಭೂಮಿಯನ್ನು ಭಾರತದ ಪ್ರದಾನ ಉತ್ಪಾದನಾ ಸಾಧನವನ್ನು ತಮ್ಮ ಮುಷ್ಠಿಯಲ್ಲಿ ಹಿಡಿದಿರುವುದರಿಂದ ಬಹಳ ಜನ ಕೆಳ ಶಿಕ್ಷಣವೂ ಸಾಧ್ಯವಾಗದಿರುವ ಪರಿಸ್ಥಿತಿ ಜಾತಿಗಳ ನಡುವೆ ಸಾಮಾಜಿಕ ಅಸಮಾನತೆ ಅಸ್ಪೃಶ್ಯತೆಯ ಪರಿಸ್ಥಿತಿಗೆ ಕಾರಣವಾಗಿದೆ.

ಆದುದರಿಂದ ಮೀಸಲಾತಿಯ ಪ್ರಶ್ನೆಯೆಂದರೆ ದುರ್ಬಲ ವಿಭಾಗಗಳ ಮೇಲಿರುವ ವಿಶೇಷ ಶೋಷಣೆ-- ಪಾಳೆಯಗಾರಿ ಶೋಷಣೆ ಸೃಷ್ಟಿಸಿದ ಅಸಮಾನತೆಯ ವಿರುದ್ಧ ಶಿಕ್ಷಣಾವಕಾಶದಲ್ಲಿ ಉದ್ಯೋಗವಕಾಶದಲ್ಲಿ ರಕ್ಷಣೆ ನೀಡುವ ಪ್ರಶ್ನೆ ಮಾತ್ರ ಮೀಸಲಾತಿ. ಎಂದರೆ ಬೇರೆಯವರ ಉದ್ಯೋಗವನ್ನು ಕಸಿದು ಕೆಳಜಾತಿಗಳವರಿಗೆ ನೀಡುವ ದುರ್ಯೋಜನೆಯಲ್ಲ. ಅವರ ಪಾಲನ್ನು ಅವರಿಗಾಗಿ, ರಾಜಕೀಯ ಅಧಿಕಾರದ ಮೇಲೆ ಹಿಡಿತ ಹೊಂದಿರುವ ಮೇಲ್ವರ್ಗದವರ ಆಕ್ರಮಣದಿಂದ ರಕ್ಷಿಸುವ ಪ್ರಯತ್ನ ಮಾತ್ರ.

ಮೀಸಲಾತಿ ವಿರೋಧಿಸುವವರು ಇದರಿಂದ ಯೋಗ್ಯತೆಗೆ ತಿರಸ್ಕಾರ ಮಾಡಿದಂತೆ ಆಗುತ್ತದೆ, ಇದು ಜಾತಿಯತೆಯನ್ನು ಹೆಚ್ಚಿಸುತ್ತದೆ. ಮೀಸಲಾತಿಗೆ ಆರ್ಥಿಕ ಆಧಾರ ಮಾತ್ರವೇ ಏಕಿರಬಾರದು ಎಂದು ಪ್ರಶ್ನಿಸುತ್ತಾರೆ. ಯೋಗ್ಯತೆಯ ಪ್ರಶ್ನೆ ಪರಿಶೀಲಿಸೋಣ. ಉದ್ಯೋಗದ ಸಮಾನಾವಕಾಶ ಇರದಿದ್ದಲ್ಲಿ ಯೋಗ್ಯತೆಯನ್ನು ಹೋಲಿಸಲು ಸಾಧ್ಯವೆ? ಉದಾಹರಣೆಗೆ ಹರಿಜನರ-ಗಿರಿಜನ ವಿಭಾಗಗಳಲ್ಲಿ ಹಿಂದುಳಿದ ಜಾತಿಗಳ ಪ್ರಾಥಮಿಕ ಶಿಕ್ಷಣ ಮುಗಿಸುವಷ್ಟರಲ್ಲಿ ಶೇ. 15 ರಷ್ಟು ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯ ಚೌಕಟ್ಟಿನಿಂದ ಹೋಗುತ್ತಾರೆ. ಫೇಲಾದ ಕಾರಣದಿಂದಲ್ಲ ಆರ್ಥಿಕ ಕಾರಣಗಳಿಗಾಗಿ ಇದನ್ನು Dropouts ಎನ್ನುತ್ತಾರೆ. ಹೀಗೆ ಶಾಲೆಗೆ ಹೋಗಲಾರದವರು ಉಳ್ಳವರ ಹೊಲಗದ್ದೆಗಳಲ್ಲಿ ದುಡಿಯುವ ಕೃಷಿ ಕಾರ್ಮಿಕರಾಗುತ್ತಾರೆ. ದನ ಕಾಯುವ, ಹೋಟೆಲುಗಳಲ್ಲಿ ಕಪ್ಪು ಬಸಿ ತೊಳೆಯುವ ಬಾಲ ಕಾರ್ಮಿಕರಾಗುತ್ತಾರೆ. ಇವರ ಯೋಗ್ಯತೆಯನ್ನು ಅರ್ಹತೆಯನ್ನು ಅಳೆಯುವ ಸಾಧನ ಯಾವುದು?

ಇಷ್ಟೆ ಅಲ್ಲ ಶಿಕ್ಷಣದ ಒಳಗೇ ಜಾತಿಯತೆ ಇರುವ ನಮ್ಮ ಸಮಾಜದಲ್ಲಿ ಯೋಗ್ಯತೆಯನ್ನು, ಮೆರಿಟನ್ನು ಹೋಲಿಸುವ ನಿಷ್ಪಕ್ಷಪಾತ ಸಾಧನ ಯಾವುದು?

ಮೀಸಲಾತಿ ಜಾತಿಯತೆಯನನು ಗಮಟಿನಿಸುತ್ತದೆ ಎಂದು ವಾದಿಸುವವರು ಗಮನಿಸಬೇಕಾದ ಸಂಗತಿಯೆಂದರೆ ಮೀಸಲಾತಿ ಇರುವುದು ಸರಕಾರದ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಮಾತ್ರವೇ ಖಾಸಗೀ ರಂಗದಲ್ಲಿ ಮೀಸಲಾತಿ ಇಲ್ಲ, ಅಲ್ಲಿ ಈಗಲೂ ಜಾತಿಯ ಪ್ರಭಾವ ಸರ್ಕಾರಿ ಸಂಸ್ಥೆಗಳಿಗಿಂತಲೂ ತೀವ್ರವಾಗಿಯೇ ಇದೆ.

ಮೀಸಲಾತಿ ಬೇಕು-ಬೇಡ

ಮೀಸಲಾತಿ ಬೇಕು ಎಂದು ಕೇಳುವವರು ನಿಜವಾಗಿಯೂ ಕೇಳುತ್ತಿರುವುದೇನು?

ನಮಗೆ ಶಿಕ್ಷಣ ಬೇಕು. ಉದ್ಯೋಗ ಒದಗಿಸುವ ಶಿಕ್ಷಣ ಬೇಕು. ನಮಗೆ ಉದ್ಯೋಗ ಬೇಕು ಎಂದು.

ಮೀಸಲಾತಿ ಬೇಡ ಎಂದು ಹೇಳುವವರು, ಕೂಡ ನಿಜವಾಗಿ ಕೇಳುತ್ತಿರುವುದೇನು, ನಮಗೆ ಶಿಕ್ಷಣ ಸೌಲಭ್ಯಗಳು ಬೇಕು ನಮಗೆ ಉದ್ಯೋಗವಾಕಾಶ ಕಡಿಮೆಯಾಗುತ್ತಿವೆ, ನಮಗೆ ಉದ್ಯೋಗ ಬೇಕು ಎಂದೇ

ಹಾಗಾದರೆ ಬೇಕು ನಮಗೆಲ್ಲರಿಗೂ ಶಿಕ್ಷಣ- ನಮಗೆಲ್ಲರಿಗೂ ಉದ್ಯೋಗಬೇಕು ಎಂಬ ಬೃಹತ್ ಪ್ರಜಾಸತ್ತಾತ್ಮಕ ಚಳುವಳಿಯಾಗಿ ಹೊರಹೊಮ್ಮಲು ಇರುವ ಅಡ್ಡಿ ಏನು?

ಭಾರತದ ಬಂಡವಾಳಶಾಹಿ ಆಳುವ ವರ್ಗಗಳು ಮುಖ್ಯವಾಗಿ ಕಾಂಗ್ರೆಸ್‌ಪಕ್ಷ ಅದು ಇಂದಿರಾಗಾಂಧಿಯಿರಲಿ, ದೇವರಾಜ್ ಅರಸ್ ಇರಲಿ ಹರಿಜನರಲ್ಲಿ ಹಾಗೂ ಹಿಂದುಳಿದ ಜಾತಿಗಳ ಜನರಲ್ಲಿ ನಿಮಗೆ ಮೀಸಲಾತಿ ಕೊಟ್ಟಿದ್ದೇವೆ, ಕೊಡುತ್ತೇವೆ. ಹೆಚ್ಚಿಸುತ್ತೇವೆ. ನಿಮಗೆ ಉದ್ಯೋಗ ಸಿಗಲು ಇನ್ನೇನೂ ಬೇಡ, ಇಷ್ಟು ಸಾಕು ನಿಮಗೆ ಸ್ವರ್ಗವೇ ಸಿಗುತ್ತದೆ. ನಮಗೆ ಓಟ್ ಹಾಕಿದರೆ ಸಾಕು- ಎಂಬ ಭ್ರಮೆ ಹುಟ್ಟಿಸಿದರಿಂದ.

ಉದ್ಯೋಗವಾಕಾಶಗಳು ಕಡಿಮೆಯಾಗುತ್ತಿದ್ದರೂ ನಮಗೆ ಉದ್ಯೋಗ ಸಿಕ್ಕಿಯೇ ಸಿಗುತ್ತದೆ. ಮೀಸಲಾತಿಯೊಂದಿದ್ದರೆ ಸಾಕು. ನಮಗೆ ಉದ್ಯೋಗ ಸಿಕ್ಕರೆ ಸಾಕು. ಉಳಿದವರ ಗೊಡವೆ ನಮಗೇನು? ಆ ಜಾತಿಗಳಲ್ಲಿಯೂ ವಿದ್ಯಾವಂತರಾದ ನಮಗೆ ಉದ್ಯೋಗ ಸಿಕ್ಕರೆ ಕೂಲಿಕಾರ, ರೈತರಾಗಿರುವ ನಮ್ಮ ಬಂಧುಗಳ ಗೊಡವೆ ಏಕೆ? ಎಂಬ ಅವಕಾಶವಾದೀ ಚಿಂತನೆ ಮೀಸಲಾತಿ ಬೇಕು. ನಮಗೂ ಮೀಸಲಾತಿ ಬೇಕು ಎಂದು ಕೇಳುತ್ತಿರುವ ವಿವಿಧ ಜಾತೀಯ ಸಂಘಗಳು ಹಾಗೂ ಅವರ ನಾಯಕರಲ್ಲಿ ಮೊಳೆತಿರುವುದರಿದ ಅದೇ ನಾಣ್ಯದ ಇನ್ನೊಂದು ಮುಖವಾಗಿ ಉದ್ಯೋಗಾವಕಾಶಗಳು ಕಡಿಮೆ ಯಾಗುತ್ತಿದೆ, ನಮಗೆ ಉದ್ಯೋಗ ಸಿಕ್ಕುತ್ತಿತ್ತು ಎಂಬ ಭಾವನೆ -- ರಾಜಕೀಯದಲ್ಲಿ ಅಧಿಕಾರಿವಲಯದಲ್ಲಿ ಹೆಚ್ಚು ಪ್ರಭಾವಶಾಲಿಗಳಾಗಿರುವ ಮುಖ್ಯ ಹುದ್ದೆಗಳನ್ನು ಹಿಡಿದಿರುವ "ನಮ್ಮ"ವರನ್ನು ಹಿಡಿದು ನಾವು ಹೇಗೂ ಉದ್ಯೋಗ ಪಡೆಯುತ್ತಿದ್ದೆವು, ಮೀಸಲಾತಿಯೊಂದೇ ನಮಗೆ ಅಡ್ಡಿ ಎಂಬ ಮೇಲ್ಜಾತಿಯ ನಿರುದ್ಯೋಗಿಗಳ ಭಾವನೆಯಿಂದ ಎಲ್ಲಕ್ಕಿಂತ ಹೆಚ್ಚಾಗಿ ಭಾರತದ ಆಳುವ ವರ್ಗಗಳು- ಭೂಮಿ ಬೇಕು-ಉದ್ಯೋಗ ಬೇಕು ಎಂಬ ಕೂಗನ್ನು ತಪ್ಪಿಸಲು ಮೀಸಲಾತಿಯೊಂದಿಗೆ ಆಟವಾಡುತ್ತಿರುವುದರಿಂದ ಪ್ರಜಾಸತ್ತಾತ್ಮಕ ಚಳುವಳಿಯಾಗಿ ಬೆಳೆಯುವುದಕ್ಕೆ ಅಡ್ಡಿಯಾಗಿದೆ.

ಎರಡೂ ಜನವಿಭಾಗಗಳಿಗೂ ತಮ್ಮ ಬೇಡಿಕೆಯ ಹಿಂದಿನ ನಿಜವಾದ ಬೇಡಿಕೆ ಉದ್ಯೋಗ ಬೇಕು ಎಂಬ ಮೂಲ ಬೇಡಿಕೆಯಬಗ್ಗೆ ಅರಿವುಮೂಡಿಸಲು ಪಾಳೆಯಗಾರಿ ಹಾಗೂ ಬಂಡವಾಳಶಾಹಿ ಶಕ್ತಿಗಳ ಹೂಟಗಳನ್ನು ಹೊರಗೆಳೆಯಲು ತೀವ್ರ ಪ್ರಯತ್ನ ಮಾಡುತ್ತಾ ಹೋರಾಟ ಮುಂದೆ ಸಾಗಬೇಕು.

ಆಗಸ್ಟ್ 12, 1990

ಇಂಗ್ಲೀಷ್ ಶಿಕ್ಷಣಕ್ಕಾಗಿ ಈದಾವಂತವೇಕೆ?

ಶಾಲಾ ಕಾಲೇಜುಗಳು ಆರಂಭವಾಗುತ್ತಿರುವ ಈ ದಿನಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಎರಡು ಸಮಸ್ಯೆಗಳ ಬಗ್ಗೆ ಪ್ರತಿಭಟನೆ ಎದ್ದಿದೆ. ಕ್ಯಾಪಿಟೇಷನ್ ನಿರ್ಮೂಲ ಮಾಡುತ್ತೇವೆ, ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಅನುಮತಿ ನೀಡುವುದೇ ಇಲ್ಲ ಎಂದು ಜನತಾ ಸರ್ಕಾರದ "ನುಡಿಯೊಂದು ನಡೆ ಬೇರೊಂದು" ಎನ್ನುವ ಧೋರಣೆ ಜನರೆಲ್ಲರಿಗೂ ತಿಳಿಯುತ್ತಿದೆ - ಈ ಎರಡು ಪ್ರಶ್ನೆಗಳ ಬಗ್ಗೆ ಓದಿ.

ಇಂಗ್ಲೀಷ್ ಶಿಕ್ಷಣ ಮಾಧ್ಯಮದ ಶಾಲೆಗಳಿಗೆ ಅನುಮತಿ ನೀಡುವ ಜನತಾ ಸರ್ಕಾರದ ಯೋಚನೆ ಅವರ ಮಂತ್ರಿ ಮಂಡಲದೊಳಗೆ ಮಾತ್ರವಲ್ಲ ರಾಜ್ಯದಲ್ಲಿಯೂ ಚರ್ಚೆಗೆ ಮಾಡಿದೆ. ಈ ಸಮಯದಲ್ಲಿ ಪ.ಬಂಗಾಳದ ಕ್ರಮವೊಂದು ಅಲ್ಲಿದೊಡ್ಡ ಬೊಬ್ಬೆಗೆ ಹಾಗೂ ದೇಶದಲ್ಲಿ ಎಡರಂಗ ಸರ್ಕಾರದ ವಿರುದ್ಧ ಅಪಪ್ರಚಾರಕ್ಕೆ ಕಾರಣವಾಗಿದುದ್ದನ್ನು ನೆನಪಿಸಿಕೊಳ್ಳಬಹುದು. ಕರ್ನಾಟಕದಲ್ಲಿ ಇಂಗ್ಲೀಷ್ ಮಾಧ್ಯಮದ ಹಣ ಮಾಡುವ ಶಾಲೆಗಳಿಗೆ ಅನುಮತಿ ನೀಡುವ ಬಗ್ಗೆ ವಿರೋಧವೆದ್ದಿದ್ದರೆ, ಪ.ಬಂಗಾಳದಲ್ಲಿ ಪ್ರಾಥಮಿಕ ಶಾಲೆಯಿಂದ ಇಂಗ್ಲೀಷ್ ಭಾಷೆಯ ಕಡ್ಡಾಯ ಕಲಿಕೆಯನ್ನು ಹಿಂತೆಗೆದುಕೊಡದ್ದಕ್ಕಾಗಿ ಪ್ರತಿಭಟನೆ ಬಂದಿತ್ತು. ಈ ಸರ್ಕಾರ ಪ್ರಾಥಮಿಕ ಒಂದನೇ ತರಗತಿಗಿಂತ ಪೂರ್ವದಲ್ಲಿಯೇ ಇಂಗ್ಲೀಷ್ ಅನ್ನು ಮಾಧ್ಯಮವಾಗಿ ಹೇರುವುದಕ್ಕೆ ಪ್ರೋತ್ಸಾಹವಾದರೆ, ಅಲ್ಲಿ ಬುದ್ಧಿಜೀವಿಗಳ ಎಲ್ಲ ಪ್ರತಿಭಟನೆಯ ನಡುವೆಯೂ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಇಂಗ್ಲೀಷ್ ಕಲಿಕೆಯೇ ಬೇಡ ಎಂಬ ಜನಪರ ತೀರ್ಮಾನ.

ಕೇಂದ್ರ ಸರ್ಕಾರ 'ನೂತನ ಶಿಕ್ಷಣ ನೀತಿ'ಯನ್ನು ಇಂಗ್ಲೀಷ್ ಹಾಗೂ ಹಿಂದೀ ಮಾಧ್ಯಮವನ್ನು ಹೇರುವುದರ ಬಗ್ಗೆ ಎಡರಂಗ ಸರ್ಕಾರ ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೋಡಿ.

ಭಾಷಾ ನೀತಿ:

[ಹೊಸ ಶಿಕ್ಷಣ ನೀತಿಯ ಪ್ಯಾರ 1.7.1 ರ ಬಗ್ಗೆ]

ಮಗುವಿನ ಮಾತೃಭಾಷೆಯೇ ಶಿಕ್ಷಣದ ಎಲ್ಲಾ ಹಂತವಳಲ್ಲಿಯೂ ಶಿಕ್ಷಣ ಮಾಧ್ಯಮವಾಗಿರಬೇಕು. ಎಲ್ಲರಿಗೂ ಪ್ರವೇಶ ಲಭ್ಯವಿರುವ ಶಾಲೆಗಳ ಮೂಲಕ ಸಾರ್ವತ್ರಿಕ ಶಿಕ್ಷಣವನ್ನು ಸಾಧಿಸಬೇಕಾದರೆ, ಭಾರತ ಜನತೆಯ ಅಭಿವೃದ್ಧಿಯನ್ನು ಸಾಧಿಸಬೇಕಾದರೆ, ಮೇಲು ವರ್ಗ ಹಾಗೂ ಜನ ಸಾಮಾನ್ಯರನ್ನು ಒಟ್ಟಿಗೆ ತರಬೇಕಾದರೆ, ಶಿಕ್ಷಣದ ಗುಣಮಟ್ಟವನ್ನು ಎತ್ತರಿಸಬೇಕಾದರೆ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸಬೇಕಾದರೆ ಮಾತೃಭಾಷೆಯ ಮೂಲಕ ಶಿಕ್ಷಣ ಅತ್ಯಾವಶ್ಯ. ಪ್ರಾಥಮಿಕ ಮಟ್ಟದಲ್ಲಿ ಕೇವಲ ಒಂದೇ ಭಾಷೆ, ಮಾತೃ ಭಾಷೆಯನ್ನು ಮಾತ್ರ ಕಲಿಸಬೇಕು. ಈ ಕಲಿಕೆ ಹನ್ನೆರಡನೇ ವರ್ಷ (ಪಿ.ಯು.ಸಿ.) ರವರೆಗೆ ಮುಂದುವರೆಯಬೇಕು. ಇಂಗ್ಲೀಷನ್ನು ಕೇವಲ ಪ್ರೌಢಶಾಲಾ ಮಟ್ಟದಲ್ಲಿ ಮಾತ್ರ ಕಲಿಸಲಾರಂಭಿಸಬಹುದು.

"ಪಶ್ಚಿಮಬಂಗಾಳದಲ್ಲಿ ವಿದ್ಯಾರ್ಥಿಗಳಿಗೆ ಬಂಗಾಲಿ, ಹಿಂದಿ, ಉರ್ದು, ಒರಿಯಾ, ತಮಿಳು ಅಥವಾ ಇಂಗ್ಲೀಷ್ ಮಾಧ್ಯಮಗಳ ಮೂಲಕ ಶಿಕ್ಷಣ ನೀಡಲಾಗುತ್ತಿದೆ. ಪ್ರೌಢಶಾಲೆಯಲ್ಲಿ ಬಾರತದ 14 ಭಾಷೆಗಳಲ್ಲಿ ಯಾವುದನ್ನಾದರೂ ಮೊದಲ ಭಾಷೆಯನ್ನಾಗಿ ಕಲಿಯಲು ಅವಕಾಶವಿದೆ" ಎಂದಿದೆ.

ಪ್ರಾಥಮಿಕ ಶಿಕ್ಷಣದಲ್ಲಿ 5ನೇ ತರಗತಿಯಿಂದಲೇ ಆರಂಭವಾಗುವ ಇಂಗ್ಲೀಷ್ ಭಾಷೆಯ ಹೊರೆಯನ್ನು ತಪ್ಪಿಸಿ ಹಂತ ಹಂತವಾಗಿ ಹಿಂದೆಗೆಯುವ ಪ್ರಯತ್ನದಲ್ಲಿ ಈಗ 7 ನೇ ತರಗತಿಯಿಂದ ಮಾತ್ರ ಇಂಗ್ಲೀಷ್ ಭಾಷಾ ಕಲಿಕೆ ಆರಂಭಿಸಲಾಗುತ್ತಿದೆ.

ಇಷ್ಟು ಮಾತ್ರವಲ್ಲ ಪ. ಬಂಗಾಳದ ಎಲ್ಲಗಿರಿಜನರ ಭಾಷೆಗಳನ್ನು ಅಭಿವೃದ್ಧಿಪಡಿಸಿ, ಅವುಗಳಿಗೆ ಲಿಪಿ ರೂಪಿಸಿ ಮಾತೃಭಾಷೆಯಾಗಿ ಕಲಿಸುವ ಮೂಲಕ ಗಿರಿಜನರನ್ನೂ ಶಿಕ್ಷಣದಲ್ಲಿ ಒಳಗೊಳ್ಳಲು ಪ್ರಯತ್ನ ನಡೆಸಿದೆ.

ಪ್ರಾಥಮಿಕ ಹಂತದಲ್ಲಿಯೇ ಮನೆಯಲ್ಲಿ ಹಾಗೂ ಸುತ್ತ ಮುತ್ತ ತನ್ನಿಂದ ತಾನೆ ಮಾತನಾಡುವ ಭಾಷೆಗೆ ಬೆಲೆಕೊಡದೆ ಬೇರೊಂದು ಭಾಷೆಯನ್ನು ಕಲಿಸುವ ಪ್ರಯತ್ನದಿಂದಾಗಿ, ಈ ಪರಕೀಯ ಭಾಷೆಯ ಮೂಲಕ ಶಿಕ್ಷಣವನ್ನು ನೀಡುವುದರಿಂದಾಗಿ ಭಾಷೆಯ ಮೇಲೆ ಒತ್ತು ಬಿದ್ದು ವಿಷಯವನ್ನು ಗ್ರಹಿಸುವುದು ಹಿಂದುಳಿಯುತ್ತದೆ. ಹೂರಣವನ್ನು ಕಡೆಗಣಿಸಿ ಹೊರಸಿಪ್ಪೆಗೆ ಜೋತು ಬಿದ್ದಂತಾಗುತ್ತಿದೆ.

ಇಂಗ್ಲೀಷ್ ಮಾಧ್ಯಮದ ಶಿಕ್ಷಣಕ್ಕಾಗಿ ಪೋಷಕರೇ ಬಯಸುತ್ತಿದ್ದಾರೆ, ಪೋಷಕರಿಗೆ ಆಯ್ಕೆಯ ಸ್ವಾತಂತ್ರ್ಯವಿರಬೇಕು ಎಂಬುದೊಂದು ವಾದ. "ಆಯ್ಕೆಯ ಸ್ವಾತಂತ್ರ್ಯ" ಎಂಬ ಈ ಭ್ರಮಾತ್ಮಕ ಕಲ್ಪನೆಯ ಅಡಿಯಲ್ಲಿ ಅನೇಕ ನಿಜವಾದ ಸ್ವಾತಂತ್ರ್ಯಗಳು ಹುದುಗಿಹೋಗಿವೆ. ಈ "ಆಯ್ಕೆ ಯಾರದು?" ನಿಜವಾಗಿ ಪೋಷಕರ ಆಯ್ಕೆಯೋ? ಅಥವಾ ಈ ನಮ್ಮ ವರ್ಗ ಸಮಾಜ ಬಂಡವಾಳಶಾಹಿ ಸಮಾಜ ಅವರ ಮೇಲೆ ಹೇರಿದೆಯೇ? ಎಲ್ಲ ಪೋಷಕರೂ ತಮ್ಮ ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಬೇಕು ಎಂದು ಬಯಸುವರೇ? ಶಿಕ್ಷಣಕ್ಕೂ ಉದ್ಯೋಗಕ್ಕೂ ಇರುವ ಗಳಸ್ಯ-ಕಂಠಸ್ಯ ಸಂಬಂಧದಿಂದ ಇಂಗ್ಲೀಷಿಲ್ಲದೆ ಉದ್ಯೋಗವಿಲ್ಲ, ಹೆಚ್ಚು ಉದ್ಯೋಗಾವಕಾಶಗಳಿರುವ ಬಿ.ಇ., ಎಂ.ಬಿ.ಬಿ.ಎಸ್., ಡಿಪ್ಲೋಮಾ ಇತ್ಯಾದಿ ತಾಂತ್ರಿಕ ಶಿಕ್ಷಣವಿಲ್ಲ. ಅಷ್ಟೇ ಏಕೆ, ಒಂದು ಕೈಗಾರಿಕೆಯಲ್ಲಿ ಸಾಮಾನ್ಯ ಕಾರ್ಮಿಕನಾಗಬೇಕಾದರೂ ಕೈಗಾರಿಕಾ ತರಬೇತಿ ಇಂಗ್ಲೀಷಿನಲ್ಲಿಯೇ. ಇಂತಹ ಅವಸ್ಥೆಯಿರುವಾಗ ಯಾವ ತಾಯಿ ತಂದೆ ತಾನೇ ಇಂಗ್ಲೀಷ್ ಶಿಕ್ಷಣ ಬಯಸದಿರಲು ಸಾಧ್ಯ? ಸರ್ಕಾರದ ಯಾವುದೇ ಹುದ್ದೆ (ಜವಾನನ ಹುದ್ದೆ ಹೊರತುಪಡಿಸಿ) ಪಡೆಯುವುದಕ್ಕೂ ನಂತರ ಉತ್ತಮವಾಗಿ ಕೆಲಸ ನಿರ್ವಹಿಸುವುದಕ್ಕೂ ಇಂಗ್ಲೀಷ್ ಜ್ಞಾನವಿಲ್ಲದೆ ಸಾಧ್ಯವಿಲ್ಲ. ಎರಡನೇ ದರ್ಜೆ ಗುಮಾಸ್ತರ ನೇಮಕಾತಿಗೂ ಇಂಗ್ಲೀಷ್‌ನಲ್ಲಿ ಪರೀಕ್ಷೆ ಪಾಸಾದರೇ ಉದ್ಯೋಗ ಎನ್ನುವ ವಾತಾವರಣವಿದ್ದರೆ ಮತ್ತೀನ್ನೇನು ಮಾಡಲು ಸಾಧ್ಯ? ಇನ್ನೂ ಖಾಸಗಿ ಉದ್ಯಮಗಳ ವಿಷಯಕ್ಕೆ ಬಂದರೆ ಪಟಪಟನೆ ಎರಡು ಮಾತು ಇಂಗ್ಲೀಷ್ ಉದುರಿಸಿದರೆ ಸಾಕು ಮೊದಲ ಮಣೆ, ಇಲ್ಲವಾದರೆ ಕಬ್ಬಿಣ ಎತ್ತುವ ಕೂಲಿ ಕೆಲಸವೇ ಎಂದರೆ ಮತ್ತೇಕೆ ಕನ್ನಡ ಮಾಧ್ಯಮದ ಬಗ್ಗೆ ಜನರು ಆಸಕ್ತಿ ತೋರಿಸಬೇಕು?

ಎಲ್ಲ ಹಂತಗಳಲ್ಲಿ ಕನ್ನಡವನ್ನು ಆಡಳಿತ ಭಾಷೆ ಮಾಡದ, ತಾಂತ್ರಿಕ ಮೊದಲಾದ ಉದ್ಯೋಗ ಪರ ಶಿಕ್ಷಣದಲ್ಲಿ ಕನ್ನಡ ತರದ ಸರ್ಕಾರವಿರುವಾಗ ಪೋಷಕರ ಆಯ್ಕೆಯ ಸ್ವಾತಂತ್ರ್ಯ ಎಂಬ ಮಾತಿಗೆ ಅರ್ಥವೇನು? ಊಟ ಮಾಡಲು ಹಣವಿಲ್ಲದಿದ್ದರೆ ಹಸಿವಿನಿಂದಿರುವ ಸ್ವಾತಂತ್ರ್ಯ ಕನ್ನಡಕ ಕೊಳ್ಳಲು ಹಣವಿಲ್ಲದಿದ್ದರೆ ಕುರುಡಾಗಿಯೆ ಇರುವ ಸ್ವಾತಂತ್ರ್ಯದಂತೆಯೇ ಇಂಗ್ಲೀಷ್ ಕಲಿಕೆ ಇಲ್ಲದಿದ್ದರೆ ನಿರುದ್ಯೋಗಿಯಾಗಿಯೇ ಇರಬಹುದಾದ ಸ್ವಾತಂತ್ರ್ಯದಂತೆಯೇ ಪೋಷಕರ ಆಯ್ಕೆಯ ಸ್ವಾತಂತ್ರ್ಯವೂ ಕೂಡ. ಪೋಷಕರ ಮೇಲೆ ಒತ್ತಡ ಹಾಕುವುದು ನಂತರ ಪೋಷಕರಿಂದ ಒತ್ತಡ ಬರುತ್ತಿದೆ ಎಂದು ಹೇಳುವುದು.

ಜುಲೈ 5, 1987